ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

# ‘ಸ್ಮಶಾನಕ್ಕೆ ಜಾಗ ಕೊಡದಿದ್ದರೆ ಕ್ರಮ’

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ಸ್ಮಶಾನಕ್ಕೆ ಜಾಗ ಇಲ್ಲದ ಗ್ರಾಮ ಮತ್ತು ಪಟ್ಟಣ ಪ್ರದೇಶಗಳಿಗೆ ಜಮೀನು ಒದಗಿಸುವಂತೆ ಸೂಚಿಸಿರುವ ಆದೇಶ ಪಾಲಿಸದ ರಾಜ್ಯ ಸರ್ಕಾರವನ್ನು ಹೈಕೋರ್ಟ್ ಮತ್ತೊಮ್ಮೆ ತರಾಟೆಗೆ ತೆಗೆದುಕೊಂಡಿದೆ.

ನಗರದ ಮೊಹಮ್ಮದ್ ಇಕ್ಬಾಲ್ ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ಮತ್ತು ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಸರ್ಕಾರದ ವಿಳಂಬ ಧೋರಣೆಗೆ ಬೇಸರ ವ್ಯಕ್ತಪಡಿಸಿದ ನ್ಯಾಯಮೂರ್ತಿ ಬಿ. ವೀರಪ್ಪ, ‘ಸಮರೋಪಾದಿಯಲ್ಲಿ ಸ್ಮಶಾನಕ್ಕೆ ಜಾಗ ಕಲ್ಪಿಸುವ ಕೆಲಸ ಮಾಡಿದರೆ ಸರ್ಕಾರಕ್ಕೆ ಪರೋಕ್ಷವಾಗಿ ಅನುಕೂಲವಾಗುತ್ತದೆ. ಒಂದು ವೇಳೆ ಚುನಾವಣೆ ನೀತಿ ಸಂಹಿತೆ ಜಾರಿಯಾದರೆ ಇದು ಕಷ್ಟವಾಗುತ್ತದೆ’ ಎಂದು ಹೇಳಿದರು.

ವಿಚಾರಣೆ ವೇಳೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ಆರ್. ಸುಬ್ರಹ್ಮಣ್ಯ ‘ಬಹಳಷ್ಟು ಕಡೆ ಸ್ಮಶಾನಕ್ಕೆ ಈಗಾಗಲೇ ಜಾಗ ನೀಡಲಾಗಿದೆ. ಕೆಲವೆಡೆ ಸರ್ಕಾರಿ ಜಮೀನು ಲಭ್ಯವಿಲ್ಲ. ಖರಾಬು ಭೂಮಿಯಿದ್ದರೂ ಅದನ್ನು ನೀಡಲಾಗದು. ಭೂಮಿ ಖರೀದಿ ಮಾಡಿ ಸ್ಮಶಾನಕ್ಕೆ ಜಾಗ ಒದಗಿಸಬೇಕಿದೆ. ಹಾಗಾಗಿ, ಅರ್ಜಿ ಸಂಬಂಧ ಹೈಕೋರ್ಟ್ ನೀಡಿರುವ ಆದೇಶ ಪಾಲನೆಗೆ ಇನ್ನಷ್ಟು ಕಾಲಾವಕಾಶ ನೀಡಬೇಕು’ ಎಂದು ಕೋರಿದರು.

ಇದಕ್ಕೆ ತೀವ್ರ ಅತೃಪ್ತಿ ವ್ಯಕ್ತಪಡಿಸಿದ ವೀರಪ್ಪ ಅವರು, ‘ನ್ಯಾಯಾಲಯ ಯಾವುದೇ ಅಧಿಕಾರಿ ಅಥವಾ ಸರ್ಕಾರದ ವಿರುದ್ಧವಿಲ್ಲ. ನಮಗೆ ಯಾರ ಮೇಲೆ ಸಿಟ್ಟೂ ಇಲ್ಲ. ಕೋರ್ಟ್ ಆದೇಶ ಉಲ್ಲಂಘಿಸಿದರೆ ಸಹಿಸಲಾಗದು’ ಎಂದರು.

‘ಸ್ಮಶಾನಕ್ಕೆ ಜಾಗ ಒದಗಿಸಲು ಆರು ತಿಂಗಳು ಸಾಕಾಗುವುದಿಲ್ಲ ಎನ್ನುವುದಾದರೆ ಆದೇಶ ಪ್ರಕಟವಾದ ದಿನವೇ ಹೆಚ್ಚಿನ ಸಮಯವನ್ನು ಸರ್ಕಾರ ಕೋರಬಹುದಿತ್ತು. ನ್ಯಾಯಾಂಗ ನಿಂದನೆ ಪ್ರಕರಣ ದಾಖಲಾದ ನಂತರ ಸಬೂಬು ಹೇಳಿ ಕಾಲಾವಕಾಶ ಕೋರಿದರೆ ಒಪ್ಪಲಾಗದು. ಅಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸಲಾಗುವುದು’ ಎಂದು ಎಚ್ಚರಿಸಿದರು.

‘ನಾನೂ 16 ವರ್ಷ ಸರ್ಕಾರಿ ವಕೀಲನಾಗಿ ಕೆಲಸ ಮಾಡಿದ್ದೇನೆ. ಅಧಿಕಾರಿಗಳು ಹೇಗೆ ಕೆಲಸ ಮಾಡುತ್ತಾರೆ ಎಂಬುದು ಗೊತ್ತಿದೆ. ಅಧಿಕಾರಿಗಳು ಮನಸ್ಸು ಮಾಡಿದರೆ ಕೆಲಸ ತ್ವರಿತವಾಗಿ ಆಗುತ್ತದೆ. ಆದರೆ, ಮನಸ್ಸೇ ಮಾಡುವುದಿಲ್ಲ. ಜೈಲಿಗೆ ಕಳುಹಿಸಲಾಗುವುದು ಎಂದಾಗಷ್ಟೇ ಮನಸ್ಸು ಮಾಡುತ್ತಾರೆ’ ಎಂದರು.

‘ರಾಜ್ಯದಲ್ಲಿ ಎಲ್ಲೆಲ್ಲಿ ಸ್ಮಶಾನಕ್ಕೆ ಜಾಗ ಕಲ್ಪಿಸಲಾಗಿದೆ ಎಂಬ ಬಗ್ಗೆ ಎರಡು ವಾರಗಳಲ್ಲಿ ವರದಿ ಸಲ್ಲಿಸಿ’ ಎಂದು ತಾಕೀತು ಮಾಡಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.



# ಬೇಡಜಂಗಮ ಪ್ರಮಾಣಪತ್ರಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ



‘ಸತ್ಯ ಪ್ರತಿಪಾದನಾ ಸತ್ಯಾಗ್ರಹ’ದಲ್ಲಿ ಪಾಲ್ಗೊಂಡಿದ್ದ ಬೇಡ ಜಂಗಮ ಸಮುದಾಯದವರು. ಅಖಿಲ ಕರ್ನಾಟಕ ಬೇಡಜಂಗಮ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಬಿ.ಡಿ. ಹಿರೇಮಠ ಹಾಗೂ ಮಠಾಧೀಶರು ಇದ್ದರು –ಪ್ರಜಾವಾಣಿ ಚಿತ್ರ

**ಬೆಂಗಳೂರು:** ಸಮುದಾಯಕ್ಕೆ ಮೀಸಲಾತಿ ಸೌಲಭ್ಯ ಕಲ್ಪಿಸುವಂತೆ ಒತ್ತಾಯಿಸಿ ಕರ್ನಾಟಕ ಬೇಡಜಂಗಮ ಸಂಘಟನೆಗಳ ಒಕ್ಕೂಟದ ವತಿಯಿಂದ ಗುರುವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ‘ಸತ್ಯ ಪ್ರತಿಪಾದನಾ ಸತ್ಯಾಗ್ರಹ’ ನಡೆಯಿತು.

‘ಬೇಡಜಂಗಮ ಸಮುದಾಯದ ಸಾಂವಿಧಾನಿಕ ಹಾಗೂ ಕಾನೂನುಬದ್ಧ ಹಕ್ಕುಗಳಿಗೆ ಧಕ್ಕೆಯಾಗುತ್ತಿದೆ. ನಮ್ಮ ಕುಲವನ್ನೇ ನಾಶಪಡಿಸಲು ವಿಧಾನಮಂಡಲದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ಕಲ್ಯಾಣ ಸಮಿತಿಯ ಕೆಲವರು ಶಾಸಕರು ಪ್ರಯತ್ನಿಸಿದ್ದಾರೆ. ಹೀಗಾಗಿ, ಸತ್ಯ ಪ್ರತಿಪಾದನೆಗಾಗಿ ಈ ಹೋರಾಟ ಮಾಡಲಾಗುತ್ತಿದೆ’ ಎಂದು ಒಕ್ಕೂಟದ ಅಧ್ಯಕ್ಷ ಬಿ.ಡಿ. ಹಿರೇಮಠ ತಿಳಿಸಿದರು.

‘ಬೇಡ ಜಂಗಮ ಪ್ರಮಾಣಪತ್ರ ಪಡೆಯುವುದು ಕಾನೂನು ಬದ್ಧ ಹಕ್ಕು. ಆದರೆ, ಕಲ್ಯಾಣ ಸಮಿತಿಗೆ ಅಧಿಕಾರ ಇಲ್ಲದಿದ್ದರೂ ಪ್ರಮಾಣಪತ್ರದ ಬಗ್ಗೆ ನಿರ್ಧಾರಗಳನ್ನು ಕೈಗೊಂಡು ನಮ್ಮ ಸಮುದಾಯವನ್ನು ಸರ್ಕಾರದ ಸೌಲಭ್ಯಗಳಿಂದ ವಂಚಿತರನ್ನಾಗಿ ಮಾಡುತ್ತಿದೆ. ಬೇಡ ಜಂಗಮಕ್ಕೆ ಸಂಬಂಧಿಸಿದಂತೆ ಸುಳ್ಳು ಪ್ರಮಾಣಪತ್ರ ಪಡೆಯಲಾಗುತ್ತಿದೆ ಎಂದು ಸಮಿತಿ ಪ್ರತಿಪಾದಿಸುತ್ತಿದೆ. ಪ್ರಮಾಣಪತ್ರ ಪಡೆದವರು ಮತ್ತು ನೀಡಿದವರ ಮೇಲೆ ಮೊಕದ್ದಮೆಗಳನ್ನು ಹಾಕುವ ಮೂಲಕ ಸರ್ಕಾರದ ಸುತ್ತೋಲೆ ಮತ್ತು ನ್ಯಾಯಾಲಯದ ತೀರ್ಪುಗಳನ್ನು ಉಲ್ಲಂಘಿಸಲಾಗುತ್ತಿದೆ’ ಎಂದು ದೂರಿದರು.

‘ಸಮುದಾಯವು ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಿಂದುಳಿದಿದೆ. ನಮ್ಮ ಹಕ್ಕುಗಳನ್ನು ಮೊಟಕುಗೊಳಿಸುವ ಅಧಿಕಾರ ಜನಪ್ರತಿನಿಧಿಗಳಿಗೆ ಇಲ್ಲ. ಜಾತಿ ಪ್ರಮಾಣ ಪತ್ರಗಳನ್ನು ನಿಯಮಾನುಸಾರ ಸಂಬಂಧಪಟ್ಟ ತಾಲ್ಲೂಕು ತಹಶೀಲ್ದಾರ್ ಅವರ ಮೂಲಕವೇ ವಿಚಾರಣೆಗೆ ಒಳಪಟ್ಟು ಕ್ರಮಬದ್ಧವಾಗಿ ಪಡೆಯಲಾಗುತ್ತಿದೆ. ನಾವು ಇನ್ನೊಬ್ಬರ ಹಕ್ಕುಗಳನ್ನು ಕಸಿಯುತ್ತಿಲ್ಲ.’ ಎಂದರು.

**‘ಹೋರಾಟಗಾರರಿಗೆ ತಡೆ’:** ‘ಬೇಡ ಜಂಗಮ ಸಮಾವೇಶಕ್ಕೆ ರಾಜ್ಯದ ವಿವಿಧೆಡೆಯಿಂದ ಸಾವಿರಾರು ಮಂದಿ ಬೆಂಗಳೂರಿಗೆ ಆಗಮಿಸುತ್ತಿದ್ದರು. ಆದರೆ, ತುಮಕೂರಿನ ಶಿರಾ ಸೇರಿದಂತೆ ಎಲ್ಲ ಟೋಲ್‌ಗಳಲ್ಲಿ ಬಸ್‌ಗಳನ್ನು ತಡೆಹಿಡಿಯಲಾಯಿತು. ಈ ಮೂಲಕ ಸರ್ಕಾರ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನ ಮಾಡಿದೆ. ಆದರೆ, ನಮ್ಮ ಹೋರಾಟ ನಿರಂತರವಾಗಿ ನಡೆಯಲಿದೆ’ ಅವರು ದೂರಿದರು.

## ಪರಿಸರ ಸೇವೆ ಮಾಡುವವರ ವೆಬ್ ಸೀರೀಸ್ ನಿರ್ಮಾಣ: ಬೊಮ್ಮಾಯಿ

# ‘ತಿಮ್ಮಕ್ಕಗೆ ಸಚಿವರ ಸ್ಥಾನಮಾನ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸಾಲುಮರದ ತಿಮ್ಮಕ್ಕ ಅವರಿಗೆ ಪರಿಸರ ರಾಯಭಾರಿ ಗೌರವ ನೀಡುವ ಜೊತೆಗೆ ಸಚಿವರು ಹೊಂದಿರಬಹುದಾದ ಸ್ಥಾನಮಾನ ಕಲ್ಪಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಪ್ರಕಟಿಸಿದರು.

ಸಿದ್ಧಾರ್ಥ ಎಜುಕೇಷನ್ ಸೊಸೈಟಿ, ಸಾಲುಮರದ ತಿಮ್ಮಕ್ಕ ಇಂಟರ್‌ನ್ಯಾಷನಲ್ ಫೌಂಡೇಷನ್ ನಗರದಲ್ಲಿ ಆಯೋಜಿಸಿದ್ದ ಸಾಲುಮರದ ತಿಮ್ಮಕ್ಕ ಅವರ ಜನ್ಮದಿನಾಚರಣೆ, ‘ನ್ಯಾಷನಲ್ ಗ್ರೀನರಿ ಅವಾರ್ಡ್–2022’ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

‘ತಿಮ್ಮಕ್ಕ ಅವರು ಪರಿಸರ ಜಾಗೃತಿಗೆ ಹೊರ ರಾಜ್ಯಕ್ಕೆ ತೆರಳಿದರೆ ಸಂಪೂರ್ಣ ವೆಚ್ಚವನ್ನೂ ರಾಜ್ಯ ಸರ್ಕಾರವೇ ಭರಿಸಲಿದೆ. ತಿಮ್ಮಕ್ಕ ಅವರ ಮಾದರಿಯಲ್ಲೇ ಪರಿಸರ ಉಳಿಸಲು ಶ್ರಮಿಸುತ್ತಿರುವ ಸೇವಕರ ಕುರಿತು ವಾರ್ತಾ ಇಲಾಖೆಯಿಂದ ವೆಬ್ ಸೀರೀಸ್ ಹೊರತರಲಾಗುವುದು. ತಿಮ್ಮಕ್ಕ ಅವರ ಇಚ್ಛೆಯಂತೆ ಪರಿಸರ ಸಂರಕ್ಷಣೆಗೆ ಬೇಲೂರಿನಲ್ಲಿ 10 ಎಕರೆ ಜಾಗ ಮಂಜೂರು ಮಾಡಲಾಗುವುದು. ಅವರಿಗೆ ಬಿಡಿಎ ನೀಡಿರುವ ನಿವೇಶನದಲ್ಲಿ ಮನೆ ಕಟ್ಟಿ ಕೊಡಲಾಗುವುದು’ ಎಂದು ಭರವಸೆ ನೀಡಿದರು.

ಬೇಲೂರು ಕ್ಷೇತ್ರದ ಜೆಡಿಎಸ್ ಶಾಸಕ ಕೆ.ಎಸ್.ಲಿಂಗೇಶ್ ಮಾತನಾಡಿ, ’ತಿಮ್ಮಕ್ಕ ಅವರಿಗೆ ಸಂದಿರುವ ಪ್ರಶಸ್ತಿಗಳನ್ನು ಇಡಲು ವಸ್ತುಸಂಗ್ರಹಾಲಯ ನಿರ್ಮಿಸಬೇಕು. ಅವರ ಸ್ವಗ್ರಾಮದ ಅಭಿವೃದ್ಧಿಗೆ ₹ 2 ಕೋಟಿ ಅನುದಾನ ನೀಡಬೇಕು‘ ಎಂದು ಮನವಿ ಮಾಡಿದರಲ್ಲದೇ, ಏತನೀರಾವರಿ ಯೋಜನೆಗೆ ತಿಮ್ಮಕ್ಕ ಹೆಸರು ಇಡಲಾಗುವುದು ಎಂದರು.

ಕೊರಟಗೆರೆ ಶಾಸಕ ಜಿ.ಪರಮೇಶ್ವರ ಮಾತನಾಡಿ, ‘ತಿಮ್ಮಕ್ಕ ವಿಶ್ವಕ್ಕೆ ಮಾದರಿಯಾದ ಸೇವೆ ಮಾಡಿದ್ದಾರೆ. ವಿಶ್ವದಲ್ಲಿ ಶೇ 31 ಹಾಗೂ ಭಾರತದಲ್ಲಿ ಶೇ 21ರಷ್ಟು ಮಾತ್ರ ಹಸಿರು ಪರಿಸರವಿದೆ. ಹಸಿರು ಹೊದಿಕೆ ಮತ್ತಷ್ಟು ಹೆಚ್ಚಾಗಬೇಕು’ ಎಂದು ಹೇಳಿದರು.

ಫೌಂಡೇಷನ್ ಅಧ್ಯಕ್ಷ ಬಳ್ಳೂರು ಉಮೇಶ್ ಮಾತನಾಡಿ, ‘ತಿಮ್ಮಕ್ಕ ಬರೀ ಪರಿಸರ ಸಂರಕ್ಷಕಿ ಅಲ್ಲ. ಜಗತ್ತಿನಲ್ಲೇ ಮರಗಳೇ ಮಕ್ಕಳು ಎಂದ ಏಕೈಕ ತಾಯಿ’ ಎಂದರು.

ವಸತಿ ಸಚಿವ ವಿ.ಸೋಮಣ್ಣ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ, ಕಡೂರು ಅಯ್ಯಪ್ಪಸ್ವಾಮಿ ಕ್ಷೇತ್ರದ ಭದ್ರರಾಜ್ ಸ್ವಾಮೀಜಿ, ಶಿವಮೊಗ್ಗ ಭಾರತೀಯ ಅಯ್ಯಪ್ಪ ಸೇವಾ ಸಂಘದ ರಾಷ್ಟ್ರೀಯ ಗೌರವ ಅಧ್ಯಕ್ಷ ರೋಜಾ ಷಣ್ಮುಗಂ ಗುರುಸ್ವಾಮೀಜಿ, ಶಂಕರಾನಂದ ಸ್ವಾಮೀಜಿ, ಹಾಸನ ಜಿಲ್ಲಾಧಿಕಾರಿ ಆರ್.ಗಿರೀಶ್, ನಿವೃತ್ತ ಐಎಎಸ್ ಅಧಿಕಾರಿ ನಾಗಾಂಬಿಕಾ ದೇವಿ, ವೈದ್ಯೆ ರಜನಿ ಸುರೇಂದ್ರ ಭಟ್, ಅದಮ್ಯ ಚೇತನ ಟ್ರಸ್ಟ್‌ನ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್, ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಹಾಜರಿದ್ದರು.



ಬೆಂಗಳೂರಿನಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಡಾ.ಗೋವಿಂದ ಬಾಬು ಪೂಜಾರಿ, ಡಾ.ಚಂದ್ರಮೌಳಿ, ಸತ್ಯಮಾರ್ಗನಿ, ಡಾ.ಗುರುರಾಜ ಕರ್ಜಗಿ, ರಂಗನಾಥ್ ಭಾರಧ್ವಾಜ್ ಹಾಗೂ ಬೇಬಿ ಜ್ಞಾನ ಗುರುರಾಜ್ (ನಿಂತಿರುವ ಬಾಲಕಿ) ಅವರಿಗೆ ‘ಗ್ರೀನರಿ ಅವಾರ್ಡ್’ ಪ್ರದಾನ ಮಾಡಲಾಯಿತು –ಪ್ರಜಾವಾಣಿ ಚಿತ್ರ



111ನೇ ಜನ್ಮದಿನಾಚರಣೆ ಅಂಗವಾಗಿ ಸಾಲುಮರದ ತಿಮ್ಮಕ್ಕ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪುಷ್ಪವೃಷ್ಟಿ ಮೂಲಕ ಅಭಿನಂದಿಸಿದರು. ಎಂ.ಪಿ.ರೇಣುಕಾಚಾರ್ಯ, ವಿ.ಸೋಮಣ್ಣ, ಬಳ್ಳೂರು ಉಮೇಶ್ ಹಾಜರಿದ್ದರು

> **ಮನುಷ್ಯರ ದುರಾಸೆಗೆ ಪರಿಸರ ಬಲಿಯಾಗುತ್ತಿದೆ. 20 ವರ್ಷಗಳಿಂದ ಈಚೆಗೆ ಪರಿಸರ ನಾಶದ ಪ್ರಮಾಣ ಹೆಚ್ಚುತ್ತಿದೆ**
> **ಬಸವರಾಜ ಬೊಮ್ಮಾಯಿ**
> ಮುಖ್ಯಮಂತ್ರಿ

### ‘ಗ್ರೀನರಿ ಪ್ರಶಸ್ತಿ’ ಪುರಸ್ಕೃತರು

ಶಿಕ್ಷಣ ತಜ್ಞ ಡಾ.ಗುರುರಾಜ ಕರ್ಜಗಿ, ಗ್ರೀನ್ ಇಂಡಿಯಾ ಚಾಲೆಂಜ್ ಸ್ಥಾಪಕ ಸಂತೋಷ್ ಕುಮಾರ್, ಪರಿಸರ ಸಂರಕ್ಷಕಿ ಸತ್ಯಮಾರ್ಗನಿ, ಪತ್ರಕರ್ತ ರಂಗನಾಥ್ ಭಾರಧ್ವಾಜ್, ವೈದ್ಯ ಡಾ.ಚಂದ್ರಮೌಳಿ, ಸಮಾಜ ಸೇವಕ ಡಾ.ಗೋವಿಂದಬಾಬು ಪೂಜಾರಿ, ಆಸ್ಟ್ರೇಲಿಯಾದ ಕನ್ನಡ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸತೀಶ್ ಭದ್ರಣ್ಣ ಅವರ ಪರವಾಗಿ ನಾಗೇಶ್‌ಗೆ, ಚಿಕ್ಕಬಳ್ಳಾಪುರದ ಅಮರ್ ನಾಗೇಶ್ ರಾವ್, ಬಾಲಪ್ರತಿಭೆ ಜ್ಞಾನ ಗುರುರಾಜ್, ಪೊಲೀಸ್ ಇಲಾಖೆಯ ಕೆ.ಶಿವಕುಮಾರ್ ಅವರಿಗೆ ‘ಗ್ರೀನರಿ ಅವಾರ್ಡ್’ ಪ್ರದಾನ ಮಾಡಲಾಯಿತು.

## ಟೇಲರ್ ಕುಟುಂಬಕ್ಕೆ ₹50 ಲಕ್ಷ ಪರಿಹಾರ

**ಜೈಪುರ/ಉದಯಪುರ (ಪಿಟಿಐ):** ದುಷ್ಕರ್ಮಿಗಳಿಂದ ಕೊಲೆಯಾದ ಉದಯಪುರದ ಟೇಲರ್ ಕನ್ಹಯ್ಯ ಲಾಲ್ ಅವರ ಕುಟುಂಬದವರನ್ನು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಗುರುವಾರ ಭೇಟಿ ಮಾಡಿ ಸ್ವಾಂತನ ಹೇಳಿದ್ದಾರೆ. ಸರ್ಕಾರದ ವತಿಯಿಂದ ಸಂತ್ರಸ್ತ ಕುಟುಂಬಕ್ಕೆ ₹50 ಲಕ್ಷ ಪರಿಹಾರವನ್ನು ಅವರು ಘೋಷಿಸಿದ್ದಾರೆ.

ಉದಯಪುರದ ಸೆಕ್ಟರ್ 14ರಲ್ಲಿ ಇರುವ, ಕನ್ಹಯ್ಯ ಅವರ ಮನೆಗೆ ಮುಖ್ಯಮಂತ್ರಿಯ ಜತೆಗೆ, ಕಂದಾಯ ಸಚಿವ, ರಾಜ್ಯದ ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾ ನಿರ್ದೇಶಕರು ಭೇಟಿ ನೀಡಿದ್ದರು. ಕುಟುಂಬದ ಎಲ್ಲಾ ಸದಸ್ಯರ ಜತೆಗೆ ಮಾತನಾಡಿದ ಗೆಹಲೋತ್, ಅಗತ್ಯ ನೆರವಿನ ಭರವಸೆ ನೀಡಿದ್ದಾರೆ.

**‘ಉದ್ಯೋಗದ ಭರವಸೆ’:** ‘ಮುಖ್ಯಮಂತ್ರಿ ನಮಗೆ ಧೈರ್ಯ ಹೇಳಿದ್ದಾರೆ. ಸರ್ಕಾರಿ ಉದ್ಯೋಗದ ಭರವಸೆ ನೀಡಿದ್ದಾರೆ’ ಎಂದು ಮೃತ ಕನ್ಹಯ್ಯ ಅವರ ಮಗ ಹೇಳಿದ್ದಾರೆ.

ಇನ್ನಷ್ಟು ಸುದ್ದಿಗಳು 4, 10

## ಕಂಟೋನ್ಮೆಂಟ್–ಪಾಟರಿ ಟೌನ್ ಸುರಂಗ ನಿರ್ಮಾಣ ಪೂರ್ಣ


ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಮ್ಮ ಮೆಟ್ರೊ ಎರಡನೇ ಹಂತದ ಮತ್ತೊಂದು ಸುರಂಗ ಮಾರ್ಗವನ್ನು ಬಿಎಂಆರ್‌ಸಿಎಲ್(ಬೆಂಗಳೂರು ಮೆಟ್ರೊ ರೈಲು ನಿಗಮ) ಪೂರ್ಣಗೊಳಿಸಿದೆ.

ಕಂಟೋನ್ಮೆಂಟ್ ನಿಲ್ದಾಣದಿಂದ ಪಾಟರಿ ಟೌನ್ ನಡುವೆ 900 ಮೀಟರ್ ಸುರಂಗ ಕೊರೆದು ‘ಊರ್ಜಾ’ ಟಿಬಿಎಂ(ಟನಲ್ ಬೋರಿಂಗ್ ಮಷಿನ್) ಗುರುವಾರ ಹೊರಬಂದಿತು.

ಸುಮಾರು ಆರು ತಿಂಗಳಲ್ಲಿ ಈ ಕಾಮಗಾರಿಯನ್ನು ‘ಊರ್ಜಾ’ ಯಶಸ್ವಿಯಾಗಿ ಪೂರ್ಣಗೊಳಿಸಿದೆ. 2021ರ ಡಿಸೆಂಬರ್ 22ರಂದು ಕಂಟೋನ್ಮೆಂಟ್ ನಿಲ್ದಾಣದಿಂದ ಸುರಂಗ ಕೊರೆಯುವ ಕೆಲಸವನ್ನು ‘ಊರ್ಜಾ’ ಆರಂಭಿಸಿತ್ತು. ದಿನಕ್ಕೆ ಸುಮಾರು 5 ಮೀಟರ್ ಸುರಂಗವನ್ನು ಅದು ಕೊರೆದಿದೆ.

ಇದಕ್ಕೂ ಮೊದಲು 2020ರ ಜುಲೈನಲ್ಲಿ ಕಂಟೋನ್ಮೆಂಟ್ ಬಳಿ ನೆಲದಡಿ ಸೇರಿದ್ದ 'ಊರ್ಜಾ' ಯಂತ್ರ ಶಿವಾಜಿನಗರ ನಿಲ್ದಾಣದ ತನಕ 855 ಮೀಟರ್ ಸುರಂಗವನ್ನು ಕೊರೆದಿತ್ತು. 2021ರ ಸೆಪ್ಟೆಂಬರ್ 22ರಂದು ಹೊರಕ್ಕೆ ಬಂದಿತ್ತು. ಬಳಿಕ ಈ ಯಂತ್ರ ಡಿಸೆಂಬರ್ 22ರಂದು ಕಂಟೋನ್ಮೆಂಟ್ ನಿಲ್ದಾಣದ ಬಳಿ ನೆಲದಡಿ ಸೇರಿತ್ತು.




ಪಾಟರಿ ಟೌನ್ ಬಳಿ ಸುರಂಗದಿಂದ ಹೊರಬಂದ ‘ಊರ್ಜಾ’ ಟಿಬಿಎಂ

## ಹೈಕೋರ್ಟ್‌ಗೆ ಹಂಗಾಮಿ ಸಿಜೆ ಅಲೋಕ್ ಆರಾಧೆ

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಅವರು ಜುಲೈ 2ರಂದು ನಿವೃತ್ತಿಯಾಗುತ್ತಿದ್ದು, ಹಿರಿಯ ನ್ಯಾಯಮೂರ್ತಿ ಅಲೋಕ್ ಆರಾಧೆ ಅವರನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿಯನ್ನಾಗಿ ನೇಮಕ ಮಾಡಲಾಗಿದೆ.

ಈ ಕುರಿತು ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವಾಲಯ ಗುರುವಾರ ಅಧಿಸೂಚನೆ ಹೊರಡಿಸಿದೆ.

ಅಲೋಕ್ ಆರಾಧೆ 2009ರಲ್ಲಿ ಮಧ್ಯಪ್ರದೇಶ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. 2018ರ ನವೆಂಬರ್ 17ರಂದು ಕರ್ನಾಟಕ ಹೈಕೋರ್ಟ್‌ಗೆ ವರ್ಗಾವಣೆಯಾಗಿದ್ದರು.

## ನಿಷೇಧ ಆದೇಶ ಇಂದಿನಿಂದ ಜಾರಿ: ಕಟ್ಟುನಿಟ್ಟಿನ ಕ್ರಮ

# ಏಕಬಳಕೆ ಪ್ಲಾಸ್ಟಿಕ್ ಬಳಸಿದರೆ ದಂಡ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಏಕ ಬಳಕೆಯ ಪ್ಲಾಸ್ಟಿಕ್ ಬಳಸಿದರೆ ಜುಲೈ 1ರಿಂದಲೇ ದಂಡ ವಿಧಿಸಲಾಗುವುದು ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ತಿಳಿಸಿದೆ.

‘ದೇಶದಾದ್ಯಂತ ಜುಲೈ 1ರಿಂದ ಏಕ ಬಳಕೆಯ ಪ್ಲಾಸ್ಟಿಕ್ ನಿಷೇಧ ಆದೇಶ ಜಾರಿಯಾಗಲಿದೆ. ಕರ್ನಾಟಕದಲ್ಲಿ 2016ರಲ್ಲೇ ಈ ಬಗ್ಗೆ ನಿಯಮಗಳನ್ನು ರೂಪಿಸಿ ಏಕಬಳಕೆಯ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಲಾಗಿತ್ತು. ಆದರೆ, ಇತರ ರಾಜ್ಯಗಳಲ್ಲಿ ಬಳಕೆಗೆ ಅವಕಾಶ ಕಲ್ಪಿಸಿದ್ದರಿಂದ ಕರ್ನಾಟಕದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಿಲ್ಲ. ಆದರೆ, ಈ ಬಾರಿ ಕಟ್ಟುನಿಟ್ಟಾಗಿ ಜಾರಿಯಾಗಲಿದೆ’ ಎಂದು ಮಂಡಳಿಯ ಅಧ್ಯಕ್ಷ ಡಾ. ಶಾಂತ್ ಎ. ತಿಮ್ಮಯ್ಯ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಚಿಲ್ಲರೆ ವ್ಯಾಪಾರಿಗಳು ಈ ಪ್ಲಾಸ್ಟಿಕ್‌ಗಳನ್ನು ಬಳಸಿದರೆ ಮೊದಲ ಬಾರಿ ₹200, ಎರಡನೇ ಬಾರಿ ₹500 ಮತ್ತು ಮೂರನೇ ಬಾರಿ ₹1,000 ದಂಡ ವಿಧಿಸಲಾಗುವುದು. ಇದೇ ರೀತಿ ತಯಾರಕರಿಗೆ ಮೊದಲ ಬಾರಿ ₹ 5ಸಾವಿರ, ಎರಡನೇ ಬಾರಿಗೆ ₹10 ಸಾವಿರ ಮತ್ತು ಮೂರನೇ ಬಾರಿಗೆ ₹20 ಸಾವಿರ ದಂಡ ವಿಧಿಸಲಾಗುವುದು. ಜತೆಗೆ, ಉತ್ಪಾದನೆ ಮುಂದುವರಿಸಿದರೆ ಪ್ಲಾಸ್ಟಿಕ್‌ಗಳನ್ನು ವಶಪಡಿಸಿಕೊಳ್ಳುವ ಜತೆ ಘಟಕಗಳನ್ನು ಮುಚ್ಚಲು ಕ್ರಮಕ್ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

‘2021ರ ಆಗಸ್ಟ್ 12ರಂದು ನಿಷೇಧದ ಅಧಿಸೂಚನೆ ಹೊರಡಿಸಲಾಗಿತ್ತು. ಪರಿಸರ ಸ್ನೇಹಿ ಆಯ್ಕೆಗಳಿಗೆ ಬದಲಾಗಲು ಉದ್ಯಮಗಳಿಗೆ ಸಾಕಷ್ಟು ಸಮಯ ನೀಡಲಾಗಿತ್ತು. ನಿಷೇಧದ ಆದೇಶವನ್ನು ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಅನುಷ್ಠಾನಗೊಳಿಸುತ್ತಾರೆ. ಈ ಬಗ್ಗೆ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮಾರ್ಷಲ್‌ಗಳಿಗೆ ಹಾಗೂ ಇತರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗೆ ತರಬೇತಿ ನೀಡಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಪಂಚಾಯಿತಿಗಳ ಮೂಲಕ ಅರಿವು ಮೂಡಿಸುವ ಕ್ರಮಗಳನ್ನು ಕೈಗೊಳ್ಳಲಾಗಿದೆ’ ಎಂದು ವಿವರಿಸಿದರು.

‘ಕಳೆದ ಆರು ವರ್ಷಗಳಲ್ಲಿ ಮಾಲಿನ್ಯ ನಿಯಂತ್ರಣದ ನಿಯಮಗಳನ್ನು ಉಲ್ಲಂಘಿಸಿದ 104 ಘಟಕಗಳನ್ನು ಮುಚ್ಚಲು ನಿರ್ದೇಶನ ನೀಡಲಾಗಿದೆ. ಒಂಬತ್ತು ಘಟಕಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ’ ಎಂದರು.



ನಿಷೇಧಿಸಲಾಗಿರುವ ಏಕಬಳಕೆಯ ಪ್ಲಾಸ್ಟಿಕ್ ವಸ್ತುಗಳ ವಿವರಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹಿರಿಯ ಪರಿಸರ ಅಧಿಕಾರಿ ರಮೇಶ್ ಡಿ. ನಾಯಕ್, ಅಧ್ಯಕ್ಷ ಡಾ. ಶಾಂತ್ ಎ. ತಿಮ್ಮಯ್ಯ ಮತ್ತು ಹಿರಿಯ ಪರಿಸರ ಅಧಿಕಾರಿ ಸಯ್ಯದ್ ಖಾಜಾ ಮೊಹಿದ್ದೀನ್ ಅವರು ಬೆಂಗಳೂರಿನಲ್ಲಿ ಗುರುವಾರ ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

### ಮಂಡಳಿಯ ರಾಯಭಾರಿ ಯದುವೀರ

‘ಮೈಸೂರು ಸಂಸ್ಥಾನದ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ರಾಯಭಾರಿಯನ್ನಾಗಿ ನೇಮಿಸಲಾಗಿದೆ’ ಎಂದು ಡಾ. ಶಾಂತ್ ಎ. ತಿಮ್ಮಯ್ಯ ತಿಳಿಸಿದರು.

‘ಜೂನ್ 5ರಂದು ಈ ನೇಮಕ ಮಾಡಲಾಗಿದೆ. ಯದುವೀರ ಅವರು ಪರಿಸರ ಸಂರಕ್ಷಣೆ ಮತ್ತು ಪ್ಲಾಸ್ಟಿಕ್ ನಿಷೇಧದ ಕುರಿತು ಅರಿವು ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದ್ದಾರೆ’ ಎಂದು ತಿಳಿಸಿದರು.

### ಯಾವುದಕ್ಕೆ ನಿಷೇಧ?

ಪ್ಲಾಸ್ಟಿಕ್ ಕಡ್ಡಿಯ ಇಯರ್‌ಬಡ್ಸ್, ಪ್ಲಾಸ್ಟಿಕ್ ಕಡ್ಡಿಯ ಬಲೂನ್, ಪ್ಲಾಸ್ಟಿಕ್ ಧ್ವಜ, ಕ್ಯಾಂಡಿ ಕಡ್ಡಿ, ಐಸ್‌ಕ್ರೀಂ ಕಡ್ಡಿ, ಅಲಂಕಾರಕ್ಕೆ ಬಳಸುವ ಥರ್ಮೊಕೊಲ್, ಪ್ಲಾಸ್ಟಿಕ್ ತಟ್ಟೆ, ಲೋಟ, ಪ್ಲಾಸ್ಟಿಕ್ ಚಮಚ, ಸ್ಟ್ರಾ, ಟ್ರೇಗಳು, ಪ್ಯಾಕಿಂಗ್‌ಗೆ ಹಾಗೂ ಸಿಹಿತಿಂಡಿಗಳಿಗೆ ಸುತ್ತುವ ಹಾಳೆಗಳು, ಪ್ಲಾಸ್ಟಿಕ್‌ನ ಆಹ್ವಾನಪತ್ರಗಳು, ಸಿಗರೇಟ್ ಪ್ಯಾಕ್ ಮೇಲೆ ಸುತ್ತುವ ಸುತ್ತುವ ಹಾಳೆಗಳು, ಕ್ಯಾರಿ ಬ್ಯಾಗ್‌ಗಳು, ಪ್ಲಾಸ್ಟಿಕ್ ಬಂಟಿಂಗ್‌ಗಳು, ಪ್ಲಾಸ್ಟಿಕ್ ಫ್ಲೆಕ್ಸ್, ಡೈನಿಂಗ್ ಟೇಬಲ್ ಮೇಲೆ ಬಳಸುವ ಪ್ಲಾಸ್ಟಿಕ್ ಶೀಟಗಳು.

ಶುಕ್ರವಾರ, ಜುಲೈ 1, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 181 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ಕಿಟಕಿ ಬದಿಯ ಸೀಟಿನಲ್ಲಿ ಬೀಸಿದ ಶೀತಲ ಗಾಳಿ...



ಆಳ-ಅಗಲ

ದೇಶದ ಎಲ್ಲೆಲ್ಲೂ 'ಆಪರೇಷನ್ ಕಮಲ'

## ಇಂದು ವೈದ್ಯರ ದಿನಾಚರಣೆ

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 53,019 ▼ | 15,780 ▼ | ₹52,800 (ಬೆಂಗಳೂರು) ▲ | ₹61,100 (ಬೆಂಗಳೂರು) ▼ | 79.06 ▼ |



## ಒಳ ಪುಟಗಳು



## ಚಿನಕುರಳಿ

ಪ್ರಕಾಶ್ ಶೆಟ್ಟಿ




# ಶಿಂಧೆ ಮಹಾರಾಷ್ಟ್ರ ಸಿ.ಎಂ

## ಅಚ್ಚರಿಯ ನಿರ್ಧಾರ ಪ್ರಕಟಿಸಿದ ಬಿಜೆಪಿ: ಫಡಣವೀಸ್ ಉಪಮುಖ್ಯಮಂತ್ರಿ

ಮುಂಬೈ (ಪಿಟಿಐ): ಶಿವಸೇನಾದ ನಾಯಕ ಏಕನಾಥ ಶಿಂಧೆ ಅವರು ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿ ಗುರುವಾರ ರಾತ್ರಿ 7.30ರ ಹೊತ್ತಿಗೆ ಪ್ರಮಾಣವಚನ ಸ್ವೀಕರಿಸಿದ್ದಾರೆ. ಸರ್ಕಾರದಲ್ಲಿ ಭಾಗಿಯಾಗುವುದಿಲ್ಲ ಎಂದು ಮುಂಚೆ ಹೇಳಿದ್ದ ಮಾಜಿ ಮುಖ್ಯಮಂತ್ರಿ, ಬಿಜೆಪಿಯ ದೇವೇಂದ್ರ ಫಡಣವೀಸ್ ಅವರು ಉಪ ಮುಖ್ಯಮಂತ್ರಿಯಾಗಿದ್ದಾರೆ. ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವರು ರಾಜಭವನದಲ್ಲಿ ಪ್ರಮಾಣವಚನ ಬೋಧಿಸಿದರು.

ಶಿವಸೇನಾ ಸ್ಥಾಪಕ ಬಾಳಾ ಠಾಕ್ರೆ ಮತ್ತು ತಮ್ಮ ಮಾರ್ಗದರ್ಶಕರಾಗಿದ್ದ ಆನಂದ್ ದಿಘೆ ಅವರಿಗೆ ನಮನ ಸಲ್ಲಿಸಿದ ಬಳಿಕ ಶಿಂಧೆ ಪ್ರಮಾಣ ವಚನ ಸ್ವೀಕರಿಸಿದರು. ಬಾಳಾ ಠಾಕ್ರೆ ಮತ್ತು ದಿಘೆ ಅವರ ಕುರಿತ ಘೋಷಣೆಗಳನ್ನು ಶಿಂಧೆ ಹಿಂಬಾಲಕರು ಕೂಗಿದರು.

ಶಿಂಧೆ ಅವರು ಮುಖ್ಯಮಂತ್ರಿ ಆಗಲಿದ್ದಾರೆ ಎಂದು ಗುರುವಾರ ಸಂಜೆ ಫಡಣವೀಸ್ ಘೋಷಿಸಿದ್ದರು. ಇದು ಅಚ್ಚರಿಗೆ ಕಾರಣವಾಗಿತ್ತು. ಫಡಣವೀಸ್ ಅವರೇ ಮುಖ್ಯಮಂತ್ರಿ ಆಗಲಿದ್ದಾರೆ, ಶಿಂಧೆ ಉಪಮುಖ್ಯಮಂತ್ರಿ ಆಗಲಿದ್ದಾರೆ ಎಂಬ ಭಾವನೆಯೇ ವ್ಯಾಪಕವಾಗಿ ಇತ್ತು. ಸರ್ಕಾರದಲ್ಲಿ ಫಡಣವೀಸ್ ಇರುವುದಿಲ್ಲ ಎಂಬುದು ಅಚ್ಚರಿ ಮೂಡಿಸಿತ್ತು. ಬಳಿಕ, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಟ್ವೀಟ್ ಮಾಡಿ 'ಫಡಣವೀಸ್ ಸರ್ಕಾರವನ್ನು ಸೇರಲಿದ್ದಾರೆ' ಎಂದಿದ್ದರು.

6ನೇ ಪುಟ ನೋಡಿ



ಮಹಾರಾಷ್ಟ್ರದ ನೂತನ ಮುಖ್ಯಮಂತ್ರಿ ಏಕನಾಥ ಶಿಂಧೆ ಅವರಿಗೆ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವರು ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಹಸ್ತಲಾಘವ ನೀಡಿದರು. ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಇದ್ದಾರೆ —ಪಿಟಿಐ ಚಿತ್ರ

### ಇ.ಡಿ. ಸರ್ಕಾರ: ಕಾಂಗ್ರೆಸ್ ಲೇವಡಿ

ಬಿಜೆಪಿ ಮತ್ತು ಶಿವಸೇನಾ ಬಂಡಾಯ ಶಾಸಕರು ಜತೆಯಾಗಿ ರಚಿಸಿರುವ ಮಹಾರಾಷ್ಟ್ರದ ಹೊಸ ಸರ್ಕಾರವನ್ನು 'ಇ.ಡಿ. ಸರ್ಕಾರ' ಎಂದು ಕಾಂಗ್ರೆಸ್ ಪಕ್ಷವು ಲೇವಡಿ ಮಾಡಿದೆ. ಏಕನಾಥ ಶಿಂಧೆ ಹೆಸರಿನ ಮೊದಲ ಅಕ್ಷರ ಇಂಗ್ಲಿಷ್‌ನ 'ಇ' ಮತ್ತು ದೇವೇಂದ್ರ ಫಡಣವೀಸ್ ಅವರ ಹೆಸರಿನ ಮೊದಲ ಅಕ್ಷರ ಇಂಗ್ಲಿಷ್‌ನ 'ಡಿ'ಯನ್ನು ಒಟ್ಟು ಸೇರಿಸಿ ಹೀಗೆ ಲೇವಡಿ ಮಾಡಲಾಗಿದೆ. ಜತೆಗೆ, ಜಾರಿ ನಿರ್ದೇಶನಾಲಯವನ್ನು (ಇ.ಡಿ.) ಅಕ್ರಮವಾಗಿ ಬಳಸಿ ಈ ಸರ್ಕಾರ ರೂಪುಗೊಳ್ಳುವಂತೆ ಮಾಡಲಾಗಿದೆ ಎಂದೂ ಕಾಂಗ್ರೆಸ್ ಆರೋಪಿಸಿದೆ. ಈ ಹಿಂದೆ ಅಧಿಕಾರದಲ್ಲಿ ಇದ್ದ ಮಹಾ ವಿಕಾಸ ಆಘಾಡಿ ಸರ್ಕಾರದಲ್ಲಿ ಕಾಂಗ್ರೆಸ್ ಪಕ್ಷವೂ ಇತ್ತು.

### ಸೇನಾ, ಉದ್ಧವ್ ದಮನವೇ ಗುರಿ

ನವದೆಹಲಿ (ಪಿಟಿಐ): ಲೋಕಸಭೆಗೆ 2024ರಲ್ಲಿ ನಡೆಯಲಿರುವ ಚುನಾವಣೆಯನ್ನು ಗಮನದಲ್ಲಿ ಇರಿಸಿಕೊಂಡೇ ಏಕನಾಥ ಶಿಂಧೆ ಅವರಿಗೆ ಮುಖ್ಯಮಂತ್ರಿ ಹುದ್ದೆ ನೀಡಲು ಬಿಜೆಪಿ ನಿರ್ಧರಿಸಿದೆ. ಹಿಂದುತ್ವ ಮತ್ತು ಪ್ರಾದೇಶಿಕ ಭಾವನೆಗಳನ್ನು ಮುಂದಕ್ಕೆ ತರುವುದು ಇದರ ಹಿಂದಿನ ತಂತ್ರ. ಈವರೆಗೆ ಈ ಎರಡೂ ಅಂಶಗಳನ್ನು ಬಿಜೆಪಿಯ ಮಾಜಿ ಮಿತ್ರಪಕ್ಷ ಶಿವಸೇನಾ ಬಲವಾಗಿ ನೆಚ್ಚಿಕೊಂಡಿತ್ತು.

ಒಂದು ಕಾಲದಲ್ಲಿ ಮಹಾರಾಷ್ಟ್ರದಲ್ಲಿ ಹಿಂದುತ್ವವಾದಿ ಪಕ್ಷವೆಂದರೆ ಶಿವಸೇನಾವೇ ಆಗಿತ್ತು. ಆದರೆ, ಈಗ ಸ್ಥಾನವನ್ನು ಬಿಜೆಪಿ ಆಕ್ರಮಿಸಿಕೊಳ್ಳಲು ಯತ್ನಿಸುತ್ತಿದೆ. ಅದಕ್ಕೆ ಶಿಂಧೆ ನೆರವಾಗಬಹುದು ಎಂಬ ಲೆಕ್ಕಾಚಾರ ಬಿಜೆಪಿಯಲ್ಲಿ ಇದೆ.

6ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 3D, 6

ಕೊಡಗಿನಲ್ಲೂ ವರ್ಷಧಾರೆ • ಮೂಲ್ಕಿಯಲ್ಲಿ ಒಂದು ಸಾವು

# ಕರಾವಳಿಯಲ್ಲಿ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೊಡಗು, ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಗುರುವಾರ ಧಾರಾಕಾರ ಮಳೆ ಸುರಿಯಿತು.

ಮಂಗಳೂರು ನಗರ ಮತ್ತು ಹೊರ ವಲಯದ ಪ್ರಮುಖ ರಸ್ತೆಗಳಲ್ಲಿ ನೀರು ತುಂಬಿದ ಕಾರಣ ವಾಹನ ಸಂಚಾರಕ್ಕೆ ಅಡ್ಡಿಯಾಯಿತು. ಗುಡ್ಡ ಜರಿದು ರೈಲು ಸಂಚಾರಕ್ಕೂ ತೊಂದರೆಯಾಯಿತು. ಹವಾಮಾನ ವೈಪರೀತ್ಯದಿಂದಾಗಿ ಕೆಲವು ವಿಮಾನಗಳ ಹಾರಾಟ ವಿಳಂಬವಾಯಿತು.

ಮಂಗಳೂರು ತಾಲ್ಲೂಕಿನ ಪಾವೂರಿನಲ್ಲಿ ಬೆಳಿಗ್ಗೆ ಅರ್ಧ ತಾಸಿನಲ್ಲೇ 6.4 ಸೆಂ.ಮೀ. ಮಳೆಯಾಗಿತ್ತು. ಶುಕ್ರವಾರವೂ ಮಳೆ ಮುಂದುವರಿಯುವ ಸಾಧ್ಯತೆ ಇರುವ ಕಾರಣ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಶಾಲಾ– ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.ಪಡೀಲ್ ಬಳಿ ರೈಲ್ವೆ ಹಳಿ ಮೇಲೆ ಗುಡ್ಡ ಜರಿದು ಬಿದ್ದ ಕಾರಣ ವಿಜಯಪುರಕ್ಕೆ ತೆರಳುವ ರೈಲು ಬಂಟ್ವಾಳ ನಿಲ್ದಾಣದಿಂದ ಹೊರಡುವ ವ್ಯವಸ್ಥೆ ಮಾಡಲಾಯಿತು. ಮಧ್ಯಾಹ್ನ 2.45ರ ವೇಳೆ ರೈಲು ಸಂಚಾರ ಪುನರಾರಂಭಗೊಂಡಿತು.

ಉಳ್ಳಾಲ ತಾಲ್ಲೂಕಿನ ಅಸೈ ಮದಕ ಮತ್ತು ಮಂಜನಾಡಿಯ ಅಸೈಗೋಳಿಯಲ್ಲಿ ಗುಡ್ಡ ಜರಿದು ಮನೆಗೆ ಹಾನಿಯಾಗಿದೆ. ಸುಳ್ಯದ ಜಟ್ಟಿಪಳ್ಳ ಸರ್ಕಾರಿ ಶಾಲೆಯ ಚಾವಣಿಯ ಒಂದು ಭಾಗ ಮುರಿದು ಬಿದ್ದಿದೆ. ಮೂಲ್ಕಿಯ ಶ್ರೀದೇವಿ ಕಾಲೇಜು ರಸ್ತೆ ಕುಸಿದಿದ್ದು ಮರವೂರು ಸೇತುವೆಯಲ್ಲಿ ಬಿರುಕು ಕಾಣಿಸಿಕೊಂಡಿದೆ. ಕೊಣಾಜೆಯ ಮುಚ್ಚಿಲಕೋಡಿಯಲ್ಲಿ ಗುಡ್ಡ ಕುಸಿದು ಬಾವಿ ಮುಚ್ಚಿಹೋಗಿದೆ. ಮಂಗಳೂರು ಹೊರವಲಯದ ನೀರುಮಾರ್ಗ ಬಳಿಯ ಬೊಂಡಂತಿಲದ ಕಟ್ಟಪಣಿ ಗ್ರಾಮದಲ್ಲಿ ನೆರೆಯ ಪರಿಸ್ಥಿತಿ ಸೃಷ್ಟಿಯಾಗಿತ್ತು.

ಉಡುಪಿ ಜಿಲ್ಲೆಯಲ್ಲಿಯೂ ಭಾರಿ ಮಳೆಯಾಗಿದೆ. ಚಿಕ್ಕಮಗಳೂರಿನ ಮಲೆನಾಡು ಭಾಗದಲ್ಲಿಯೂ ಉತ್ತಮ ಮಳೆಯಾಗಿದೆ. ತುಂಗಾ, ಭದ್ರಾ ನದಿಗಳಲ್ಲಿ ಹರಿವು ತುಸು ಹೆಚ್ಚಾಗಿದೆ.

**ಇಂದೂ ಹೆಚ್ಚಿನ ಮಳೆ ಸಾಧ್ಯತೆ:** ಜುಲೈ 1ರಂದು ಭಾರಿ ಮಳೆಯ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಜುಲೈ 5ರವರೆಗೂ ಮಳೆ ಮುಂದುವರಿಯಲಿದ್ದು, ಸಮುದ್ರದಲ್ಲಿ ದೈತ್ಯ ಅಲೆಗಳು ಏಳುವ ಸಾಧ್ಯತೆಗಳಿವೆ. ಗಂಟೆಗೆ 40ರಿಂದ 50 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದ್ದು ಮೀನುಗಾರರು ಸಮುದ್ರಕ್ಕಿಳಿಯಬಾರದು ಎಂದು ಎಚ್ಚರಿಕೆ ನೀಡಿದೆ.

**ಮೃತದೇಹ ಪತ್ತೆ:** ಮೂಲ್ಕಿಯ ಕೆ.ಎಸ್. ರಾವ್ ನಗರದ ಲಿಂಗಪ್ಪಯ್ಯಕಾಡು ಸರ್ಕಾರಿ ಬಾವಿ ಬಳಿ ಬುಧವಾರ ಕಾಲುಜಾರಿ ಚರಂಡಿಗೆ ಬಿದ್ದಿದ್ದ ಸುನಿಲ್ (40) ಎಂಬುವವರ ಶವ ಗುರುವಾರ ಪತ್ತೆಯಾಗಿದೆ.



ಕೊಡಗಿನಲ್ಲಿ ಗುರುವಾರ ಸುರಿದ ಮಳೆಯಿಂದಾಗಿ ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ ನೀರಿನ ಮಟ್ಟ ಹೆಚ್ಚಾಯಿತು —ಪ್ರಜಾವಾಣಿ ಚಿತ್ರ

# ಹುತಾತ್ಮ ಯೋಧರಿಗೆ ಗೌರವ ಇಂದು

**ಬೆಂಗಳೂರು:** ಸಂತ ಜೋಸೆಫ್ ಬಾಲಕರ ಪ್ರೌಢಶಾಲೆ ಮತ್ತು ಹಳೆ ವಿದ್ಯಾರ್ಥಿಗಳ ಸಂಘದ ವತಿಯಿಂದ ಜುಲೈ 1ರಂದು ಹುತಾತ್ಮರಾದ ಇಬ್ಬರು ಯೋಧರಿಗೆ ಗೌರವ ಸಲ್ಲಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ.

ಶಾಲೆಯ ಹಳೆಯ ವಿದ್ಯಾರ್ಥಿಗಳಾಗಿದ್ದ ಲೆಫ್ಟಿನೆಂಟ್ ಬಾಬುಲ್ ಗುಹಾ ಮತ್ತು ಲೆಫ್ಟಿನೆಂಟ್ ಕೃಷ್ಣಕುಮಾರ್ ಮೋಹನ್ ಅವರು 1965 ಮತ್ತು 1971ರ ಯುದ್ಧದಲ್ಲಿ ಹುತಾತ್ಮರಾಗಿದ್ದರು.

ಮಧ್ಯಾಹ್ನ 2.45ಕ್ಕೆ ಕಾರ್ಯಕ್ರಮ ನಡೆಯಲಿದ್ದು, ಲೆಫ್ಟಿನೆಂಟ್ ಬಾಬುಲ್ ಗುಹಾ ಅವರ ಪುತ್ರರಾದ ಒಡಿಶಾ ಹೈಕೋರ್ಟ್‌ನ ನ್ಯಾಯಮೂರ್ತಿ ಅರಿಂದಮ್ ಸಿನ್ಹಾ ಮತ್ತು ಲೆಫ್ಟಿನೆಂಟ್ ಕೃಷ್ಣಕುಮಾರ್ ಮೋಹನ್ ಅವರ ಪತ್ನಿ ಕವಿತಾ ಮೋಹನ್ ಮತ್ತು ಏರ್ ಮಾರ್ಷಲ್ ಮನವೇಂದ್ರ ಸಿಂಗ್ ಅವರು ಪಾಲ್ಗೊಳ್ಳಲಿದ್ದಾರೆ.

### ಕರ್ನಾಟಕದ ಅತಿ ದೊಡ್ಡ ಶೈಕ್ಷಣಿಕ ಮೇಳ

# ‘ಎಡ್ಯುವರ್ಸ್’ ನಾಳೆ ಆರಂಭ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ವತಿಯಿಂದ ಆಯೋಜಿಸಿರುವ ಕರ್ನಾಟಕದ ಅತಿ ದೊಡ್ಡ ಶೈಕ್ಷಣಿಕ ಮೇಳ ‘ಎಡ್ಯುವರ್ಸ್’ ಜ್ಞಾನ ದೇಗುಲ–2022 ಜುಲೈ 2 ಮತ್ತು 3ರಂದು ನಗರದ ಜಯಮಹಲ್ ಪ್ಯಾಲೇಸ್ ಹೋಟೆಲ್ ಆವರಣದಲ್ಲಿ ನಡೆಯಲಿದೆ.

ಇದು 12ನೇ ಆವೃತ್ತಿಯಾಗಿದೆ. ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಹಾಗೂ ಅಂತಃಶಕ್ತಿಯ ಬಲವರ್ಧನೆಗಾಗಿ ಉತ್ತಮ ಮಾರ್ಗದರ್ಶನ ಒದಗಿಸುವುದು ಈ ಶೈಕ್ಷಣಿಕ ಮೇಳದ ಉದ್ದೇಶವಾಗಿದೆ.




40ಕ್ಕೂ ಹೆಚ್ಚು ಅಗ್ರಗಣ್ಯ ಶೈಕ್ಷಣಿಕ ಸಂಸ್ಥೆಗಳು ಈ ಮೇಳದಲ್ಲಿ ಭಾಗಿಯಾಗಲಿದ್ದು, ಪಿಯುಸಿ ಬಳಿಕ ಲಭ್ಯವಿರುವ ಕೋರ್ಸ್‌ಗಳು, ಅವಕಾಶಗಳ ಬಗ್ಗೆ ಮಾಹಿತಿ ಸಿಗಲಿದೆ. ಸಿಇಟಿ, ನೀಟ್, ಕಾಮೆಡ್‌-ಕೆ ಅಧಿಕಾರಿಗಳು ಹಾಗೂ ತಜ್ಞರೊಂದಿಗೆ ನೇರ ಸಂವಹನದ ಅವಕಾಶ ದೊರೆಯಲಿದೆ. ಇದೆಲ್ಲವೂ ಒಂದೇ ವೇದಿಕೆಯಲ್ಲಿ ಮತ್ತು ಸಂಪೂರ್ಣ ಉಚಿತವಾಗಿದೆ.

ವೈದ್ಯಕೀಯ, ದಂತ, ನೀಟ್ ಮತ್ತು ಕಾಮೆಡ್‌-ಕೆ ಕುರಿತು ವೃತ್ತಿ ಮಾರ್ಗದರ್ಶನ ದೊರೆಯಲಿದೆ. ಬೆಳಿಗ್ಗೆ 10ಕ್ಕೆ ಕಾಮೆಡ್‌-ಕೆ, 11ಕ್ಕೆ ಸಿಇಟಿ ಹಾಗೂ ಮಧ್ಯಾಹ್ನ 12ಕ್ಕೆ ನೀಟ್ ಕುರಿತು ಕಾರ್ಯಾಗಾರಗಳು ನಡೆಯಲಿವೆ.

ಜುಲೈ 2ರಂದು ಬೆಳಿಗ್ಗೆ 10ಕ್ಕೆ ವಿವಿಧ ವಿಷಯಗಳ ಬಗ್ಗೆ ಡಾ. ಅಲಿ ಖ್ವಾಜಾ, 11 ಗಂಟೆಗೆ ಕಾಮೆಡ್‌ನಲ್ಲಿನ ಕೌನ್ಸೆಲಿಂಗ್ ಕುರಿತು ಶಾಂತಾರಾಮ್ ನಾಯಕ್ ಹಾಗೂ ಮಧ್ಯಾಹ್ನ 12ಕ್ಕೆ ಸಿಇಟಿ ಮತ್ತು ನೀಟ್ ಬಗ್ಗೆ ಎ.ಎಸ್. ರವಿ ಹಾಗೂ ಶ್ರೀನಿವಾಸ ಮೂರ್ತಿ ಡಿ.ವಿ. ಅವರು ಮಾತನಾಡಲಿದ್ದಾರೆ.

ಜುಲೈ 3ರಂದು ಬೆಳಿಗ್ಗೆ 10.30ಕ್ಕೆ ಕಾಮೆಡ್‌-ಕೆ ಶಾಂತರಾಮ್ ನಾಯಕ್ ಅವರು ಹಾಗೂ ಮಧ್ಯಾಹ್ನ 12ಕ್ಕೆ ಸಿಇಟಿ ಮತ್ತು ನೀಟ್ ಬಗ್ಗೆ ತಜ್ಞರು ಉಪನ್ಯಾಸ ನೀಡಲಿದ್ದಾರೆ.

ಜುಲೈ 9 ಮತ್ತು 10ರಂದು ಹುಬ್ಬಳ್ಳಿಯ ಗೋಕುಲ ಗಾರ್ಡನ್ಸ್‌ನಲ್ಲಿ| ‘ಎಡ್ಯುವರ್ಸ್’ ಶೈಕ್ಷಣಿಕ ಮೇಳ ನಡೆಯಲಿದೆ.

ವಿವರಗಳಿಗಾಗಿ www.eduverseevents.com ಭೇಟಿ ನೀಡಿ.



# ವಿಧಾನ ಮಂಡಲ ಅಧಿವೇಶನ 18ರಿಂದ?

**ಬೆಂಗಳೂರು:** ರಾಜ್ಯ ವಿಧಾನ ಮಂಡಲದ ಮುಂಗಾರು ಅಧಿವೇಶನ ಜುಲೈ 18ರಿಂದ 10 ದಿನ ನಡೆಯುವ ಸಾಧ್ಯತೆ ಇದೆ.ಕಾನೂನು ಮತ್ತು ಸಂಸದೀಯ ಸಚಿವಾಲಯ ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದು, ಶುಕ್ರವಾರ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನವಾಗಲಿದೆ.

‘ರಾಷ್ಟ್ರಪತಿ ಆಯ್ಕೆಗೆ ಜುಲೈ 18ರಂದು ಮತದಾನ ನಿಗದಿಯಾಗಿದೆ. ಅಂದೇ ವಿಧಾನ ಮಂಡಲ ಅಧಿವೇಶನ ಆರಂಭಿಸಲು ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆದಿದೆ’ ಎಂದು ಮೂಲಗಳು ತಿಳಿಸಿವೆ.


ನಟ ನಿರಂಜನ ಶೆಟ್ಟಿ ಹಾಗೂ ನಟಿ ಚೈತ್ರಾ ವಾಸುದೇವನ್ ಕರಕುಶಲ ವಸ್ತುಗಳನ್ನು ಪ್ರದರ್ಶಿಸಿದರು

# ಇಂಡಿಯನ್ ಹಾತ್ ಫೆಸ್ಟಿವಲ್ ಪ್ರದರ್ಶನ ಮೇಳ

**ಬೆಂಗಳೂರು:** ಗ್ರ್ಯಾಂಡ್ ಫ್ಲೀಯಾ ಮಾರ್ಕೆಟ್ ವತಿಯಿಂದ 5 ದಿನಗಳ ‘ಇಂಡಿಯನ್ ಹಾತ್ ಫೆಸ್ಟಿವಲ್’ ಕರಕುಶಲ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಮೇಳವನ್ನು ನಟ ನಿರಂಜನ ಶೆಟ್ಟಿ ಹಾಗೂ ನಟಿ ಚೈತ್ರಾ ವಾಸುದೇವನ್ ಉದ್ಘಾಟಿಸಿದರು.

ಎಚ್‌ಎಸ್‌ಆರ್ ಬಡಾವಣೆಯ ವೈಟ್‌ಹೌಸ್ ಸಭಾಂಗಣದಲ್ಲಿ ಜೂನ್ 29ರಿಂದ ಜುಲೈ 3ರ ವರೆಗೆ 5 ದಿನಗಳ ಕಾಲ ಮೇಳದಲ್ಲಿ 75ಕ್ಕೂ ಹೆಚ್ಚು ಅಂಗಡಿಗಳಿದ್ದು, ದೇಶದ ವಿವಿಧ ಭಾಗಗಳಿಂದ ಆಗಮಿಸಿರುವ ಕಲಾವಿದರು ತಮ್ಮ ಕಲೆಯನ್ನು ಪ್ರದರ್ಶನ ಮಾಡಲಿದ್ದಾರೆ.

ಮನೆಯ ಗಾರ್ಡನ್ ಆಲಂಕಾರಿಕ ವಸ್ತುಗಳು, ಹ್ಯಾಂಡ್‌ಲೂಮ್ ಸೀರೆಗಳು, ಕುರ್ತಿ ಮತ್ತು ಆಭರಣಗಳನ್ನು ಕೊಂಡುಕೊಳ್ಳಬಹುದು. ಬೆಳಿಗ್ಗೆ 11 ರಿಂದ ಸಂಜೆ 7ರ ವರೆಗೆ ಪ್ರದರ್ಶನ ಮತ್ತು ಮಾರಾಟ ಮಾಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂದಿನಿಂದ ಜೆಡಿಎಸ್ ಜನತಾಮಿತ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜೆಡಿಎಸ್ ಜನತಾಮಿತ್ರ ಕಾರ್ಯಕ್ರಮ ಜುಲೈ 1ರಂದು ರಾಜಧಾನಿಯಲ್ಲಿ ಆರಂಭಗೊಳ್ಳಲಿದೆ ಎಂದು ವಿಧಾನಸಭೆಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ತಿಳಿಸಿದರು.

ಕಾರ್ಯಕ್ರಮಕ್ಕೆ 15 ವಿಶೇಷವಾಹನ ಸಿದ್ಧವಾಗಿವೆ. ನಗರದ 28 ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ವಾರ್ಡ್‌ಗೂ ಈ ವಾಹನ ತೆರಳಲಿದ್ದು, ಜೆ.ಪಿ. ಭವನದಲ್ಲಿ ಶುಕ್ರವಾರ ಹಸಿರು ನಿಶಾನೆ ತೋರಲಾಗುವುದು ಎಂದು ಪತ್ರಿಕಾಗೋಷ್ಠಿಯಲ್ಲಿ ಗುರುವಾರ ತಿಳಿಸಿದರು.

ಜನರು ತಮ್ಮ ನಿರೀಕ್ಷೆಯ ಸರ್ಕಾರ ಹೇಗಿರಬೇಕು ಎಂಬ ಬಗ್ಗೆ ಸಲಹೆ ನೀಡಬಹುದು ಎಂದು ಹೇಳಿದರು.

ದೇಶ ಹಾಗೂ ರಾಜ್ಯದಲ್ಲಿರುವ ಪರಿಸ್ಥಿತಿ, ಬೆಂಗಳೂರಿಗೆ ಯಾರು, ಯಾವ ಕೊಡುಗೆ ಕೊಟ್ಟಿದ್ದಾರೆ ಅನ್ನುವ ದಾಖಲೆ ಕೊಡಲಾಗುವುದು ಎಂದು ತಿಳಿಸಿದರು.

ಜುಲೈ 17ರ ವರೆಗೂ ಜನತಾ ಮಿತ್ರ ಕಾರ್ಯಕ್ರಮ ನಡೆಯಲಿದೆ ಎಂದರು.

'ಜಿಲ್ಲಾ ಘಟಕ ಅಧ್ಯಕ್ಷರು, ಶಾಸಕರ ಸಭೆ ಕರೆದಿದ್ದೇವೆ. ಪಕ್ಷದ ಸಂಘಟನೆ ಹಾಗೂ ಪಂಚರತ್ನ ರಥಯಾತ್ರೆ ಕುರಿತು ಚರ್ಚೆ ನಡೆಸಲಾಗುವುದು' ಎಂದರು.

ಶಾಸಕರಾದ ಗೌರಿಶಂಕರ್, ಮಂಜುನಾಥ್, ಮುಖಂಡರಾದ ಎನ್‌.ಬಿ.ನಬಿ, ಎಚ್‌.ಎಂ.ರಮೇಶ್ ಗೌಡ, ಜೆಡಿಎಸ್ ನಗರ ಅಧ್ಯಕ್ಷ ಆರ್‌.ಪ್ರಕಾಶ್ ಹಾಜರಿದ್ದರು.

# 30 ಅಧಿಕಾರಿ, ಸಿಬ್ಬಂದಿಗೆ ಸರ್ವೋತ್ತಮ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮೊಹಮ್ಮದ್ ನಜೀರ್, ವಾರ್ತಾ ಇಲಾಖೆಯ ಜಂಟಿ ನಿರ್ದೇಶಕ ಡಿ.ಪಿ. ಮುರುಳೀಧರ್, ಆರ್ಥಿಕ ಇಲಾಖೆ ಜಂಟಿ ಕಾರ್ಯದರ್ಶಿ ವತ್ಸಲಾಕುಮಾರಿ ಸೇರಿದಂತೆ 30 ಜನ ಅಧಿಕಾರಿ ಮತ್ತು ನೌಕರರಿಗೆ ರಾಜ್ಯ ಸರ್ಕಾರ ನೀಡುವ ಸರ್ವೋತ್ತಮ ಸೇವಾ ಪ್ರಶಸ್ತಿ ಲಭಿಸಿದೆ.

ವಿವಿಧ ಇಲಾಖೆಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಮತ್ತು ಸಾಧನೆಗೈದ ಸಿಬ್ಬಂದಿಗೆ ಈ ಪ್ರಶಸ್ತಿ ನೀಡಲಾಗುತ್ತಿದ್ದು, ಪ್ರಶಸ್ತಿಯು ₹50 ಸಾವಿರ ಹಾಗೂ ಫಲಕ ಒಳಗೊಂಡಿದೆ.

**ಪ್ರಶಸ್ತಿಗೆ ಆಯ್ಕೆಯಾದವರು:** ತುಕಾರಾಮ್ ಕಲ್ಯಾಣಕರ್, ಸಚಿವಾಲಯ, ಬೆಂಗಳೂರು. ಶೋಭಾ ಪಾಟೀಲ, ಕೃಷಿ ಇಲಾಖೆ, ಬೆಂಗಳೂರು. ಅಮರೇಶ್ ತುಂಬಗಿ, ಔಷಧ ನಿಯಂತ್ರಣ ಇಲಾಖೆ, ಬೆಂಗಳೂರು. ಡಾ. ಕಿರಣ್, ಆರೋಗ್ಯ ಇಲಾಖೆ, ಪಾವಗಡ. ಗಡ್ಡೆ ಶಿವರಾಜಕುಮಾರ್, ಲೆಕ್ಕ ಪತ್ರ ಇಲಾಖೆ, ಬೆಂಗಳೂರ. ಆಶಾದೇವಿ ಕೇಶವ ನಾಯಕ್, ಹಿಂದುಳಿದ ವರ್ಗಗಳ ಇಲಾಖೆ, ಬ್ರಹ್ಮಾವರ. ಸುರೇಶ್ ಹವಾಲ್ದಾರ್, ತಹಶೀಲ್ದಾರ್ ಕಚೇರಿ, ಬಾದಾಮಿ. ಡಾ. ಪುಷ್ಪಲತಾ, ಶಿಕ್ಷಣ ಇಲಾಖೆ, ದಾವಣಗೆರೆ. ಎಚ್‌.ಎ. ಶೋಭಾ, ಆರ್ಥಿಕ ಇಲಾಖೆ, ಬೆಂಗಳೂರು. ಡಾ. ಪ್ರಾಣೇಶ್ ಜಹಾಗೀರದಾರ್, ಪಶುಸಂಗೋಪನಾ ಇಲಾಖೆ, ವಿಜಯಪುರ. ಎಸ್. ಬಿ. ಕೊಂಗವಾಡ,ಕೃಷಿ ಇಲಾಖೆ, ಬಾಗಲಕೋಟೆ. ಎಂ.ಇ. ಚನ್ನಬಸವರಾಜ, ಕಂದಾಯ ಇಲಾಖೆ, ಬೆಂಗಳೂರು. ಬಿ. ಊರ್ಮಿಳಾ,ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು. ಎ. ಶ್ರೀನಿವಾಸ್‌ರಾವ್, ಜಿಲ್ಲಾಪಂಚಾಯಿತಿ, ಉಡುಪಿ. ಜೆ. ಜಯರಾಜ್, ಸಚಿವಾಲಯ,ಬೆಂಗಳೂರು. ವೆಂಕಟೇಶ್ ಅಪ್ಪಯ್ಯ ಶಿಂಧೀಹಟ್ಟಿ, ಕಾರ್ಮಿಕ ಇಲಾಖೆ, ಬೆಳಗಾವಿ. ಬಸವರಾಜ, ತಹಶೀಲ್ದಾರ್ ಕಚೇರಿ, ಲಿಂಗಸಗೂರು. ಎಂ.ಪಿ. ರವಿಪ್ರಸಾದ್, ವಾಣಿಜ್ಯ ತೆರಿಗೆ ಇಲಾಖೆ, ಬೆಂಗಳೂರು. ಡಾ. ಎಂ. ಜಗದೀಶ್, ತೋಟಗಾರಿಕೆ ಇಲಾಖೆ, ಬೆಂಗಳೂರು. ಕೆ. ಗಾಯತ್ರಿ ದೇವಿ, ಆರೋಗ್ಯ ಇಲಾಖೆ, ದಾವಣಗೆರೆ. ಎಚ್‌. ಎಸ್. ಪ್ರಸಾದ್, ಐಟಿಐ, ಗುಂಡ್ಲುಪೇಟೆ. ಕೃಷ್ಣ ಕಾಮಕರ, ತಹಶೀಲ್ದಾರ್, ಯಲ್ಲಾಪುರ. ಡಾ. ನಾಗೇಂದ್ರ ಎಫ್‌. ಹೊನ್ನಳ್ಳಿ, ಹೆಚ್ಚುವರಿ ಜಿಲ್ಲಾಧಿಕಾರಿ, ಶಿವಮೊಗ್ಗ. ನೀಲಿಮಾ ಅಶೋಕ್ ಕೊಟ್ಟಣ, ಆರೋಗ್ಯ ಇಲಾಖೆ, ಹಾವೇರಿ. ಶೋಭಾರಾಣಿ, ಗ್ರಾಮೀಣಾಭಿವೃದ್ಧಿ ಇಲಾಖೆ, ಮೈಸೂರು. ಎ.ಎ. ಅಬ್ದುಲ್ಲಾ, ಗ್ರಾಮೀಣಾಭಿವೃದ್ಧಿ ಇಲಾಖೆ, ಕೊಡಗು. ಮಲ್ಲವ್ವ ನಿಂಗಪ್ಪ ರಾಯಕೊಪ್ಪ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಮಾನ್ವಿ.

# ಜಿಗಣಿ: ಇಂದು ಕ್ಯಾನ್‌ಫಿನ್ ಹೋಮ್ಸ್ ಶಾಖೆ ಆರಂಭ

**ಬೆಂಗಳೂರು:** ಆನೇಕಲ್ ತಾಲ್ಲೂಕಿನ ಜಿಗಣಿಯಲ್ಲಿ ಜುಲೈ 1ರಂದು ಕೆನರಾ ಬ್ಯಾಂಕ್‌ನ ಕ್ಯಾನ್‌ಫಿನ್ ಹೋಮ್ಸ್ ಲಿಮಿಟೆಡ್‌ನ 201ನೇ ಶಾಖೆ ಆರಂಭವಾಗಲಿದೆ.

ಮಧ್ಯಾಹ್ನ 12 ಗಂಟೆಗೆ ಜಿಗಣಿಯ ಎಸ್‌.ಎನ್‌. ಪ್ರವೀಣ್ ಆರ್ಕೇಡ್, ಸಿಎ2, ಎಪಿಸಿ ಸರ್ಕಲ್‌ನಲ್ಲಿರುವ ನೂತನ ಶಾಖೆಯ ಉದ್ಘಾಟನಾ ಸಮಾರಂಭ ನಡೆಯಲಿದೆ.

ಕೆನರಾ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಮತ್ತು ಕ್ಯಾನ್‌ಫಿನ್ ಹೋಮ್ಸ್ ಲಿಮಿಟೆಡ್ ಚೇರ್‌ಮನ್ ಎಲ್‌.ವಿ. ಪ್ರಭಾಕರ್ ಮತ್ತು ನಿರ್ದೇಶಕ ದೇಬಾಶಿಷ್ ಮುಖರ್ಜಿ ಗೌರವ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಕ್ಯಾನ್‌ಫಿನ್ ಹೋಮ್ಸ್ ವ್ಯವಸ್ಥಾಪಕ ನಿರ್ದೇಶಕ ಗಿರೀಶ್ ಕೌಸ್ಗಿ, ಉಪ ವ್ಯವಸ್ಥಾಪಕ ನಿರ್ದೇಶಕ ಅಮಿತಾಬ್ ಚಟರ್ಜಿ, ಪ್ರಧಾನ ವ್ಯವಸ್ಥಾಪಕ ಶಮಿಲಾ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ಕೆರೆ ಒತ್ತುವರಿ ತೆರವಿಗೆ ಸಿಬ್ಬಂದಿ ಕೊರತೆ: ಬಿಬಿಎಂಪಿ

**ಬೆಂಗಳೂರು:** ಕೆರೆಗಳ ಒತ್ತುವರಿ ತೆರವಿಗೆ ಮಾನವ ಸಂಪನ್ಮೂಲದ ಕೊರತೆಯಿದ್ದು, ಇದನ್ನು ಒದಗಿಸಲು ಸರ್ಕಾರಕ್ಕೆ ಪ್ರಸ್ತಾವ ಕಳುಹಿಸಲಾಗಿದೆ. ಅದೆಲ್ಲ ದೊರೆತ ಮೇಲೆ ಒತ್ತುವರಿ ತೆರವಿಗೆ ಕಾರ್ಯಪಡೆ ರಚಿಸಲಾಗುತ್ತದೆ ಎಂದು ಬಿಬಿಎಂಪಿ ಆಸ್ತಿಗಳ ವಿಭಾಗದ ವಿಶೇಷ ಆಯುಕ್ತ ಬಿ. ರೆಡ್ಡಿ ಶಂಕರ್‌ಬಾಬು ತಿಳಿಸಿದರು.

ಕೆರೆಗಳ ಒತ್ತುವರಿ ತೆರವು ಗುರುತಿಸಲು ತಹಶೀಲ್ದಾರ್‌ಗಳ ಅಗತ್ಯವಿದೆ. ತೆರವು ಕಾರ್ಯಾಚರಣೆಗೆ ಸಿಬ್ಬಂದಿ ಕೊರತೆ ಇದೆ. ಇದನ್ನು ಒದಗಿಸಿದ 15 ದಿನದಲ್ಲಿ ಕಾರ್ಯಪಡೆ ಸಜ್ಜಾಗಿ, ಕಾರ್ಯಗತವಾಗುತ್ತದೆ. ಯಾವುದೇ ಒತ್ತುವರಿಯನ್ನು ಉಳಿಸುವುದಿಲ್ಲ. ಕಾನೂನು ರೀತಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದರು.

ಅಮೃತ ಮಹೋತ್ಸವ ಯೋಜನೆಯಲ್ಲಿ ₹200 ಕೋಟಿಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆ. ಈ ಹಣದಲ್ಲಿ 27 ಕೆರೆಗಳಲ್ಲಿ 68 ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲಾಗುತ್ತದೆ. ಈ ಸಂಬಂಧ ಎಲ್ಲ ಪ್ರಕ್ರಿಯೆಗಳನ್ನು ಆರಂಭಿಸಿದ್ದು ಇನ್ನೊಂದು ತಿಂಗಳಲ್ಲಿ ಕಾಮಗಾರಿ ಆರಂಭಿಸಲಾಗುತ್ತದೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.


ಮುಖ್ಯ ಆಯುಕ್ತರ ಸೂಚನೆ ಮೇರೆಗೆ ಕೆರೆಗಳಿಗೆ ಭೇಟಿ ನೀಡಲಿದ್ದು, ಅಲ್ಲಿನ ಸ್ಥಳೀಯರೊಂದಿಗೆ ಕೆರೆ ಅಭಿವೃದ್ಧಿ ಬಗ್ಗೆ ಚರ್ಚಿಸಲಾಗುತ್ತದೆ ಎಂದರು.

ಅಮೃತ ಮಹೋತ್ಸವ ಯೋಜನೆಯಲ್ಲಿ ಬಿಬಿಎಂಪಿ ಶಾಲೆಗಳ ಅಭಿವೃದ್ಧಿಗೆ ಕ್ರಿಯಾಯೋಜನೆ ರೂಪಿಸಲಾಗಿದೆ. ಶಿಕ್ಷಣ ಇಲಾಖೆಯಿಂದ ಬಂದ ಕೂಡಲೇ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಕನ್ನಡ, ಸಮಾಜ ವಿಜ್ಞಾನದ ಪಠ್ಯ ಪುಸ್ತಕ ವಿತರಿಸಲಾಗುವುದು ಎಂದು ಹೇಳಿದರು.

ವೈದ್ಯರಿಲ್ಲದ ನಮ್ಮ ಜೀವನವನ್ನು ಊಹಿಸಿಕೊಳ್ಳಲೂ ಆಗದು. ನಮ್ಮ ಆರೋಗ್ಯದ ರಕ್ಷಣೆಯಲ್ಲಿ ಅವರ ಪಾತ್ರ ದೊಡ್ಡದು. ಕೇವಲ ಔಷಧಗಳಷ್ಟೆ ನಮ್ಮ ಕಾಯಿಲೆಗಳನ್ನು ವಾಸಿ ಮಾಡುವುದಿಲ್ಲ; ವೈದ್ಯರ ಸಾಂತ್ವನದ ಮಾತುಗಳೂ ನಮ್ಮ ಆರೋಗ್ಯವನ್ನು ಕಾಪಾಡುತ್ತವೆ. ಹೀಗಾಗಿ ವೈದ್ಯರು ಮತ್ತು ರೋಗಿಗಳ ನಡುವೆ ಏರ್ಪಟ್ಟಿರುವ ನಂಬಿಕೆ–ಗೌರವಗಳು ಸಮಾಜದ ಸ್ವಾಸ್ಥ್ಯಕ್ಕೂ ಪೂರಕ.



# ವೈದ್ಯರನ್ನು ಗೌರವಿಸಿ



• ಡಾ. ವಿನಯ ಶ್ರೀನಿವಾಸ್

ಮತ್ತೆ ಬಂದಿದೆ ವೈದ್ಯರ ದಿನ. ಕಾಯಿಲೆಗಳು ಬಾಧಿಸಿದಾಗ ಸ್ಪಂದಿಸಿ, ಸೂಕ್ತ ಚಿಕಿತ್ಸೆಯನ್ನು ನೀಡಿ ನಮ್ಮನ್ನು ರೋಗಮುಕ್ತರನ್ನಾಗಿ ಮಾಡಿದ ಎಲ್ಲ ವೈದ್ಯರನ್ನು ನೆನಪಿಸಿಕೊಳ್ಳಬೇಕಾದ ದಿನವಿದು. ನಮ್ಮ ಆರೋಗ್ಯವರ್ಧನೆಗೆ ಸಲಹೆಗಳನ್ನು ಸೂಚಿಸಿದ ವೈದ್ಯರಿಗೆ ಕೃತಜ್ಞತೆಯನ್ನು ಸಲ್ಲಿಸಬೇಕಾದ ದಿನವಿದು. ನಮ್ಮನ್ನು ಮತ್ತು ನಮ್ಮ ಕುಟುಂಬವನ್ನು ಆರೋಗ್ಯ ಸಮಸ್ಯೆಗಳ ಅಪಾಯದಿಂದ ಪಾರುಮಾಡಿದ ವೈದ್ಯರಿಗೆ ಶುಭಾಷಯಗಳನ್ನು ತಿಳಿಸಬೇಕಾದ ದಿನವಿದು. ಕೆಲವು ತುರ್ತು ಸಂದರ್ಭಗಳಲ್ಲಿ ಸಾವಿನ ದವಡೆಯಿಂದ ನಮ್ಮನ್ನು ಪಾರು ಮಾಡಿದ ವೈದ್ಯರನ್ನು ಅಭಿನಂದಿಸಬೇಕಾದ ದಿನವಿದು. ಆದರೆ ಇಂತಹ ಸುವಿಚಾರಗಳನ್ನು ಮಾಡುವ ಮನಸ್ಸುಗಳು ಇಂದು ಕ್ಷೀಣಿಸುತ್ತಿವೆ. 'ವೈದ್ಯೋ ನಾರಾಯಣೋ ಹರಿಃ' ಎನ್ನುವ ಕಾಲ ಒಂದಿತ್ತು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ವೈದ್ಯರನ್ನು ಅನುಮಾನದಿಂದ ನೋಡುವ ಕಣ್ಣುಗಳು ಈ ದಿನಗಳಲ್ಲಿ ಹೆಚ್ಚಾಗುತ್ತಿವೆ. ಆಸ್ಪತ್ರೆಗೆ ಕರೆತಂದ ರೋಗಿಯ ಆರೋಗ್ಯ ಸ್ಥಿತಿಯಲ್ಲಿ ಏನೇ ಅವಘಡವಾದರೂ ಹಿಂದು ಮುಂದು ಆಲೋಚಿಸದೆ ಅದು ವೈದ್ಯರ ನಿರ್ಲಕ್ಷ್ಯದಿಂದಲೇ ಎನ್ನುವವರು ಇಂದು ಹೆಚ್ಚಾಗಿದ್ದಾರೆ. ಇದಕ್ಕೆ ಕಾರಣಗಳು ಹಲವು. ಎಲ್ಲೋ ಲಕ್ಷಕ್ಕೆ ಒಂದಾದ ಅಚಾತುರ್ಯವನ್ನೇ ಮನದಲ್ಲಿರಿಸಿಕೊಂಡು, ಎಲ್ಲ ವೈದ್ಯರನ್ನೂ, ಎಲ್ಲ ಆಸ್ಪತ್ರೆಗಳನ್ನೂ ಅದೇ ಸಂಶಯದ ಕಣ್ಣುಗಳಿಂದ ನೋಡುವುದು ಅದೆಷ್ಟರ ಮಟ್ಟಿಗೆ ಸರಿ? ಈ ವಿಚಾರದಲ್ಲಿ ಪ್ರತಿಯೊಬ್ಬರೂ ಒಮ್ಮೆ ಆತ್ಮಾವಲೋಕನ ಮಾಡಿಕೊಂಡರೆ ಒಳಿತು.

ಆಸ್ಪತ್ರೆಗೆ ದಾಖಲಾದ ಒಳರೋಗಿಯ ಆರೋಗ್ಯ ಸ್ಥಿತಿಯಲ್ಲಿನ ಸುಧಾರಣೆ ಅನೇಕ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ. ವ್ಯಕ್ತಿಯಿಂದ ವ್ಯಕ್ತಿಗೆ ಅವು ಭಿನ್ನವಾಗಿರುತ್ತವೆ. ಕೆಲವು ಅಂಶಗಳು ವೈದ್ಯರ ನಿಯಂತ್ರಣದಲ್ಲಿ ಇರದೆಯೂ ತರಬಹುದು. ಕೆಲವೊಮ್ಮೆ ವೈದ್ಯರು ಕೊಡುವ ಚಿಕಿತ್ಸೆಗೆ ರೋಗಿ ಸ್ಪಂದಿಸದೆಯೂ ಇರಬಹುದು. ಆದರೆ ಇದ್ಯಾವುದನ್ನೂ ಪರಿಗಣಿಸದೆ ಆತನ ಆರೋಗ್ಯ ಏರುಪೇರಾದರೆ ಅದಕ್ಕೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂದು ನಿರ್ಧರಿಸಿ ವೈದ್ಯರ ಮೇಲೆ ಹಲ್ಲೆ ಮಾಡುವುದಾಗಲಿ, ಆಸ್ಪತ್ರೆಯ ಆಸ್ತಿಯನ್ನು ಹಾನಿ ಮಾಡುವುದಾಗಲಿ ಎಷ್ಟರ ಮಟ್ಟಿಗೆ ಸರಿ?

ಸಾರ್ವಜನಿಕರ ಈ ಬದಲಾದ ನಡವಳಿಕೆ ವೈದ್ಯರ ನಡೆಯಲ್ಲಿಯೂ ಬದಲಾವಣೆಯನ್ನು ತಂದಿದೆ. ತುರ್ತು ಚಿಕಿತ್ಸೆಯ ಸಂದರ್ಭದಲ್ಲಿ ರೋಗಿಯ ಚಿಕಿತ್ಸೆಗೂ ಮೊದಲು ದಾಖಲಾತಿಗೆ ಅನುಮತಿ ಪತ್ರ, ಆಸ್ಪತ್ರೆಯ ಕರಾರುಗಳಿಗೆ ಒಪ್ಪಿಗೆ ನೀಡುವ ಪತ್ರ ಮೊದಲಾದ ಪತ್ರಗಳಿಗೆ ರೋಗಿಯ ಸಂಬಂಧಿಗಳಿಂದ ಸಹಿ ಹಾಕಿಸಿಕೊಳ್ಳಲು ಆಸ್ಪತ್ರೆಯ ಸಿಬ್ಬಂದಿಗಳು ಮುಂದಾಗಬೇಕಾಗಿದೆ. ಏಕೆಂದರೆ, ರೋಗಿಯ ಆರೋಗ್ಯ ಸ್ಥಿತಿಯಲ್ಲಿ ವ್ಯತ್ಯಾಸವಾದರೆ ರೋಗಿಯ ಸಂಬಂಧಿಗಳ ಮನಃಸ್ಥಿತಿ ಹೇಗಿರುತ್ತದೊ ಎಂದು ಆಲೋಚಿಸಿ, ದೂರು ಕೋರ್ಟು ಕಚೇರಿ ಎಂದೆಲ್ಲ ಬಂದಾಗ ದಾಖಲೆಗಳೇ ಮುಖ್ಯ ಎನ್ನಿಸಿ ವೈದ್ಯರು ರೋಗಿಯ ಆರೈಕೆಗಿಂತಲೂ ಹೆಚ್ಚಾಗಿ ಆ ನಿಟ್ಟನಲ್ಲಿ ವಿಚಾರ ಮಾಡಬೇಕಾಗಿ ಬಂದಿರುವುದು ನಿಜಕ್ಕೂ ದುರ್ದೈವವೇ ಸರಿ.

ಇದರ ಜೊತೆಯಲ್ಲಿಯೇ, ತುರ್ತು ಚಿಕಿತ್ಸೆಯ ಅವಶ್ಯಕತೆಯಿರುವ ರೋಗಿಗಳನ್ನು ದಾಖಲಿಸುವ ಮೊದಲು ಸಣ್ಣ ಮಟ್ಟದ ಆಸ್ಪತ್ರೆಗಳು ಹತ್ತುಬಾರಿ ಯೋಚಿಸುವಂತಾಗಿದೆ. ತಮ್ಮ ಕೈಯಲ್ಲಿರದ ಅಂಶಗಳಿಂದಾಗಿ ರೋಗಿಯ ಸ್ಥಿತಿ ಬಿಗಡಾಯಿಸಿದರೆ, ಆಗ ರೋಗಿಯ ಕಡೆಯವರಿಗೆ ವಿವರಿಸಿ ಹೇಳುವ ಕಷ್ಟವನ್ನು ಕಲ್ಪಿಸಿಕೊಂಡು ದಾಖಲಾತಿಗೇ ತಿರಸ್ಕರಿಸಿ, ಹೆಚ್ಚಿನ ಸೌಕರ್ಯಗಳಿರುವ ಆಸ್ಪತ್ರೆಗಳಿಗೆ ಕಳುಹಿಸುವಂತಹ ಘಟನೆಗಳೂ ನಡೆಯುತ್ತಿವೆ.

ಎಷ್ಟೋ ಆಸ್ಪತ್ರೆಗಳ ತುರ್ತುಚಿಕಿತ್ಸಾ ವಿಭಾಗದಲ್ಲಿ ಚಿಕಿತ್ಸೆಗೆ ಬೇಕಾದ ಸೌಕರ್ಯ ಮತ್ತು ಸಂಪನ್ಮೂಲಗಳ ಜೊತೆಯಲ್ಲಿಯೇ ಪೊಲೀಸ್ ರಕ್ಷಣೆಯ ವ್ಯವಸ್ಥೆಯನ್ನೂ ಇಡಬೇಕು ಎಂಬುದರ ಬಗ್ಗೆ ಸಾಕಷ್ಟು ಚರ್ಚೆಗಳಾಗಿದ್ದು, ಖಾಸಗಿ ಆಸ್ಪತ್ರೆಗಳ ತುರ್ತು ಚಿಕಿತ್ಸಾ ವಿಭಾಗದಲ್ಲಿ ಪೊಲೀಸ್ ರಕ್ಷಣೆ ಬೇಕು ಎಂದು ವೈದ್ಯರ ಸಮೂಹ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದೂ ಆಗಿದೆ.

ವೈದ್ಯರ ಈ ಎಲ್ಲ ಬವಣೆಗಳನ್ನು ಕಂಡ ಇಂದಿನ ಕೆಲವರು ಯುವಕರು ವೈದ್ಯಕೀಯ ಶಿಕ್ಷಣವನ್ನು ಆರಿಸಿಕೊಳ್ಳಲು ಹಿಂದು ಮುಂದು ನೋಡುತ್ತಿದ್ದಾರೆ. ಅಷ್ಟೇ ಅಲ್ಲ, ಭಾರತದಲ್ಲಿ ಎಂಬಿಬಿಎಸ್ ಮುಗಿಸಿದ ವೈದ್ಯ ವಿದ್ಯಾರ್ಥಿಗಳು ಹೆಚ್ಚಿನ ಶಿಕ್ಷಣಕ್ಕೆ ಮತ್ತು ವೃತ್ತಿಗಾಗಿ ಅಮೆರಿಕಾ, ಇಂಗ್ಲೆಂಡ್ ಮೊದಲಾದ ದೇಶಗಳತ್ತ ಹೊರಟಿದ್ದಾರೆ. ನಮ್ಮ ಪ್ರತಿಭಾವಂತ ವೈದ್ಯರೆಲ್ಲರೂ ಈ ರೀತಿ ನಿರ್ಧರಿಸಿದರೆ, ಮೊದಲೇ ವೈದ್ಯರ ಸಂಖ್ಯೆ ಕಡಿಮೆಯಿದ್ದು, ಕುಂಟುತ್ತಿರುವ ನಮ್ಮ ದೇಶದ ಆರೋಗ್ಯ ಕ್ಷೇತ್ರದ ಸ್ಥಿತಿ ಏನಾಗಬಹುದು ಊಹಿಸಿ.

ಮುಂದೆ ವೃತ್ತಿಯಲ್ಲಿ ಅನುಕೂಲವಾಗುವ ಅನೇಕ ಹೊಸ ಅಂಶಗಳನ್ನು ವೈದ್ಯಕೀಯ ಶಿಕ್ಷಣದಲ್ಲಿ ತಜ್ಞರು ಈಗ ಸೇರಿಸಿದ್ದಾರೆ. ಸಂವಹನ ಕೌಶಲ, ರೋಗಿಗಳೊಂದಿಗಿನ ವರ್ತನೆ, ಅನುಸರಿಸಬೇಕಾದ ಕೆಲವು ನೈತಿಕ ಅಂಶಗಳನ್ನು ಶಿಕ್ಷಣದ ಸಮಯದಲ್ಲಿಯೇ ಇದೀಗ ಕಲಿಸಲಾಗುತ್ತಿದೆ. ವೈದ್ಯ-ರೋಗಿಯ ಬಾಂಧವ್ಯದ ವೃದ್ಧಿಗೆ ಇಂತಹ ಪ್ರಯತ್ನಗಳೂ ನಡೆದಿವೆ.

ನೆನಪಿಡಿ, ಮಾತ್ರೆ ಔಷಧಗಳು ಕಾಯಿಲೆಯನ್ನು ವಾಸಿಮಾಡಬಹುದು, ಆದರೆ ರೋಗಿಯ ಆರೋಗ್ಯಸ್ಥಿತಿ ಮೊದಲಿನಂತಾಗಲು ವೈದ್ಯರ ಸಮಾಲೋಚನೆ-ಸಾಂತ್ವನ ಅತ್ಯಗತ್ಯ. ವೈದ್ಯ ನಿಮ್ಮ ಕಾಯಿಲೆಗೆ ಮಾತ್ರ ಚಿಕಿತ್ಸೆ ಕೊಡುವುದಿಲ್ಲ, ನಿಮ್ಮ ಆರೋಗ್ಯವರ್ಧನೆಗೆ ಬೇಕಾದ ಸಲಹೆ ಸೂಚನೆಗಳನ್ನೂ ತಿಳಿಸಿ ಹೇಳುತ್ತಾರೆ. ಆದರೆ ನೀವು ಅವರಲ್ಲಿ ನಂಬಿಕೆ ಇಡಬೇಕಷ್ಟೆ.

ಇತ್ತೀಚಿನ ವಿಶ್ವವನ್ನೇ ತಲ್ಲಣಗೊಳಿಸಿದ ಕೋವಿಡ್ ಸಾಂಕ್ರಾಮಿಕವನ್ನೇ ತೆಗೆದುಕೊಳ್ಳಿ. ವೈರಾಣುವಿನ ವರ್ತನೆಯೇ ಸರಿಯಾಗಿ ಗೊತ್ತಿರದ ಸಮಯದಲ್ಲಿಯೂ ಯಾವ ವೈದ್ಯನೂ ಚಿಕಿತ್ಸೆ ನೀಡುವುದಿಲ್ಲವೆಂದು ಮನೆಯಲ್ಲಿ ಕೂರಲಿಲ್ಲ. ಬದಲಾಗಿ, ಕುಟುಂಬದವರೇ ರೋಗಿಯ ಹತ್ತಿರ ಸುಳಿಯಲು ಹಿಂಜರಿದಾಗ ಈತ ಚಿಕಿತ್ಸೆಗೆ ಮುಂದಾದ. ಉಸಿರುಗಟ್ಟಿಸುವ ಪಿಪಿಯಿ ಉಡುಗೆಯಿಂದ ಪೂರ್ತಿ ದೇಹವನ್ನು ಮುಚ್ಚಿಕೊಂಡು ಕೋವಿಡ್ ರೋಗಿಗಳ ಆರೈಕೆಯಲ್ಲಿ ತೊಡಗಿದ. ಈ ಪ್ರಕ್ರಿಯೆಯಲ್ಲಿ ಸಾವಿರಕ್ಕೂ ಹೆಚ್ಚು ವೈದ್ಯರು ಸೋಂಕು ತಗುಲಿ ಮೃತರಾದರು. ಹಾಗಾಗಿ ಕೋವಿಡ್ ಸಮಯದ ವೈದ್ಯರ ಸೇವೆಯನ್ನು ಎಲ್ಲರೂ ವಿಶೇಷವಾಗಿ ಸ್ಮರಿಸಿಕೊಳ್ಳಬೇಕು.



ಒಬ್ಬ ತಜ್ಞ ವೈದ್ಯನಾಗಿ, ಉತ್ಕೃಷ್ಟ ರಾಜಕಾರಣಿಯಾಗಿ, ಶಿಕ್ಷಣತಜ್ಞನಾಗಿ, ಸ್ವಾತಂತ್ರ್ಯ ಹೋರಾಟಗಾರನಾಗಿ ಈ ದೇಶಕ್ಕೆ ಸೇವೆ ಸಲ್ಲಿಸಿದ ಡಾ. ಬಿಧಾನ್ ಚಂದ್ರ ರಾಯ್‌ರವರ ಜನ್ಮದಿನದ (ಪುಣ್ಯತಿಥಿ ಸಹ) ನೆನಪಿಗಾಗಿ ನಾವು ರಾಷ್ಟ್ರೀಯ ವೈದ್ಯರ ದಿನವನ್ನು ಆಚರಿಸುತ್ತಿದ್ದೇವೆ. ಡಾ. ರಾಯ್‌ರವರು ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿದ್ದಾಗಲೂ ರೋಗಿಗಳೊಂದಿಗಿನ ಸಮಾಲೋಚನೆಗೆಂದು ಒಂದಿಷ್ಟು ಸಮಯವನ್ನು ಹೊಂದಿಸಿಕೊಳ್ಳುತ್ತಿದ್ದುದು ವೈದ್ಯವೃತ್ತಿಗೆ ಅವರು ಕೊಡುತ್ತಿದ್ದ ಮಹತ್ವವನ್ನು ಸಾರಿ ಹೇಳುತ್ತದೆ.

ಡಾ. ರಾಯ್‌ಯವರನ್ನು ಈ ವೈದ್ಯರ ದಿನದಂದು ಸ್ಮರಿಸಿಕೊಳ್ಳೋಣ. ಅವರ ಜೊತೆಯಲ್ಲಿಯೇ ನಿಮ್ಮ ಬಡಾವಣೆಯಲ್ಲಿರುವ ಅಥವಾ ನಿಮ್ಮ ಆತ್ಮೀಯ ವಲಯದಲ್ಲಿರುವ ವೈದ್ಯರನ್ನು ನೆನಪು ಮಾಡಿಕೊಳ್ಳಿ. ಈ ವೈದ್ಯರ ದಿನದಂದು ಅವರನ್ನು ನಿಮ್ಮ ಕಚೇರಿ ಅಥವಾ ಸಂಸ್ಥೆಗೆ ಆಹ್ವಾನಿಸಿ ಗೌರವಿಸಿ, ಕೃತಜ್ಞತೆ ತಿಳಿಸಿ. ಆರೋಗ್ಯಕರ ಸಮಾಜದ ನಿರ್ಮಾಣಕ್ಕೆ ಕಾರಣರಾದ ವೈದ್ಯರೆಲ್ಲರೂ ಇದಕ್ಕೆ ಖಂಡಿತ ಅರ್ಹರು.

## ವಿಶ್ವಾಸ ಬೇಕು

ಯಾವುದೇ ವೈದ್ಯರಲ್ಲಿ ಸಲಹೆ ಪಡೆಯುವಾಗ ಅವರ ನಡೆ ನುಡಿಗಳಲ್ಲಿ ವಿಶ್ವಾಸ ಮುಖ್ಯ. ಅವರಲ್ಲಿ ನಿಮ್ಮನ್ನು ಬಾಧಿಸುವ ಎಲ್ಲ ಗುಣ ಲಕ್ಷಣಗಳನ್ನೂ ಹೇಳಿಕೊಳ್ಳಬೇಕು. ಈ ಮೊದಲು ನೀವು ಆ ಸಮಸ್ಯೆಗಾಗಿ ಚಿಕಿತ್ಸೆ ತೆಗೆದುಕೊಂಡಿದ್ದರೆ ಅದರ ಬಗ್ಗೆಯೂ ತಿಳಿಸಬೇಕು. ನಿಮ್ಮ ಹಳೆಯ ಎಲ್ಲ ದಾಖಲೆಗಳನ್ನು ವೈದ್ಯರಿಗೆ ತೋರಿಸಬೇಕು. ನಿಮ್ಮ ಹವ್ಯಾಸಗಳು, ದುಶ್ಚಟಗಳು, ಅಲರ್ಜಿ ಮೊದಲಾದುವನ್ನು ಸಂಪೂರ್ಣ ವಿವರಗಳೊಂದಿಗೆ ತಿಳಿಸಬೇಕು. ಹಾಗೆಯೇ ತುರ್ತು ಪರಿಸ್ಥಿತಿಯಲ್ಲಿ ಸಂಬಂಧಿಗಳು ವಿವೇಚನೆ ಕಳೆದುಕೊಳ್ಳಬಾರದು. ಇದು ಅವರಿಗೆ ಸೂಕ್ತ ಚಿಕಿತ್ಸೆಯನ್ನು ಕೊಡಲು ನೆರವಾಗುತ್ತದೆ.



## ಗುರುತಿಸುವ ಮನಸ್ಸು ಬೇಕು

ತಮ್ಮ ವೃತ್ತಿಯ ಜೊತೆ ಜೊತೆಯಲ್ಲಿಯೇ ಒಂದಿಷ್ಟು ಸಮಾಜಮುಖಿ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ವೈದ್ಯರು ನಮ್ಮೊಂದಿಗಿದ್ದಾರೆ. ಅವಕಾಶ ಸಿಕ್ಕಾಗೆಲ್ಲಾ ಗ್ರಾಮೀಣ ಪ್ರದೇಶದ ಜನರಿಗಾಗಿ ಆರೋಗ್ಯ ಶಿಕ್ಷಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವವರಿದ್ದಾರೆ. ಜನರಲ್ಲಿ ಆರೋಗ್ಯ ಜಾಗೃತಿಯನ್ನು ಮೂಡಿಸುವಂತಹ ಮಹತ್ತರವಾದ ಕೆಲಸವನ್ನು ಅತಿ ಶ್ರದ್ಧೆಯಿಂದ ಮಾಡುವ ವೈದ್ಯರು ಇಂದಿಗೂ ಇದ್ದಾರೆ. ವೈದ್ಯಸಾಹಿತ್ಯದ ಮೂಲಕ ಜನಸಾಮಾನ್ಯರಲ್ಲಿ ಆರೋಗ್ಯದ ಅರಿವನ್ನು ಹೆಚ್ಚಿಸುವ ವೈದ್ಯರು ನಮ್ಮಲ್ಲಿದ್ದಾರೆ. ಆದರೆ, ಅವರ ಒಳ್ಳೆಯ ಮನಸ್ಸನ್ನು ಗುರುತಿಸುವವರು ಬೇಕಷ್ಟೆ.

# ಸ್ಫೂರ್ತಿಯ ಸೆಲೆ ಬತ್ತದಿರಲಿ



ವೈದ್ಯರಿಗೂ ಒತ್ತಡಗಳು ಎದುರಾಗುವುದು ಸಹಜ. ಅವರೂ ತಮ್ಮ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಬೇಕಾದದ್ದು ಸಮಾಜದ ದೃಷ್ಟಿಯಿಂದ ಅನಿವಾರ್ಯ. ವೈದ್ಯರು ಕೇವಲ ಔಷಧಗಳನ್ನು ಮಾತ್ರವೇ ನೀಡುತ್ತಿಲ್ಲ; ಬೇರೆ ಬೇರೆ ಕ್ಷೇತ್ರಗಳಿಗೆ ಅವರು ನೀಡಿರುವ ಕೊಡುಗೆಯೂ ಅಪೂರ್ವ. ವೈದ್ಯರನ್ನು ಗೌರವಿಸುವುದು ಸಮಾಜದ ಕರ್ತವ್ಯವೇ ಹೌದು.

• ಡಾ. ಶ್ರೀನಿವಾಸ ಹರಪನಹಳ್ಳಿ



‘ಇವತ್ತು ಡಿಸ್ಚಾರ್ಜ್ ಆಗ್ತಾ ಇದ್ದೀವಿ ಡಾಕ್ಟ್ರೇ, ತುಂಬಾ ಉಪಕಾರವಾಯ್ತು.’

‘ಸುಸೂತ್ರವಾಗಿ ಹೆರಿಗೆಮಾಡಿ ತಾಯಿ-ಮಗೂನ ಉಳಿಸಿ ಕೊಟ್ರಿ!’

‘ನೀವು ಹೇಳಿದ ಹಾಗೆ ಮಾತ್ರೆ ತಗೊಂಡಿದೀನಿ ಡಾಕ್ಟ್ರೇ. ನೋವು ಕೂಡ ಕಡಿಮೆಯಾಗಿದೆ. ಮತ್ತೆ ಯಾವಾಗ ಬರಲಿ?’

ಈ ತರಹದ ಸಂಭಾಷಣೆಗಳು ವೈದ್ಯಲೋಕದಲ್ಲಿ ಸಾಮಾನ್ಯ. ವೈದ್ಯಕೀಯ ವೃತ್ತಿಯಲ್ಲಿ ದಶಕಗಳ ಕಾಲ ಸೇವೆ ಸಲ್ಲಿಸಿ ಸಂತೃಪ್ತ ಜೀವನ ನಡೆಸುತ್ತಿರುವ ಅನೇಕ ವೈದ್ಯರಿಗೆ ಇಂತಹ ಮಾತುಗಳೇ ಸ್ಫೂರ್ತಿಸೆಲೆ!

ಇಂದು ಜುಲೈ ಮೊದಲನೇ ದಿನಾಂಕ. ಭಾರತರತ್ನ ಡಾ. ಬಿಧಾನ್ ಚಂದ್ರ ರಾಯ್ ಅವರ ಗೌರವಾರ್ಥ ಈ ದಿನವನ್ನು ‘ವೈದ್ಯರ ದಿನ’ವೆಂದು ಆಚರಿಸುತ್ತಿದ್ದೇವೆ.

ಅಂದಿನ ಡಾ. ಬಿ. ಸಿ. ರಾಯ್ ಅವರಿಂದ ಹಿಡಿದು ಇಂದಿನವರೆಗೆ ವೈದ್ಯಕೀಯ ಲೋಕ ಹಲವಾರು ಬೆಳವಣಿಗೆಗಳಿಗೆ ಸಾಕ್ಷಿಯಾಗಿದೆ. ಒಂದೆಡೆ ಅತ್ಯುನ್ನತ ಆವಿಷ್ಕಾರಗಳು ರೋಗಿಗಳ ಪ್ರಾಣಗಳನ್ನು ಉಳಿಸುವಲ್ಲಿ ಸಫಲವಾದರೆ, ಇನ್ನೊಂದೆಡೆ ರೋಗಿಗಳ ಸಂಬಂಧಿಕರು ವೈದ್ಯರನ್ನು, ಆಸ್ಪತ್ರೆಗಳನ್ನ ದೂಷಿಸುವುದು ಸಾಮಾನ್ಯವಾಗಿದೆ. ಒಂದೊಮ್ಮೆ ಶ್ರೇಷ್ಠವೃತ್ತಿಯಾಗಿದ್ದ ವೈದ್ಯವೃತ್ತಿ ಇಂದು ವ್ಯಾಪಾರಕ್ಕಿಳಿದ ಆರೋಪಕ್ಕೆ ಗುರಿಯಾಗಿದೆ. ವೈದ್ಯರನ್ನು ಸೇವೆ ಒದಗಿಸುವವರು ಮತ್ತು ರೋಗಿಗಳನ್ನು ಗ್ರಾಹಕರೆಂಬಂತೆ ಬಿಂಬಿಸಲಾಗುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಂತೂ ಕೆಲವೊಮ್ಮೆ ಇದು ಅತಿರೇಕಕ್ಕೆ ಹೋಗುತ್ತದೆ. ಬದಲಾಗಿರುವ ಈ ದೃಷ್ಟಿಕೋನಕ್ಕೆ ಕೆಲವು ವೈದ್ಯ-ರೋಗಿಗಳ ಹಳಸಿದ ಸಂಬಂಧವೇ ಕೊಂಚಮಟ್ಟಿಗೆ ಕಾರಣವೆಂದರೂ ತಪ್ಪಿಲ್ಲ.



ಹೀಗಿದ್ದರೂ ಅಸಂಖ್ಯ ವೈದ್ಯರು ರೋಗಿಗಳ ಸೇವೆಗೇ ತಮ್ಮ ಜೀವನವನ್ನು ಮೀಸಲಿಟ್ಟಿದ್ದಾರೆ. ಕೋವಿಡ್ ಸಮಯದಲ್ಲಿ ವೈದ್ಯರು ತಮ್ಮ ಜೀವವನ್ನೇ ಪಣಕ್ಕಿಟ್ಟು ಚಿಕಿತ್ಸೆ ನೀಡಿದ ಅನೇಕ ಉದಾಹರಣೆಗಳಿವೆ. ಅನೇಕ ವೈದ್ಯರು ಕೇವಲ ವೈದ್ಯಕೀಯ ವೃತ್ತಿಯಲ್ಲಿ ಮಾತ್ರ ನೈಪುಣ್ಯವನ್ನು ತೋರದೆ ವಿವಿಧ ರಂಗಗಳಲ್ಲಿ ಕೂಡ ಮುಂಚೂಣಿಯಲ್ಲಿದ್ದಾರೆ. ನಮ್ಮವರೇ ಆದ ಡಾ. ದೇವಿ ಶೆಟ್ಟಿ ‘ಯಶಸ್ವಿನಿ’ ಯೋಜನೆಯ ಮೂಲಕ ಆರೋಗ್ಯವಿಮೆಯ ವ್ಯಾಪ್ತಿಯನ್ನೇ ಬದಲಾಯಿಸಿ ಅನೇಕ ಬಡರೋಗಿಗಳ ಬದುಕನ್ನು ಹಸನಾಗಿಸಿದ್ದಾರೆ.



ಖ್ಯಾತ ಹೃದಯರೋಗ ತಜ್ಞೆ ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಮಾನಸಿಕರೋಗ ತಜ್ಞ ಡಾ. ಅಶೋಕ ಪೈ ಅವರಂಥವರು ತಮ್ಮ ವೈದ್ಯಕೀಯ ಲೇಖನಗಳ ಮೂಲಕ ಅನೇಕ ರೋಗಿಗಳಿಗೆ ಆಶಾಕಿರಣವಾಗಿದ್ದಾರೆ. ಮುಂಬೈನ ಕ್ಯಾನ್ಸರ್ ತಜ್ಞ ಡಾ. ಮುರಾದ್ ಲಾಲಾ ಕೆಲವು ವರ್ಷಗಳ ಹಿಂದೆ ಮೌಂಟ್ ಎವರೆಸ್ಟ್ ಶಿಖರವನ್ನು ಏರಿ ಸಾಹಸಕ್ರೀಡೆಗಳನ್ನು ಕೈಗೊಳ್ಳುವವರಿಗೆ ಆದರ್ಶಪ್ರಾಯವಾದರು. ಇಂದು ಹಲವರು ವೈದ್ಯರು ವೈದ್ಯಕೀಯ ವೃತ್ತಿಯಲ್ಲದೆ ಇನ್ನಿತರ ಕ್ಷೇತ್ರಗಳಲ್ಲೂ ತಮ್ಮ ಛಾಪನ್ನು ಮೂಡಿಸುತ್ತಿದ್ದಾರೆ. ಅದು ಸಿನಿಮಾವೇ ಆಗಿರಬಹುದು, ಕ್ರೀಡೆಯಾಗಿರಬಹುದು ಅಥವಾ ಸಂಗೀತ-ಸಾಹಿತ್ಯ ಕ್ಷೇತ್ರವೂ ಆಗಿರಬಹುದು. ಕೊನೆಗೆ ರಾಜಕೀಯವೂ ಆಗಿರಬಹುದು. ಒಮ್ಮೆ ಡಾಕ್ಟರಾದರೆ ಬೇರೇನೂ ಮಾಡಲು ಸಮಯವಿರುವುದಿಲ್ಲ ಎಂದು ಭಾವಿಸುವವರಿಗೆ ಇವರೆಲ್ಲಾ ಒಂದು ಅಪವಾದದಂತೆ ಕಾಣುತ್ತಾರೆ. ವೈದ್ಯರಾಗಿಯೂ ನಮ್ಮ ಸೃಜನಶೀಲತೆಯನ್ನು ಉಳಿಸಿ, ಬೆಳೆಸಿಕೊಳ್ಳಬಹುದು ಎನ್ನುವುದಕ್ಕೆ ಇಂಥ ವೈದ್ಯರೇ ಸಾಕ್ಷಿ. ವೈದ್ಯ ಸಮುದಾಯ ಅದರಲ್ಲಿಯೂ, ಯುವವೈದ್ಯರು ತಮ್ಮ ಕ್ಷೇತ್ರದಲ್ಲಿನ ತಳಮಳಕ್ಕೆ ಹೆಚ್ಚು ಗಮನ ಕೊಡದೆ ತಮ್ಮ ವೃತ್ತಿಯ ಜೊತೆಗೆ ತಮಗಿಷ್ಟವಾಗುವ ಹವ್ಯಾಸವನ್ನೋ ಕೆಲಸವನ್ನೋ ಬೆಳೆಸಿಕೊಂಡು ಹೋಗಬೇಕು. ಇವು ನಮ್ಮಲ್ಲಿನ ನಕಾರಾತ್ಮಕ ಭಾವನೆಗಳನ್ನು ದೂರಗೊಳಿಸುದರ ಜೊತೆ ನಮ್ಮ ಕಾರ್ಯಕ್ಷಮತೆಯನ್ನೂ ಹೆಚ್ಚಿಸುತ್ತವೆ.



ಎಲ್ಲರಿಗೂ ಗೊತ್ತಿರುವ ಹಾಗೆ ವೈದ್ಯಕೀಯ ಕ್ಷೇತ್ರದಲ್ಲಿ ಸರ್ಕಾರಿ ಹಾಗೂ ಖಾಸಗಿ ಎಂಬ ಎರಡು ಬೃಹತ್ ವಲಯಗಳಿವೆ. ಸೇವೆ ಸಲ್ಲಿಸಲು ಎರಡೂ ವಲಯಗಳಲ್ಲಿ ವೈದ್ಯರಿಗೆ ವಿಪುಲವಾದ ಅವಕಾಶಗಳಿವೆ. ಎರಡೂ ಸಂಕೀರ್ಣವಾದ ವ್ಯವಸ್ಥೆಗಳೇ. ಖಾಸಗಿ ವಲಯದಲ್ಲಿ ವೈದ್ಯರು ‘ಸಕತ್ತಾಗಿ ದುಡ್ಡು ಗಳಿಸುತ್ತಾರೆ’ ಎನ್ನುವವರು ಅಲ್ಲಿನ ಖರ್ಚು-ವೆಚ್ಚ, ಕೆಲಸಮಾಡುವವರನ್ನು ಸಂಭಾಳಿಸುವ ಕಷ್ಟ, ವಿಮೆ, ತೆರಿಗೆಗಳನ್ನು ನೋಡುವ ಗೋಜಿಗೆ ಹೋಗುವುದಿಲ್ಲ. ಹಾಗೆಯೇ ಸರ್ಕಾರಿ ವಲಯದ ಕೆಂಪುಪಟ್ಟಿ ನೀತಿ, ಕಳಪೆ ಔಷಧಗಳು ಮತ್ತು ಇನ್ನಿತರ ಮೂಲಸೌಲಭ್ಯಗಳ ಕೊರತೆಯ ಬಗ್ಗೆ ಅಸಹನೆಯನ್ನು ವ್ಯಕ್ತಪಡಿಸುವವರು ಅಲ್ಲಿನ ವೈದ್ಯಕೀಯ ಸಿಬ್ಬಂದಿಗೆ ಪ್ರತಿ ತಿಂಗಳು ತಪ್ಪದೇ ದೊರಕುವ ಸಂಬಳ, ನಿಯಮಿತ ರಜೆ, ಅನೇಕ ಭತ್ಯೆಗಳನ್ನು ಮರೆಯುತ್ತಾರೆ. ಆದ್ದರಿಂದ ಯಾವ ವಲಯ ವೈದ್ಯಕೀಯ ವೃತ್ತಿಗೆ ಹೆಚ್ಚು ಸೂಕ್ತ ಎಂದು ಹೇಳುವುದು ತುಂಬಾ ಕಷ್ಟ. ಸೇವೆ ಎಲ್ಲಿ ಮಾಡಿದರೂ ಶ್ರೇಷ್ಠ ತಾನೇ? ನಾವು ಮಾಡುವ ಪ್ರತಿಯೊಂದು ಸೇವೆಯಲ್ಲೂ ದೇವರನ್ನು ಕಾಣಬಹುದು – ಎಂದು ಗಾಂಧಿಜೀಯವರೇ ಹೇಳಿದ್ದಾರೆ. ಸಮಸ್ಯೆಗಳು ಎಲ್ಲ ಕಡೆಗೂ ಇವೆ. ಇಂಥ ಸಮಸ್ಯೆಗಳ ನಡುವೆಯೂ ಅನೇಕ ವೈದ್ಯರು ಎರಡೂ ವಲಯಗಳಲ್ಲಿ ತಮ್ಮ ತಮ್ಮ ಬಾಳನ್ನು ಕಂಡುಕೊಂಡಿದ್ದಾರೆ. ರೋಗಿಗಳ ಸೇವೆಗೆ ತಮ್ಮ ಸಮಯವನ್ನು ಮುಡಿಪಾಗಿಟ್ಟಿದ್ದಾರೆ. ಆದ್ದರಿಂದ ಈ ದಿನವನ್ನು ‘ವೈದ್ಯರ ದಿನ’ವಾಗಿ ಆಚರಿಸುವುದರ ಮೂಲಕ ವೈದ್ಯರಿಗೆ ಧನ್ಯವಾದಗಳನ್ನು ತಿಳಿಸುವುದು ಸಮಾಜದ ಕರ್ತವ್ಯವನ್ನು ಎತ್ತಿ ತೋರಿಸುತ್ತದೆ.





ವೈದ್ಯರಲ್ಲೂ ಹಲವು ರೀತಿಯವರಿದ್ದಾರೆ. ಅನೇಕರು ಆಸ್ಪತ್ರೆಯಲ್ಲೋ, ತಮ್ಮ ಕ್ಲಿನಿಕ್ಕಿನಲ್ಲೋ ರೋಗಿಗಳನ್ನು ನೋಡಿ, ಚಿಕಿತ್ಸೆ ನೀಡಿದರೆ ಕೆಲವರು ವೈದ್ಯಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ವೈದ್ಯಕೀಯಶಾಸ್ತ್ರವನ್ನು ಕಲಿಸುತ್ತಾರೆ. ಇನ್ನೂ ಕೆಲವರು ತಮ್ಮ ಲ್ಯಾಬಿನಲ್ಲಿ ಕುಳಿತು ಮೈಕ್ರೋಸ್ಕೋಪ್ ಮೂಲಕವೋ, ರಾಸಾಯನಿಕದ ಮೂಲಕವೋ ರೋಗವೊಂದರ ಮೂಲಕ್ಕೇ ಪ್ರವೇಶಿಸಿ ಅದರ ನಿರ್ಮೂಲನೆಗೆ ಅನೇಕ ಪ್ರಯೋಗಗಳನ್ನು ಮಾಡುತ್ತಾರೆ. ಇವೆರಡೂ ಗುಂಪುಗಳು ಜನಸಾಮಾನ್ಯರ ಸಂಪರ್ಕಕ್ಕೆ ಹೆಚ್ಚು ಸಿಗುವುದಿಲ್ಲ. ಆದರೂ ಇವರು ಕಲಿಸುವ ವಿಧಾನ, ಇವರು ನೀಡುವ ರಿಪೋರ್ಟುಗಳು ಮೊದಲನೇ ಗುಂಪಿನ ವೈದ್ಯರು ನೀಡುವ ಚಿಕಿತ್ಸೆ ಸರಿಯಾದ ದಿಕ್ಕಿನಲ್ಲಿ ಸಾಗಲು ದಾರಿದೀಪದಂತೆ ಸಹಾಯ ಮಾಡುತ್ತವೆ.

ವೈದ್ಯರಿಗೂ ಅನೇಕ ಒತ್ತಡಗಳಿರುತ್ತವೆ ನಿಜ. ಆದರೆ ಇಂದಿನ ಧಾವಂತದ ಜೀವನಶೈಲಿಯಲ್ಲಿ ಯಾರಿಗೆ ತಾನೇ ಒತ್ತಡವಿರುವುದಿಲ್ಲ? ಜನರಿಗೆ ಒತ್ತಡವನ್ನು ಕಡಿಮೆ ಮಾಡುವ ಉಪಾಯವನ್ನು ಹೇಳಿ, ಚಿಕಿತ್ಸೆ ಸೂಚಿಸಿ ಕೊನೆಗೆ ತಾವೇ ಒತ್ತಡಕ್ಕೊಳಗಾಗುವ ಪರಿಸ್ಥಿತಿ ಯಾವ ವೈದ್ಯನಿ(ಳಿ)ಗೂ ಬರಬಾರದಲ್ಲವೇ! ಆದ್ದರಿಂದ ಈ ನಿಟ್ಟಿನಲ್ಲಿ ವೈದ್ಯಕೀಯ ಸಮುದಾಯ ಗಂಭೀರವಾಗಿ ಯೋಚಿಸಬೇಕು. ಒಟ್ಟಾರೆಯಾಗಿ ಅಥವಾ ವೈಯುಕ್ತಿಕವಾಗಿ ವೈದ್ಯರೂ ತಮ್ಮ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಬೇಕು. ಹದಿನೆಂಟನೆ ವಯಸ್ಸಿಗೆ ವೈದ್ಯಕೀಯ ಶಿಕ್ಷಣ ಆರಂಭಿಸುವ ಅನೇಕರು ಸುಮಾರು ಮೂವತ್ತನೇ ವಯಸ್ಸಿನವರೆಗೂ ಪದವಿ, ಸ್ನಾತಕೋತ್ತರ ಪದವಿ, ತರಬೇತಿಗಳಲ್ಲೇ ಹೆಚ್ಚಿನ ಸಮಯ ಕಳೆಯುವುದರಿಂದ ಅವರ ಸೃಜನಶೀಲತೆ ಬತ್ತಿಹೋಗುವ ಅಪಾಯವಿರುತ್ತದೆ. ನಂತರ ಮದುವೆ, ಪ್ರಾಕ್ಟೀಸು ಎಂದು ಕೆಲವು ವರ್ಷ ಕಳೆಯುವಷ್ಟರಲ್ಲಿ ಕೆಲಸದ ಒತ್ತಡ ಪ್ರಾರಂಭವಾಗಿರುತ್ತದೆ. ಇವೆಲ್ಲದರ ನಡುವೆಯೂ ನಮ್ಮ ಸ್ಫೂರ್ತಿಯ ಸೆಲೆಯನ್ನು ಬತ್ತದಂತೆ ನೋಡಿಕೊಳ್ಳುವುದು ಕಷ್ಟದ ಕೆಲಸ. ಆದರೆ ಅಸಾಧ್ಯವೇನಲ್ಲ. ವೃತ್ತಿ-ಹವ್ಯಾಸಗಳೆರಡರಲ್ಲೂ ಸಮತೋಲನ ಸಾಧಿಸಿ ಎರಡೂ ಒಂದಕ್ಕೊಂದು ಪೂರಕವಾಗಿರುವಂತೆ ನಮ್ಮ ಜೀವನಶೈಲಿಯನ್ನು ರೂಪಿಸಿಕೊಳ್ಳುವುದು ತುಂಬ ಮುಖ್ಯ. ಒಂದು ಕ್ಷಣದಿಂದ ಮುಂದಿನ ಕ್ಷಣಕ್ಕೆ ಜಿಗಿಯುವುದೇ ಜೀವನ. ಅದೇ ರೀತಿ ಒಂದು ಸಂತೃಪ್ತಭಾವದಿಂದ ಮತ್ತೊಂದು ಸಂತೃಪ್ತಭಾವವನ್ನು ಪ್ರವೇಶಿಸುವುದೇ ನಾವು ನಮಗೆ ನೀಡಬಹುದಾದ ದೊಡ್ಡ ಉಡುಗೊರೆ.

ಹಳೆಯ ವೈದ್ಯರು ನೇಪಥ್ಯಕ್ಕೆ ಸರಿದಂತೆ ಹೊಸ ವೈದ್ಯರು ಪ್ರವರ್ಧಮಾನಕ್ಕೆ ಬರುತ್ತಾರೆ. ಇಲ್ಲಿ ಯಾರೂ ಶಾಶ್ವತರಲ್ಲ. ಇಲ್ಲಿ ಕೊನೆಗೆ ಉಳಿಯುವುದು ಆದರ್ಶಗಳು ಮಾತ್ರ. ಆದ್ದರಿಂದ ಈ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ವೈದ್ಯಕೀಯಶಾಸ್ತ್ರದ ಹಿರಿಮೆಯನ್ನು ಎತ್ತಿ ಹಿಡಿಯುವುದು ಎಲ್ಲ ವೈದ್ಯರ ಕರ್ತವ್ಯವಾಗಿದೆ.

‘ಡಾಕ್ಟ್ರೇ, ಆಪರೇಷನ್ ಸಮಯದಲ್ಲಿ ತುಂಬಾ ನೋವಾಗುತ್ತಂತೆ ಹೌದಾ?’

‘ಇಲ್ಲಮ್ಮ, ನೋವಾಗದಂತೆ ನಾನು ಅರಿವಳಿಕೆ ಮದ್ದನ್ನು ನೀಡುತ್ತೇನೆ. ನಿಮಗೆ ಕೊಂಚವೂ ತೊಂದರೆಯಾಗಲ್ಲ.’

‘ಅಷ್ಟು ಮಾಡಿ ಸಾಕು. ನಿಮಗೆ ಪುಣ್ಯ ಬರುತ್ತೆ ಡಾಕ್ಟ್ರೇ.’

ಒಬ್ಬ ವೈದ್ಯನಿಗೆ ಸಂತೃಪ್ತಭಾವ ಬರಲು ಇಷ್ಟು ಸಾಕಲ್ಲವೇ?



# ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

## JOB OPPORTUNITIES

### Graphic Designers

**WANTED MALE/** Female Graphic Designer (Corel Draw Photoshop Illustrator) for a Pvt Limited Company in around Rajajinagar. Contact: 9108458798/ 23384085

### Wanted

**WANTED POST** Graduate Lady Teachers for High school & Higher primary English Medium B.sc.B.Ed (PCM,CBZ),BA,B.Ed, English,History, Geography,5years Experience Freshers & Retired teachers can also apply.Walk-in-interview on 4/7/22 and 6/7/22 Pandit Jawaharlal Nehru Memorial High school Contact-9632315392.

**REQUIRED SOCIAL,** ENGLISH TEACHER for High School,Head Mistress. Royal Public School.Jnanabharathi. Call: 8867569333/ 9035033560

### ಶ್ರೀ ಕಾಳಿದಾಸ ಸಹಕಾರ ಬ್ಯಾಂಕ್ ನಿಯಮಿತ

ಕರ್ನಾಟಕ ಪ್ರದೇಶ ಕುರುಬರ ಸಂಘದ ಕಟ್ಟಡ, 2ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು-560 009. ದೂರವಾಣಿ ಸಂಖ್ಯೆ : 080-22263868, 41662039

**ಸಿಬ್ಬಂದಿ ನೇಮಕಾತಿ ಪ್ರಕಟಣೆ**

ಶ್ರೀ ಕಾಳಿದಾಸ ಸಹಕಾರ ಬ್ಯಾಂಕ್ ನಿಯಮಿತ, ಗಾಂಧಿನಗರ, ಬೆಂಗಳೂರು-09, ಇದರಲ್ಲಿ ಖಾಲಿ ಇರುವ ಈ ಕೆಳಕಂಡ ಏಳು (7) ಹುದ್ದೆಗಳನ್ನು ಲಿಖಿತ ಪರೀಕ್ಷೆ ಹಾಗೂ ಸಂದರ್ಶನ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ದಿನಾಂಕ 01.07.2022 ರಿಂದ ಅರ್ಜಿ ಆಹ್ವಾನಿಸಲಾಗಿದೆ.

| ಕ್ರ. ಸಂ. | ಹುದ್ದೆಯ ವಿವರ | ವೇತನ ಶ್ರೇಣಿ ರೂ. | ಹುದ್ದೆಗಳ ಸಂಖ್ಯೆ |
|---|---|---|---|
| 1 | ಮುಖ್ಯ ಕಾರ್ಯನಿರ್ವಹಣಾಧಿಕಾರಿ | 22800 – 43200 | 1 |
| 2 | ಸಹಾಯಕ ಲೆಕ್ಕಿಗ | 16000 – 29600 | 2 |
| 3 | ಕಿರಿಯ ಸಹಾಯಕ | 12500 – 24000 | 4 |
| | | ಒಟ್ಟು | 7 |

ಅರ್ಜಿ ನಮೂನೆ / ಮೀಸಲಾತಿ / ವಿದ್ಯಾರ್ಹತೆ / ವಯೋಮಿತಿ / ಅರ್ಜಿ ಶುಲ್ಕ / ಆಯ್ಕೆ ವಿಧಾನ / ಲಗತ್ತಿಸಬೇಕಾದ ಪ್ರಮಾಣ ಪತ್ರಗಳು, ನಿಬಂಧನೆಗಳು ಮತ್ತು ಸೂಚನೆಗಳು ಇತ್ಯಾದಿ ವಿವರಗಳು ಬ್ಯಾಂಕಿನ ವೆಬ್‌ಸೈಟ್ : www.kalidasabank.com ರಲ್ಲಿ ಲಭ್ಯವಿರುತ್ತದೆ. ಹೆಚ್ಚಿನ ವಿವರಗಳಿಗೆ ಬ್ಯಾಂಕಿನ ದೂರವಾಣಿ ಸಂಖ್ಯೆ: 080 22263868ನ್ನು ಸಂಪರ್ಕಿಸಬಹುದು. ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ 30.07.2022 ರಂದು ಸಂಜೆ 5.00 ಗಂಟೆಯೊಳಗೆ ಖುದ್ದಾಗಿ/ಅಂಚೆ/ಕೊರಿಯರ್ ಮೂಲಕ ಸಲ್ಲಿಸಬಹುದಾಗಿದೆ.

ಸಿಬ್ಬಂದಿ ನೇಮಕಾತಿ ಸಮಿತಿ ಪರವಾಗಿ
ಸಹಿ/-
ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಪ್ರ)

ಸ್ಥಳ: ಬೆಂಗಳೂರು
ದಿನಾಂಕ: 24.06.2022

### General

**WANTED MBA/** Any Degree Female Candidate for Marketing for Reputed Switchgear Industry in Peenya. 2 to 3 years experience is required. Contact: 080-28392416, 28398768 Mobile: 9844062416, 9844302358

### Multiple Vacancy

**WANTED FIELD** EXECUTIVES, OPERATION MANAGER and GENERAL MANAGER to work in Poojyaya Security Services, Contact @ 080- 23536744, 9845996744 raghu_sgr@yahoo.co.in / poojyaya2005@gmail.com

### Part-Time Jobs

**REPUTED MNC** COMPANY will Provide WORK FROM HOME, Earn 35000 to 40000 Malleshwaram: 7019215243/ 9886641282

### Teachers/ Professors

**V.I.P. ENGLISH** MEDIUM HIGH SCHOOL, Adugodi, Bengaluru-30 requires NURSERY KANNADA, MATHEMATICS, SCIENCE TEACHERS 080-22120030 9008726344.

### M G Road And Around

**READY TO** occupy 4 Bed Residences of 7500 sft off MG Road. Gated community with gymnasium, swimming pool and more amenities. Starting at Rs. 16 Cr. Call: 6366561003 to know more.

## REAL ESTATE SELLING

### Flat

### CV Raman Nagar

**PRESTIGE RAPPERSWIL,** Super luxury 3 bedroom + maids room in CV Raman Nagar, off Indiranagar available for sale, Starting Price Rs. 2.67 Cr, for details, call: 7259665390

### Frazer Town

**LUXURIOUS READY** 3 Bed Large Apartment with Staff Quarter in Frazer Town. Gated complex with swimming pool and clubhouse. Price Rs. 3.8 Cr. For details contact -7625058333

### Kammanahalli

**PRESTIGE NORTH** POINT, Kammanahalli, 2, 2.5 & 3 BHK, ready to occupy apartment with all amenities for resale. Call: 6366971311.

### Koramangala

**PRESTIGE PINEWOOD,** Koramangala, 2, 2.5 & 3 BHK, ready to occupy apartment with all amenities for resale. Call: 9900020184

### Mahalakshmi Layout

**READY TO** Move, 3 BHK Flats, 1 KM from Iskcon Temple & Metro Station, Few Flats Left. 9845014364/ 9513999423

### Uttarahalli

**PRESTIGE LAKE** RIDGE, Uttarahalli, 1 BHK, ready to occupy apartment with all amenities for resale. Call: 9008999266.

### Whitefield

**PRESTIGE WHITE** MEADOWS, Super luxury Penthouse in Whitefield with Private Gym, Spa and Indoor Swimming Pool. Price Rs. 15 Cr. Call: 9108577397

### House

### Basaveshwaranagar

**FOR SALE** Prime property BDA allotment, Mahaganapathi Nagar approx. 1500sft plot with house. Contact: 9341217084.

### Sites

### Devanahalli

**PRESTIGE GOLFSHIRE MARINA,** Plot of 13345 Sft for sale on Nandi Hills Road. For details, call: 7022549452

### Jakkur

**SAMPIGEHALLI MAIN** road w/f plot on 50ft road (Proposed 60ft road) ideal for hospital or institution Plot area 43560 A Khatha Price 4750/sft. whats App Msg Only, Estate Agent: 8150806050

### Industrial & Factory

### General

**SALE/ RENT,** 10000, 50000 to 1 lakh sqft with crane, land/ shed available at peenya, Dobespet, Bhudihal, Mysore Road, Harohalli. Contact: 9902030789

## REAL ESTATE BUYING

### Sites

### Anjanapura

**BDA SITES** Wanted @ Anjanapura Banashankari 6th Stage, Vishweshwarya Layout, Kempegowda Layout 20x30 30x40,40x60 Contact: 9945610779

### Vishweshwariah Layout

**WANTED SITES** 20x30, 30x40,40x60,50x80 Vishveshwaraiah layout, Kempegowda Layout, RHCS-Layout,NGEF-Layout, ITI-Layout, Arkavathi Layout-8861063532

## RENTAL PROPERTIES

### Accommodation Available

### Commercial

**AVAILABLE COMMERCIAL** Building 10000 sqft for Rent at Banashankari 2nd Stage, K.R.Road. Contact: 9341234288/ 9663224353.

### Flats

**PRESTIGE LAKE** RIDGE, Uttarahalli, 2.5 & 3 BHK ready to occupy apartment with all amenities for rent. Call: 9008999266.

### Farm House/Land/ Resorts

**RESORT -LIKE** STAY IN CHICKMAGALUR COFFEE ESTATE RESIDENCY HOME STAY IN CONTACT 9611099245, 9380208396, 8277199686

### Industrial And Factory

**FOR RENT** 10,000 Sqft Industrial Shed/ Warehouse in Yeshwanthpur. Contact: 9341264015/ 8310457211 (Whatsapp).

## PERSONAL

### Announcements

**ALO RANI** MITRA M/o 14850255N–Hav–SUMAN MITRA. R/a Halisahar, Nabanagar, North 24 Parganas, WB changed name form ALO RANI MITRA to ALO MITRA notary K.V.Mani, Bangalore

### B.N.M. Institute of Technology

An Autonomous Institution under VTU
27th cross, 12th Main,
Banashankari II Stage, Bengaluru-70

**NOTIFICATION**

This is to inform that B N M Institute of Technology has neither appointed nor has any Agents / Agency for Admissions / Admission related activities. Public are hereby cautioned not to deal with anybody who approaches for admission on our behalf. B N M Institute of Technology cannot be held responsible for dealing with such Agents / Agency. For any query regarding admissions, you may please contact directly the Administrative Office @ Banashankari 2nd Stage campus.

**Principal / Management,**
BNM Institute of Technology,
Banashankari 2nd Stage, Bengaluru.

### Change of Name

**I, SONIA** NATASHA .N, W/o Jaganathan .G, R/at #03, 1st A Street, Halasuru, Bangalore-8, have changed my daughter's name from J. MANNAT MUSKHAN to MAANHITA TANAYASREE .J., vide affidavit dated 24.06.2022 before Notary 1st Magistrate, Bangalore.

**I, VIDHYAVATI** D/o Shivappa Ganiger and W/o Ghanamathadappa Sajjan Residing at #415, 4th Floor, Splendid Sree durga, Belathur colony, near Janani Public School, Junior college Road, Kadugodi post, Bangalore- 560067 have changed my name to VIDHYAVATI SHIVAPPA GANIGER vide affidavit dated 30.06.2022 before notary M.Krishnamurthy, Hoskote- 562114

**I, EX-ARMY** No. 1352975L, NK Name: Abraham Johnson, residing at Flat No. 206, SMR Castle, Banaswadi main road, Dodda Banaswadi KalyanNagar Post, Bangalore- 560043, declare that my wife's name is wrongly mentioned in my Army Records as ANNAMMA instead of ANNAMMA ABRAHAM JOHNSON and also her D.O.B. is wrongly mentioned as 24.02.1961 instead of 24.02.1960, vide affidavit dated 29.02.2022 before Notary C. Santhosh, Bangalore.

**I, NAGA** ITHIHAS .A., residing at No. 202, Sweet Homes G-1, 3rd main, 3rd cross, 7th stage 2nd phase, BEML Layout, Mylasandra, R.V. Niketan PO, Bengaluru-560059, have changed my name to ITHIHAS .A., vide affidavit dated 30.06.2022 before Notary B.V. Nagabhushana, Bangalore. Henceforth I shall be known as ITHIHAS .A. only.

**I, FAROOQUE** MOHAMADH, resident at No. 348A, 3rd Cross, 2nd Main, 80 Feet Road, Near Passport Office, Rajendra Nagar Koramangala, Bangalore -560047 have changed my name to MANVITH MADHU vide affidavit dated 30/06/2022 sworn before Advocate & Notary B.M. Chandrashekar Bengaluru.

### CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

## EDUCATIONAL

### Admission

**DIRECT FINAL YEAR:** LLB (Can Practice), B.Tech/ M.Tech/MBA/MCA/BCA/ BBA/BSc/BCom/D.Pharm (BAMS,BYNS,GNM) PU/SSLC. All Courses Recognised by UGC/NAAC Govt. Asha Academy, Bangalore. Ph: 9448460103/ 7093438248

### Correspondence Courses

**DIRECT FINAL** PUC B.Com BA BBA BCA MBA B.Ed Diploma BE D.Pharm PhD: 9739077186/ 8618506480

## BUSINESS

### Business to Business

### Business

**TEAM DIRECTS-** BWSSB & BESCOM Contractors for applying Water & Electrical Metre Connections. Rain Water Harvesting & Auto Water level Controllers. 9980460155/ 9243441327

### Financial Services

**INVEST 20000/--** 2L in Trading, Multiple businesses. Weekly/Monthly 8% Secured Fixed Returns. Investors Welcome. Call:7892818780

## PUBLIC NOTICE

SANDEEP VIHAR OWNERS WELFARE ASSOCIATION (SVOWA)
Kannamangala, Bangalore-560115

INVITES APPLICATIONS FROM REGISTERED COMPANIES/ FIRMS/ INDIVIDUALS FOR REPAIRS & PAINTING OF RESIDENTIAL COMPLEX CONSISTING OF 29 HIGH-RISE TOWERS OF 14 FLOORS EACH. (APPROX AREA FOR PAINTING-120 LAKH SFT) FOR TENDER DOCUMENTS FORWARD APPLICATION ON Email: projects.sandeepvihar @gmail.com BY 15 JULY 2022 LAST DATE FOR RECEIPT OF TENDER BIDS - 30 AUGUST 2022. CONTACT: 9446350379



# ವರ್ತೂರು: ಎತ್ತಂಗಡಿ ಭೀತಿಯಲ್ಲಿ ಸಾವಿರಾರು ವಲಸೆ ಕಾರ್ಮಿಕರು

ಪ್ರಜಾವಾಣಿ ವಾರ್ತೆ



ತೂಬರಹಳ್ಳಿ ಬಳಿ ವಲಸೆ ಕಾರ್ಮಿಕರು ನೆಲೆಸಿರುವ ಗುಡಿಸಲುಗಳು
—ಪ್ರಜಾವಾಣಿ ಚಿತ್ರಗಳು/ಪ್ರಶಾಂತ್ ಎಚ್‌.ಜಿ.

**ಬೆಂಗಳೂರು:** ಮನೆ ಮನೆಗಳಿಂದ ಕಸ ಸಂಗ್ರಹಿಸುವ, ಅಪಾರ್ಟ್‌ಮೆಂಟ್‌ಗಳಲ್ಲಿ ಸ್ವಚ್ಛತೆ ಕೆಲಸ ಮಾಡಲು ನಗರದಲ್ಲಿ ನೆಲೆಸಿರುವ ಪಶ್ಚಿಮ ಬಂಗಾಳದ ಸಾವಿರಾರು ವಲಸೆ ಕಾರ್ಮಿಕರು ಈಗ ಎತ್ತಂಗಡಿ ಭೀತಿಯಲ್ಲಿದ್ದಾರೆ.

ವರ್ತೂರು ಬಳಿಯ ತೂಬರಹಳ್ಳಿ ಗ್ರಾಮದ ಬಳಗೆರೆ ರಸ್ತೆಯಲ್ಲಿ ಅಲ್ಲಲ್ಲಿ ಖಾಸಗಿ ಜಮೀನು ಬಾಡಿಗೆಗೆ ಪಡೆದು ನೂರಾರು ಕುಟುಂಬಗಳು ಶೆಡ್ ನಿರ್ಮಿಸಿಕೊಂಡಿವೆ. ಮಹಿಳೆಯರು, ಮಕ್ಕಳು ಸಹಿತ ಸಾವಿರಾರು ಜನ ವಾಸವಿದ್ದಾರೆ. ಕೆಲವರು 15 ವರ್ಷಗಳಿಂದ ವಾಸವಿದ್ದರೆ, ಇತ್ತೀಚೆಗೆ ಬಂದವರೂ ಅವರೊಟ್ಟಿಗೆ ಸೇರಿಕೊಂಡಿದ್ದಾರೆ.

ಇವರಲ್ಲಿ ಶೇ 50ರಷ್ಟು ಪುರುಷರು ಬಿಬಿಎಂಪಿ ಕಸ ನಿರ್ವಹಣೆ ಮಾಡುತ್ತಿರುವ ಗುತ್ತಿಗೆದಾರರ ಬಳಿ ಕೆಲಸಕ್ಕೆ ಸೇರಿದ್ದಾರೆ. ಮನೆ-ಮನೆಗಳಿಂದ ಕಸ ಸಂಗ್ರಹಿಸುವುದು, ಬೀದಿ ಬದಿಯಲ್ಲಿ ಬಿದ್ದಿರುವ ಕಸ ಹೆಕ್ಕಿ ಸಂಸ್ಕರಿಸುವುದು ಇವರ ಕೆಲಸ. ಉಳಿದವರು ಸುತ್ತಮುತ್ತ ನಡೆಯುವ ಸರ್ಕಾರಿ ಕಾಮಗಾರಿ, ಖಾಸಗಿ ಕಟ್ಟಡಗಳ ನಿರ್ಮಾಣ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಮಹಿಳೆಯರು ಸುತ್ತಮುತ್ತಲ ಅಪಾರ್ಟ್‌ಮೆಂಟ್‌ಗಳಲ್ಲಿ ಮನೆಗೆಲಸ ಮಾಡುತ್ತಿದ್ದಾರೆ.

ಬಿಬಿಎಂಪಿ ಎಂಜಿನಿಯರ್ ಎಂ.ಎಸ್. ಮಮತಾ ಅವರು ಪೊಲೀಸ್ ಠಾಣೆಗೆ ನೀಡಿರುವ ದೂರು ಇವರ ನೆಮ್ಮದಿ ಕಸಿದುಕೊಂಡಿದೆ.

'ಲೋಕೇಶ್‌ರೆಡ್ಡಿ ಎಂಬುವರಿಗೆ ಸೇರಿದ ಜಾಗದಲ್ಲಿ ವಾಸವಿರುವ ಇವರು ಅವೈಜ್ಞಾನಿಕವಾಗಿ ತ್ಯಾಜ್ಯ ವಿಲೇವಾರಿ ಮಾಡುತ್ತಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿ ತಿಳಿವಳಿಕೆ ನೀಡಿದರೂ ಪ್ರಯೋಜನವಾಗಿಲ್ಲ. ಈ ಕುಟುಂಬಗಳವರು ವಾತಾವರಣವನ್ನೇ ಕಲುಷಿತಗೊಳಿಸುತ್ತಿದ್ದಾರೆ. ಸಾರ್ವಜನಿಕರ ಆರೋಗ್ಯಕ್ಕೆ ಹಾನಿಯಾಗುವ ರೀತಿಯ ಅಪಾಯಕಾರಿ ಸೋಂಕು ಹರಡುವ ತ್ಯಾಜ್ಯಗಳನ್ನು ಬಿಸಾಡುತ್ತಿದ್ದಾರೆ. ಅದರಿಂದ ಉತ್ಪತ್ತಿಯಾಗುವ ಕಲುಷಿತ ನೀರು ರಾಜಕಾಲುವೆ ಸೇರುತ್ತಿದೆ. ಲೋಕೇಶ್‌ರೆಡ್ಡಿ ಮತ್ತು ಕಾರ್ಮಿಕರ ಉಸ್ತುವಾರಿ ನೋಡಿಕೊಳ್ಳುವ ಸಂಜಯ್ ಸರ್ಕಾರ್ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡಿರುವ ವರ್ತೂರು ಠಾಣೆ ಪೊಲೀಸರು, ಇಬ್ಬರನ್ನು ಠಾಣೆಗೆ ಕರೆದೊಯ್ದು ವಿಚಾರಣೆ ನಡೆಸಿದ್ದಾರೆ. ವಾತಾವರಣವನ್ನು ಕಲುಷಿತಗೊಳಿಸುತ್ತಿರುವ ಈ ಕುಟುಂಬಗಳನ್ನು ಎತ್ತಂಗಡಿ ಮಾಡಿಸಬೇಕು ಎಂದು ಜಮೀನಿನ ಮಾಲೀಕ ಲೋಕೇಶ್‌ರೆಡ್ಡಿ ಅವರಿಗೂ ತಾಕೀತು ಮಾಡಿದ್ದರು.

ಬಿಬಿಎಂಪಿ ಮಹದೇವಪುರ ವಲಯದ ಜಂಟಿ ಆಯುಕ್ತರಿಗೆ ಮನವಿ ಸಲ್ಲಿಸಿರುವ ನಿವಾಸಿಗಳು, 'ತ್ಯಾಜ್ಯ ವಿಲೇವಾರಿ ಕೆಲಸ ಮಾಡುವ ನಾವು, ಸುತ್ತಮುತ್ತಲ ಅಪಾರ್ಟ್ ಮೆಂಟ್‌ಗಳಲ್ಲೂ ಸ್ವಚ್ಛಗೊಳಿಸುವ ಕೆಲಸವನ್ನೇ ಮಾಡುತ್ತಿದ್ದೇವೆ. ನಮ್ಮನ್ನು ಎತ್ತಂಗಡಿ ಮಾಡಿಸಬಾರದು' ಎಂದು ಮನವಿ ಮಾಡಿದ್ದಾರೆ.

## 'ಅಲ್ಲಿ ಹಸಿವು–ಇಲ್ಲಿ ಭೀತಿ'

'ಇಲ್ಲಿಂದ ನಮ್ಮನ್ನು ಎತ್ತಂಗಡಿ ಮಾಡಿಸಿದರೆ ಎಲ್ಲಿ ಹೋಗಬೇಕು ಎಂಬುದು ಗೊತ್ತಿಲ್ಲ. ಊರಿಗೆ ವಾಪಸ್ ಹೋದರೆ ನಮ್ಮ ಮತ್ತು ಮಕ್ಕಳ ಹೊಟ್ಟೆಗೆ ಗತಿಯಿಲ್ಲ. ಅಲ್ಲಿ ಹಸಿವಿನಿಂದ ಸಾಯುವ ಬದಲು ಇಲ್ಲೇ ಸಾಯುತ್ತೇವೆ' ಎಂದು ಕಾರ್ಮಿಕರು ಕಣ್ಣೀರಿಟ್ಟರು.

'ಈ ಜಮೀನಿನ ಮಾಲೀಕರಿಗೂ ಒತ್ತಡ ಹೇರಿ ನಮ್ಮನ್ನು ಖಾಲಿ ಮಾಡಿಸಲು ಪ್ರಯತ್ನಿಸಲಾಗಿದೆ. ನಮ್ಮನ್ನು ಹೊರ ಹಾಕಿದರೆ ಏನು ಮಾಡಬೇಕೋ ಗೊತ್ತಿಲ್ಲ. ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಗಾಗಿ ಅಲ್ಲಲ್ಲಿ ದೊಡ್ಡ ದೊಡ್ಡ ಪೈಪ್‌ಗಳನ್ನು ರಸ್ತೆ ಬದಿ ಹಾಕಿದ್ದಾರೆ. ಅದರೊಳಗೆ ತೂರಿಕೊಂಡು ಜೀವನ ನಡೆಸಬಹುದಾ ಎಂಬ ಆಲೋಚನೆ ನಡೆಸುತ್ತಿದ್ದೇವೆ. ಅದಕ್ಕೂ ಈ ವ್ಯವಸ್ಥೆ ಅವಕಾಶ ಕೊಡುವ ಸಾಧ್ಯತೆ ಇಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

## ಇಂದಿನ ಸಭೆ ಬಳಿಕ ನಿರ್ಧಾರ

'ನಗರವನ್ನು ಸ್ವಚ್ಛಗೊಳಿಸುವ ಕೆಲಸ ಮಾಡುತ್ತಿರುವ ವಲಸೆ ಕಾರ್ಮಿಕರನ್ನು ಎತ್ತಂಗಡಿ ಮಾಡಬಾರದು' ಎಂದು ಕಾರ್ಮಿಕರ ಪರ ಹೋರಾಟ ನಡೆಸುತ್ತಿರುವ ಶ್ರಮಿಕ ಸ್ವರಾಜ್ ಕೇಂದ್ರದ ಖಲೀಮ್‌ಉಲ್ಲ ತಿಳಿಸಿದರು.

'ನಾವು ಪ್ರತಿಭಟನೆ ನಡೆಸುವ ಎಚ್ಚರಿಕೆ ನೀಡಿದ ಬಳಿಕ ಸದ್ಯಕ್ಕೆ ಎತ್ತಂಗಡಿ ಮಾಡುವುದಿಲ್ಲ ಎಂಬ ಮಾತನ್ನು ಅಧಿಕಾರಿಗಳು ಹೇಳುತ್ತಿದ್ದಾರೆ. ಶುಕ್ರವಾರ ಜಂಟಿ ಆಯುಕ್ತರ ಕಚೇರಿಯಲ್ಲಿ ಸಭೆ ಕರೆದಿದ್ದಾರೆ. ಇಲ್ಲಿ ಯಾವ ನಿರ್ಧಾರ ಕೈಗೊಳ್ಳುತ್ತಾರೆ ಎಂಬುದನ್ನು ನೋಡಿಕೊಂಡು ಮುಂದಿನ ಹೋರಾಟ ನಡೆಸಲಾಗುವುದು' ಎಂದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಮಹದೇವಪುರ ವಲಯ ಆಯುಕ್ತರಾದ ಸರೋಜಾದೇವಿ ಅವರನ್ನು ಸಂಪರ್ಕಿಸಲಾಯಿತು. 'ಈ ವಿಷಯ ನನ್ನ ಗಮನಕ್ಕೆ ಬಂದಿಲ್ಲ' ಎಂದಷ್ಟೇ ಅವರು ಹೇಳಿದರು.

# 'ಕಾಲ್ ಗರ್ಲ್' ಮೋಹಕ್ಕೆ ₹ 30 ಲಕ್ಷ ಕಳೆದುಕೊಂಡ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜಾಲತಾಣ ಮೂಲಕ ಕಾಲ್ ಗರ್ಲ್ ಸಂಪರ್ಕಿಸಿ ಮನೆಗೆ ಕರೆಸಿಕೊಳ್ಳಲು ಮುಂದಾಗಿದ್ದ ನಗರದ ನಿವಾಸಿಯೊಬ್ಬರು ₹ 30 ಲಕ್ಷ ಕಳೆದುಕೊಂಡಿದ್ದು, ಈ ಬಗ್ಗೆ ಆಗ್ನೇಯ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ 49 ವರ್ಷದ ನಿವಾಸಿ ಇತ್ತೀಚೆಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಾಲ್ ಗರ್ಲ್ ಬಗ್ಗೆ ಮೋಹ ಹೊಂದಿದ್ದ ನಿವಾಸಿ, ಬೆಂಗಳೂರಿನಲ್ಲಿರುವ ಕಾಲ್ ಗರ್ಲ್‌ಗಳನ್ನು ಸಂಪರ್ಕಿಸಲು ಗೂಗಲ್‌ನಲ್ಲಿ ಹುಡುಕಾಡಿದ್ದರು. ಜಾಲತಾಣವೊಂದರ ಲಿಂಕ್ ಸಿಕ್ಕಿತ್ತು. ಅದನ್ನು ತೆರೆದಿದ್ದ ನಿವಾಸಿ, 'ನನಗೆ ಕಾಲ್‌ಗರ್ಲ್ ಬೇಕು' ಎಂಬುದಾಗಿ ನಮೂದಿಸಿ ವೈಯಕ್ತಿಕ ವಿವರಗಳನ್ನು ದಾಖಲಿಸಿ ಏಪ್ರಿಲ್ 8ರಂದು ನೋಂದಣಿ ಮಾಡಿಕೊಂಡಿದ್ದರು.'

'ಜಾಲತಾಣದ ಪ್ರತಿನಿಧಿ ಸೋಗಿನಲ್ಲಿ ನಿವಾಸಿಗೆ ಕರೆ ಮಾಡಿದ್ದ ಮಹಿಳೆಯೊಬ್ಬರು. 'ನಮ್ಮ ಬಳಿ ಹೆಚ್ಚಿನ ಸಂಖ್ಯೆಯಲ್ಲಿ ಕಾಲ್‌ಗರ್ಲ್‌ಗಳು ಇದ್ದಾರೆ. ನೋಂದಣಿ ಶುಲ್ಕವಾಗಿ ₹ 840 ಪಾವತಿಸಿದರೆ, ಕಾಲ್‌ಗರ್ಲ್‌ಗಳ ವೈಯಕ್ತಿಕ ಮಾಹಿತಿ ಹಾಗೂ ಮೊಬೈಲ್ ನಂಬರ್ ನೀಡುತ್ತೇವೆ' ಎಂದಿದ್ದರು. ಅದಕ್ಕೆ ಒಪ್ಪಿದ್ದ ನಿವಾಸಿ, ಹಣ ಪಾವತಿ ಮಾಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ನೋಂದಣಿ ಶುಲ್ಕ ಪಡೆದಿದ್ದ ಮಹಿಳೆ ಹಾಗೂ ಇತರರು, ಬೇರೆ ಬೇರೆ ಮೊಬೈಲ್ ಸಂಖ್ಯೆಯಿಂದ ದೂರುದಾರರಿಗೆ ಕರೆ ಮಾಡಲಾರಂಭಿಸಿದ್ದರು. ಕಾಲ್ ಗರ್ಲ್ ಹೆಸರಿನಲ್ಲಿ ಮಾತನಾಡಿದ್ದ ಆರೋಪಿಗಳು, 'ಹಣ ನೀಡಿದರೆ, ನಿಮ್ಮ ಮನೆಗೆ ಬರುತ್ತೇವೆ' ಎಂದಿದ್ದರು. ಇದನ್ನು ನಂಬಿದ್ದ ಆರೋಪಿ, ಹಂತ ಹಂತವಾಗಿ ₹ 16 ಲಕ್ಷ ಪಾವತಿಸಿದ್ದ. ಇದಾದ ನಂತರ ಆರೋಪಿಗಳು ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದರು' ಎಂದೂ ಪೊಲೀಸ್ ಮೂಲಗಳು ಹೇಳಿವೆ.

**ಬುದ್ಧಿ ಕಲಿಯದ ದೂರುದಾರ:** '₹ 16 ಲಕ್ಷ ಕಳೆದುಕೊಂಡರೂ ಬುದ್ಧಿ ಕಲಿಯದ ದೂರುದಾರ, ಪುನಃ ಕಾಲ್‌ಗರ್ಲ್‌ಗಳಿಗಾಗಿ ಹುಡುಕಾಟ ಆರಂಭಿಸಿದ್ದರು. ಜಾಲತಾಣವೊಂದರಲ್ಲಿ ಸಿಕ್ಕ ಮೊಬೈಲ್ ನಂಬರ್‌ಗೆ ಕರೆ ಮಾಡಿ, 'ನನಗೆ ಕಾಲ್‌ಗರ್ಲ್ ಬೇಕು' ಎಂಬುದಾಗಿ ಹೇಳಿಕೊಂಡಿದ್ದರು. ನೋಂದಣಿ ಶುಲ್ಕ ₹ 499 ಪಾವತಿಸಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಎರಡನೇ ಬಾರಿಯೂ ದೂರುದಾರರಿಗೆ ಹಲವು ಯುವತಿಯರು ಕರೆ ಮಾಡಿದ್ದರು. ಮನೆಗೆ ಬರುವುದಾಗಿ ಹೇಳಿ ಹಂತ ಹಂತವಾಗಿ ಬ್ಯಾಂಕ್ ಖಾತೆಗಳಿಗೆ ₹ 14 ಲಕ್ಷ ಹಾಕಿಸಿಕೊಂಡಿದ್ದರು. ಇದಾದ ನಂತರ ಆರೋಪಿಗಳು ಮೊಬೈಲ್ ಸ್ವಿಚ್ ಆಫ್ ಮಾಡಿ ನಾಪತ್ತೆಯಾಗಿದ್ದಾರೆ. ಘಟನೆ ಬಗ್ಗೆ ಸ್ನೇಹಿತರಿಗೆ ವಿಷಯ ತಿಳಿಸಿದ್ದ ದೂರುದಾರ, ಅವರ ಮೂಲಕ ಠಾಣೆಗೆ ಬಂದು ದೂರು ನೀಡಿದ್ದಾರೆ' ಎಂದೂ ಮೂಲಗಳು ಹೇಳಿವೆ.

## ಸಣ್ಣ ಉಳಿತಾಯ: ಬಡ್ಡಿ ಯಥಾಸ್ಥಿತಿ

**ನವದೆಹಲಿ (ಪಿಟಿಐ):** ಹಣ ದುಬ್ಬರ ಹೆಚ್ಚಿದ್ದರೂ, ರೆಪೊ ದರ ಏರಿಕೆ ಆಗುತ್ತಿದ್ದರೂ ಸಣ್ಣ ಉಳಿತಾಯ ಯೋಜನೆಗಳ ಬಡ್ಡಿ ದರವನ್ನು ಕೇಂದ್ರ ಸರ್ಕಾರವು ಜುಲೈ–ಸೆಪ್ಟೆಂಬರ್ ಅವಧಿಗೆ ಯಥಾಸ್ಥಿತಿಯಲ್ಲಿ ಇರಿಸಿದೆ.

2020–21ರ ಮೊದಲ ತ್ರೈಮಾಸಿಕದಿಂದಲೂ ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿ ದರ ಪರಿಷ್ಕರಣೆ ಆಗಿಲ್ಲ. ಜನಪ್ರಿಯ ಸಣ್ಣ ಉಳಿತಾಯ ಯೋಜನೆಗಳಾದ ಪಿಪಿಎಫ್, ಎನ್‌ಎಸ್‌ಸಿ, ಸುಕನ್ಯಾ ಸಮೃದ್ಧಿಯಲ್ಲಿ ತೊಡಗಿಸುವ ಹಣಕ್ಕೆ ಕ್ರಮವಾಗಿ ಶೇಕಡ 7.1, ಶೇ 6.8 ಮತ್ತು ಶೇ 7.6ರಷ್ಟು ಬಡ್ಡಿ ಸಿಗುತ್ತಿದೆ.

## ಸಿಕ್ಕಿಬಿದ್ದ ಆರೋಪಿ

**ಬೆಂಗಳೂರು:** ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಆರೋಪಿ ಮಂಜುನಾಥ್ ಅವರನ್ನು ಕೆಂಗೇರಿ ಪೊಲೀಸರು ಬಂಧಿಸಿದ್ದಾರೆ.

'ಬಂಧಿತ ಮಂಜುನಾಥ್, ಹಲವು ತಿಂಗಳುಗಳಿಂದ ಕೃತ್ಯ ಎಸಗುತ್ತಿದ್ದ. ಈತನಿಂದ ₹ 3.70 ಲಕ್ಷ ಮೌಲ್ಯದ 4 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

# ರಸ್ತೆ ಗುಂಡಿಯಿಂದ ನಗರಕ್ಕೆ ಕೆಟ್ಟ ಹೆಸರು: ಕೋರ್ಟ್

**ಬೆಂಗಳೂರು:** 'ನಗರಕ್ಕೆ ಪ್ರಧಾನಿ ಬಂದುಹೋದ ನಂತರ ರಸ್ತೆ ಹಾಳಾಗಿವೆ ಎಂಬ ವರದಿಗಳನ್ನು ನಾವೂ ಗಮನಿಸಿದ್ದೇವೆ. ರಸ್ತೆ ಗುಂಡಿ ದುರವಸ್ಥೆಯಿಂದ ಬೆಂಗಳೂರಿಗೇ ಕೆಟ್ಟ ಹೆಸರು ಬರುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು' ಎಂದು ಪಾಲಿಕೆಯ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್‌ಗೆ ಹೈಕೋರ್ಟ್ ಕಿವಿಮಾತು ಹೇಳಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿನ ರಸ್ತೆಗಳ ಗುಂಡಿ ಕುರಿತು ವಿಜಯನ್ ಮೆನನ್ ಮತ್ತಿತರರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಋತು ರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮತ್ತು ಬಿಬಿಎಂಪಿ ಮುಖ್ಯ ಎಂಜಿನಿಯರ್ ಎಂ.ಲೋಕೇಶ್ ಖುದ್ದು ಹಾಜರಾಗಿದ್ದರು.

ಬಿಬಿಎಂಪಿ ಪರ ವಕೀಲ ವಿ.ಶ್ರೀನಿಧಿ ಉತ್ತರಿಸಿ, 'ರಸ್ತೆ ದುರಸ್ತಿ ಮಾಡುವಾಗ ಒಳಚರಂಡಿ ಪೈಪ್‌ಲೈನ್ ಹಾದು ಹೋಗಿರುವುದು ಗಮನಕ್ಕೆ ಬಾರದೆ ರಸ್ತೆ ಹಾಳಾಗಿದೆ. ಮುಖ್ಯ ಆಯುಕ್ತರೇ ಸ್ಥಳಕ್ಕೆ ತೆರಳಿ ಪರಿಶೀಲಿಸಿ ಸಮಸ್ಯೆ ಬಗೆಹರಿಸಿದ್ದಾರೆ. ಆದಾಗ್ಯೂ, ಆ ರಸ್ತೆಯನ್ನು ಪ್ರಧಾನ ಮಂತ್ರಿಗಳು ಅಂದು ಬಳಸಿರಲೇ ಇಲ್ಲ' ಎಂದು ಸ್ಪಷ್ಟನೆ ನೀಡಿದರು.

ಎಲ್ಲ ಮಾಹಿತಿ ದಾಖಲಿಸಿಕೊಂಡ ನ್ಯಾಯಪೀಠ, 'ರಸ್ತೆಗಳನ್ನು ದುರಸ್ತಿ ಮಾಡದ ಹೊರತು ಪ್ರಕರಣವನ್ನು ವಿಲೇವಾರಿ ಮಾಡುವುದಿಲ್ಲ' ಎಂದು ತಿಳಿಸಿ ವಿಚಾರಣೆಯನ್ನು ಜುಲೈ 27ಕ್ಕೆ ಮುಂದೂಡಿದೆ.

### ಸಾರ್ವಜನಿಕ ಸೂಚನೆ

ನಮ್ಮ ಕಕ್ಷಿದಾರರಾದ ಶ್ರೀ. ವೆಂಕಟೇಶ.ಸಿ, ಶ್ರೀ.ಎಚ್.ಬಿ. ಜಯರಾಮ, M/s. Maxconcorde Developers ನ ಪಾಲುದಾರರು, ಕಛೇರಿ #2231, 3ನೇ ಮಹಡಿ, 11ನೇ ಮುಖ್ಯ, 3ನೇ ಬ್ಲಾಕ್ ಜಯನಗರ ಪೂರ್ವ, ಬೆಂಗಳೂರು-560 011 ಮತ್ತು ಶ್ರೀಮತಿ. ಪಿ. ಭಾಗ್ಯಲಕ್ಷ್ಮಿ, ಕೋಂ ದಿವಂಗತ ಪಿ.ಗುರುಸ್ವಾಮಿ ನಾಯ್ಡು ಅವರು ರಾಮನಗರ ಜಿಲ್ಲೆ, ಬಿಡದಿ ಹೋಬಳಿಯ ಹೆಗ್ಗಡಗೆರೆ ಮತ್ತು ಬಾನಂದೂರು ಗ್ರಾಮದಲ್ಲಿ ಆಸ್ತಿ ಹೊಂದಿದ್ದಾರೆ. ವಾಸ್ತವವಾಗಿ, ನಮ್ಮ ಗ್ರಾಹಕರು ಮೂಲ ದಾಖಲೆಗಳನ್ನು ಕಳೆದುಕೊಂಡಿದ್ದಾರೆ ಅಂದರೆ, (1) ಮೂಲ ಬಿಡುಗಡೆ ಪತ್ರ ದಿನಾಂಕ 07.05.2011 ಡಾಕ್ಯುಮೆಂಟ್ ಸಂಖ್ಯೆ :630/2011-12, (2) ಮೂಲ ಮಾರಾಟ ಒಪ್ಪಂದ ದಿನಾಂಕ 2.09.2008 ಡಾಕ್ಯುಮೆಂಟ್ ಸಂಖ್ಯೆ :2339/2008-09 (3) ಮಾರಾಟ ಒಪ್ಪಂದದ ಮೂಲ ರದ್ದತಿ ದಿನಾಂಕ 20.09.2010 ಡಾಕ್ಯುಮೆಂಟ್ ಸಂಖ್ಯೆ: 3075/2010-11, (4) ಮೂಲ ವಿಭಜನಾ ಪತ್ರ ದಿನಾಂಕ 29.06.2005 ಡಾಕ್ಯುಮೆಂಟ್ ನಂ.967/2005-06, (5) ಮೂಲ ಕ್ರಯ ಪತ್ರ ಸಂಖ್ಯೆ. 8048/2011-12, (6)ಮೂಲ ಕ್ರಯ ಪತ್ರ ದಿನಾಂಕ 04.01.2012 ದಾಖಲೆ ಸಂಖ್ಯೆ: 8057/2011-12, ಮತ್ತು ಇದುವರೆಗೂ ಪತ್ತೆಯಾಗಿರುವುದಿಲ್ಲ. ನಮ್ಮ ಕಕ್ಷಿದಾರರು ಸಹ 30/06/2022 ರಂದು ಬೆಂಗಳೂರಿನ ಅಪರಾಧ ವಿಭಾಗದ ಪೊಲೀಸರ ಮುಂದೆ ಕಂಪ್ಲೆಂಟ್ ನೀಡಿದ್ದಾರೆ.

ಸದರಿ ಡೀಡ್‌ಗಳನ್ನು ಕಂಡುಹಿಡಿದ ಯಾವುದೇ ವ್ಯಕ್ತಿ ಕೆಳಸಹಿದಾರರಿಗೆ ತಿಳಿಸಬೇಕು ಮತ್ತು ಯಾವುದೇ ವ್ಯಕ್ತಿ, ಬ್ಯಾಂಕ್, ಹಣಕಾಸು ಸಂಸ್ಥೆಯು ಪಿತ್ರಾರ್ಜಿತ, ಪಾಲು, ಮಾರಾಟ, ಅಡಮಾನ, ಗುತ್ತಿಗೆ, ಹೊಣೆಗಾರಿಕೆಯ ಮೂಲಕ ಸದರಿ ಅಸ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು ಅಥವಾ ಹಕ್ಕನ್ನು ಹೊಂದಿದ್ದರೆ, ಲೈಸನ್ಸ್, ಉಡುಗೊರೆ, ಸ್ವಾಧೀನ ಹೇಗಿದ್ದರೂ ಅಥವಾ ಬೇರೆ ರೀತಿಯಲ್ಲಿ ಅಥವಾ ಮೇಲಿನ ಡೀಡ್‌ಗಳನ್ನು ಹೊಂದಿರುವುದು ಈ ಮೂಲಕ ಎಲ್ಲಾ ಪೋಷಕ ದಾಖಲೆಗಳೊಂದಿಗೆ ಅವರ ಹಕ್ಕುಗಳ ಈ ಸೂಚನೆಯನ್ನು ಪ್ರಕಟಿಸಿದ 7 (ಏಳು) ದಿನಗಳೊಳಗೆ ಕೆಳಗಿರುವವರಿಗೆ ತಿಳಿಸಲು ಕರೆದಿದೆ. ಮೇಲೆ ಹೇಳಿದ ಡಾಕ್ಯುಮೆಂಟ್ ಅನ್ನು ಆಧರಿಸಿ ಮಾಡಿದ ಯಾವುದೇ ವಹಿವಾಟು ನಮ್ಮ ಕ್ಲೈಂಟ್‌ಗಳಿಗೆ ಮತ್ತು ಅಂತಹ ವಹಿವಾಟು ನಿರರ್ಥಕ ಆಬ್ ಇನಿಶಿಯೊಗ ಬಂಧಿಸುವುದಿಲ್ಲ. ಯಾವುದೇ ವ್ಯಕ್ತಿ ಮೇಲಿನ ದಾಖಲೆಗಳನ್ನು ಕಂಡುಕೊಂಡರೆ ದಯವಿಟ್ಟು ಇಲ್ಲಿ ಉಲ್ಲೇಖಿಸಿರುವ ವಿಳಾಸಕ್ಕೆ ಅದನ್ನು ಒದಗಿಸಿ,

ಸಹಿ/- ದೇವರಾಜು ಬಿ.ಕೆ. ಬಿಎಎಲ್, ಎಲ್.ಎಲ್‌ಎಂ
ವಕೀಲರು ಮತ್ತು ಲೀಗಲ್ ಕನ್ಸಲ್ಟೆಂಟ್
ನಂ. 299, 2ನೇ ಮಹಡಿ, 9ನೇ ಮೇನ್, ಎಸ್‌ಎಲ್‌ಎನ್ ಲೇಔಟ್,
ಬಗಲುಗುಂಟೆ, ನಾಗಸಂದ್ರ ಅಂಚೆ, ಬೆಂಗಳೂರು- 560073,
ಮೊ. ನಂ. 9986000630.

ದಿನಾಂಕ: 30.06.2022.
ಸ್ಥಳ: ಬೆಂಗಳೂರು.

## ನಿವೃತ್ತ ನೌಕರರ ಕ್ಲಬ್ ಮೇಲೆ ಸಿಸಿಬಿ ದಾಳಿ

**ಬೆಂಗಳೂರು:** ರಾಜ್ಯ ನಿವೃತ್ತ ನೌಕರರ ಮತ್ತು ಗೆಳೆಯರ ಸಾಂಸ್ಕೃತಿಕ ಕ್ರೀಡೆ ಹಾಗೂ ಮನೋರಂಜನಾ ಕ್ಲಬ್ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ಅಕ್ರಮ ಜೂಜಾಟ ಆರೋಪದಡಿ 22 ಮಂದಿಯನ್ನು ಬಂಧಿಸಿದ್ದಾರೆ.

'ಗೋವಿಂದರಾಜನಗರ ಠಾಣೆ ವ್ಯಾಪ್ತಿಯ ಪಟ್ಟೇಗಾರಪಾಳ್ಯದ ಮುಖ್ಯರಸ್ತೆಯಲ್ಲಿರುವ ಕ್ಲಬ್‌ನಲ್ಲಿ ಸದಸ್ಯರಲ್ಲದವರು ಜೂಜು ಆಡುತ್ತಿದ್ದ ಮಾಹಿತಿ ಬಂದಿತ್ತು. ಬುಧವಾರ ದಾಳಿ ಮಾಡಿ, ನಾಲ್ವರು ಕೆಲಸಗಾರರು ಸೇರಿ 22 ಮಂದಿಯನ್ನು ಬಂಧಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ದಾಳಿ ವೇಳೆ ಬಂಧಿತರಿಂದ ₹1.05 ಲಕ್ಷ ನಗದು ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.

# ಜನಸಂಖ್ಯೆ ಹಂಚಿಕೆಯಲ್ಲೂ 'ಪಕ್ಷ' ತಾರತಮ್ಯ

## ಗೋವಿಂದರಾಜನಗರ ವಾರ್ಡ್‌ನಲ್ಲಿ ಸರಾಸರಿ 30 ಸಾವಿರ ● ಚಾಮರಾಜಪೇಟೆಯಲ್ಲಿ 39 ಸಾವಿರ

● ವಿಜಯಕುಮಾರ್ ಎಸ್.ಕೆ.

**ಬೆಂಗಳೂರು:** ಬಿಜೆಪಿ ಶಾಸಕರು ಪ್ರತಿನಿಧಿಸುವ ಹಲವು ಕ್ಷೇತ್ರಗಳ ವಾರ್ಡ್‌ಗಳಲ್ಲಿ ಸರಾಸರಿ ಜನಸಂಖ್ಯೆ 30 ಸಾವಿರ ಇದ್ದರೆ, ಕಾಂಗ್ರೆಸ್ ಶಾಸಕರು ಪ್ರತಿನಿಧಿಸುವ ಕ್ಷೇತ್ರದಲ್ಲಿ ಸರಾಸರಿ ಜನಸಂಖ್ಯೆ 39 ಸಾವಿರ!

ವಾರ್ಡ್‌ಗಳ ಮರು ವಿಂಗಡಣೆ ಪಟ್ಟಿಯಲ್ಲಿ ವಿಧಾನಸಭೆ ಕ್ಷೇತ್ರವಾರು ವಾರ್ಡ್‌ಗಳ ಜನಸಂಖ್ಯೆ ಗಮನಿಸಿದರೆ ಈ ಮಾಹಿತಿ ಎದ್ದು ಕಾಣಿಸುತ್ತದೆ.

'2011ರ ಜನಗಣತಿ ಪ್ರಕಾರ 84.65 ಲಕ್ಷ ಮತದಾರರು ಬಿಬಿಎಂಪಿ ವ್ಯಾಪ್ತಿಯಲ್ಲಿದ್ದು, ಅದನ್ನು ಆಧರಿಸಿ 243 ವಾರ್ಡ್‌ಗಳಾಗಿ ವಿಂಗಡಿಸಲಾಗಿದೆ. ಪ್ರತಿ ವಾರ್ಡ್‌ಗೆ ಸರಾಸರಿ 34,750 ಮತದಾರರು ಇರಲಿದ್ದಾರೆ. ರೈಲು ಹಳಿ, ರಸ್ತೆಗಳ ವಿಭಜನೆ ಆಗುವ ಕಡೆ ಶೇ 10ರಷ್ಟು ಕಡಿಮೆ ಅಥವಾ ಹೆಚ್ಚು ಆಗಲಿದೆ' ಎಂದು ಬಿಬಿಎಂಪಿ ಹೇಳುತ್ತಿದೆ.

ಆದರೆ, ಆಡಳಿತ ಪಕ್ಷದ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೆ ಒಂದು ಮಾನದಂಡ, ಅನ್ಯ ಪಕ್ಷದ ಶಾಸಕರ ಕ್ಷೇತ್ರಗಳಿಗೆ ಮತ್ತೊಂದು ಬಗೆಯ ಮಾನದಂಡವನ್ನು ಬಿಬಿಎಂಪಿ ಅನುಸರಿಸಿದೆಯೇ ಎಂಬ ಅನುಮಾನವನ್ನು ಈ ಅಂಕಿ–ಅಂಶಗಳು ಹುಟ್ಟುಹಾಕುತ್ತಿವೆ.

ಪ್ರಜಾವಾಣಿ ವಿಶೇಷ

ಉದಾಹರಣೆಗೆ, ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರವನ್ನು ಸಚಿವ ವಿ.ಸೋಮಣ್ಣ ಪ್ರತಿನಿಧಿಸುತ್ತಿದ್ದಾರೆ. ಇಲ್ಲಿನ ಒಟ್ಟಾರೆ ಜನಸಂಖ್ಯೆ 3,05,725 ಇದೆ. ಈ ಕ್ಷೇತ್ರದಲ್ಲಿ 10 ವಾರ್ಡ್‌ಗಳಾಗಿ ವಿಂಗಡಿಸಲಾಗಿದೆ. ಪ್ರತಿ ವಾರ್ಡ್‌ಗೆ ಸರಾಸರಿ 30,572 ಜನಸಂಖ್ಯೆ ಇದೆ. ಈ ಕ್ಷೇತ್ರದಲ್ಲಿನ 9 ವಾರ್ಡ್‌ಗಳ ಜನಸಂಖ್ಯೆ 30 ಸಾವಿರ ಆಸುಪಾಸಿನಲ್ಲೇ ಇದ್ದು, ಒಂದೇ ಒಂದು ವಾರ್ಡ್‌ನ ಜನಸಂಖ್ಯೆ 31 ಸಾವಿರ ದಾಟಿದೆ. ವಾರ್ಡ್‌ಗಳ ಸಂಖ್ಯೆಯನ್ನು 9ಕ್ಕೆ ಸೀಮಿತ ಮಾಡಿದ್ದರೂ ಪ್ರತಿ ವಾರ್ಡ್‌ಗೆ ಸರಾಸರಿ ಜನಸಂಖ್ಯೆ 33,969 ಆಗುತ್ತಿತ್ತು.

| ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರ | |
|---|---|
| ವಾರ್ಡ್ ಹೆಸರು | ಮತದಾರರ ಸಂಖ್ಯೆ |
| ಚಾಮರಾಜಪೇಟೆ | 39,923 |
| ಚಲವಾದಿಪಾಳ್ಯ | 39,673 |
| ಜಗಜೀವನರಾಂನಗರ | 38,996 |
| ಪಾದರಾಯನಪುರ | 39,539 |
| ದೇವರಾಜ್ ಅರಸ್ ನಗರ | 39,834 |
| ಆಜಾದ್ ನಗರ | 39,495 |
| ಒಟ್ಟು | 2,37,460 |

| ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ | |
|---|---|
| ವಾರ್ಡ್ ಹೆಸರು | ಮತದಾರರ ಸಂಖ್ಯೆ |
| ಡಾ.ರಾಜ್‌ಕುಮಾರ್ | 30,670 |
| ಅಗ್ರಹಾರ ದಾಸರಹಳ್ಳಿ | 30,219 |
| ಗೋವಿಂದರಾಜನಗರ | 30,906 |
| ಕಾವೇರಿಪುರ | 30,945 |
| ಮಾರೇನಹಳ್ಳಿ | 30,299 |
| ಮಾರುತಿ ಮಂದಿರ | 30,392 |
| ಮೂಡಲಪಾಳ್ಯ | 30,604 |
| ಕಲ್ಯಾಣನಗರ | 31,107 |
| ನಾಗರಬಾವಿ | 30,431 |
| ನಾಯಂಡಹಳ್ಳಿ | 30,152 |
| ಒಟ್ಟು | 3,05,725 |

ಸಚಿವ ಮುನಿರತ್ನ ಪ್ರತಿನಿಧಿಸುವ ರಾಜರಾಜೇಶ್ವರಿನಗರ ಕ್ಷೇತ್ರದಲ್ಲಿ 14 ವಾರ್ಡ್‌ಗಳಿವೆ. ಇಲ್ಲಿನ ಸರಾಸರಿ ಜನಸಂಖ್ಯೆ 32,709 ಇದೆ. 13 ವಾರ್ಡ್‌ಗಳಿಗೆ ಸೀಮಿತ ಮಾಡಿದ್ದರೂ ಸರಾಸರಿ ಜನಸಂಖ್ಯೆ 35,225 ಇರುತ್ತಿತ್ತು.

ಅದೇ ರೀತಿ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಜನಸಂಖ್ಯೆ 2,37,460 ಇದೆ. ಇಲ್ಲಿ ವಾರ್ಡ್‌ಗಳ ಸಂಖ್ಯೆಯನ್ನು 7ರಿಂದ 6ಕ್ಕೆ ಇಳಿಸಲಾಗಿದೆ. ಈಗ ಪ್ರತಿ ವಾರ್ಡ್‌ನ ಸರಾಸರಿ ಜನಸಂಖ್ಯೆ 39,576 ಆಗಿದೆ. ಏಳು ವಾರ್ಡ್‌ಗಳನ್ನೇ ಉಳಿಸಿದ್ದರೆ ಸರಾಸರಿ ಜನಸಂಖ್ಯೆ 33,922 ಆಗಿರುತ್ತಿತ್ತು. ಅದೇ ರೀತಿ ಜಯನಗರ ಕ್ಷೇತ್ರದಲ್ಲೂ ಒಂದು ವಾರ್ಡ್ ಕಡಿಮೆ ಮಾಡಿ 6 ವಾರ್ಡ್‌ಗೆ ಸೀಮಿತ ಮಾಡಲಾಗಿದೆ. ಆರು ವಾರ್ಡ್‌ಗಳ ಸರಾಸರಿ ಜನಸಂಖ್ಯೆ 38,305 ಇದೆ. ಏಳು ವಾರ್ಡ್‌ಗಳನ್ನೇ ಉಳಿಸಿದ್ದರೂ ಸರಾಸರಿ ಜನಸಂಖ್ಯೆ 32,833 ಇರುತ್ತಿತ್ತು.

ವಿಜಯನಗರ ವಿಧಾನಸಭಾ ಕ್ಷೇತ್ರವನ್ನು 9 ವಾರ್ಡ್‌ಗಳಾಗಿ ವಿಭಾಗಿಸಲಾಗಿದೆ. ಇಲ್ಲಿಯೂ ಪ್ರತಿವಾರ್ಡ್‌ಗೆ ಸರಾಸರಿ ಜನಸಂಖ್ಯೆ 36,041 ಇದೆ. 10 ವಾರ್ಡ್‌ಗಳಾಗಿ ವಿಭಾಗಿಸಿದ್ದರೂ, ಸರಾಸರಿ ಜನಸಂಖ್ಯೆ 32,437 ಇರುತ್ತಿತ್ತು. ಬ್ಯಾಟರಾಯನಪುರ ಕ್ಷೇತ್ರದಲ್ಲಿ 10 ವಾರ್ಡ್‌ಗಳಿದ್ದು, ಇಲ್ಲಿಯೂ ಪ್ರತಿ ವಾರ್ಡ್‌ಗೆ ಸರಾಸರಿ ಜನಸಂಖ್ಯೆ 37,275 ಇದೆ. ವಾರ್ಡ್ ಸಂಖ್ಯೆಯನ್ನು 11ಕ್ಕೆ ಹೆಚ್ಚಿಸಿದ್ದರೂ ಸರಾಸರಿ ಜನಸಂಖ್ಯೆ 33,886 ಇರುತ್ತಿತ್ತು. ಈ ನಾಲ್ಕು ಕ್ಷೇತ್ರಗಳನ್ನು ಕಾಂಗ್ರೆಸ್ ಶಾಸಕರು ಪ್ರತಿನಿಧಿಸುತ್ತಿದ್ದಾರೆ.

'ಮಹದೇವಪುರ, ಪದ್ಮನಾಭನಗರ, ಬೊಮ್ಮನಹಳ್ಳಿ ಮತ್ತು ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರಗಳಲ್ಲಿ ಸರಾಸರಿ ಜನಸಂಖ್ಯೆಯನ್ನು ಮೀರಿ ಹೆಚ್ಚುವರಿಯಾಗಿ ಒಂದೊಂದು ವಾರ್ಡ್‌ಗಳನ್ನು ನೀಡಲಾಗಿದೆ. ಬ್ಯಾಟರಾಯನಪುರ, ಚಾಮರಾಜಪೇಟೆ, ಸರ್ವಜ್ಞನಗರ, ದಾಸರಹಳ್ಳಿ ಕ್ಷೇತ್ರಗಳಲ್ಲಿ ಒಂದೊಂದು ಹೆಚ್ಚುವರಿ ವಾರ್ಡ್‌ಗೆ ಅವಕಾಶ ಇದ್ದರೂ ಕಡಿತ ಮಾಡಲಾಗಿದೆ. ಬಿಬಿಎಂಪಿ ಚುನಾವಣೆಯಲ್ಲಿ ಆಡಳಿತ ಪಕ್ಷದ ಸದಸ್ಯರ ಸಂಖ್ಯೆ ಹೆಚ್ಚಿಸಿಕೊಳ್ಳಲು ಮಾಡಿಕೊಂಡಿರುವ ತಂತ್ರ' ಎಂಬ ಆಕ್ಷೇಪಣೆಗಳು ನಗರಾಭಿವೃದ್ಧಿ ಇಲಾಖೆಗೆ ಸಲ್ಲಿಕೆಯಾಗಿವೆ.




## ಯುಪಿಎಸ್‌ಸಿ ಅಭ್ಯರ್ಥಿಗಳಿಗೆ ಸನ್ಮಾನ

ನಗರದಲ್ಲಿ ಗುರುವಾರ 'ಇನ್‌ಸೈಟ್ಸ್ ಐಎಸ್' ಆಯೋಜಿಸಿದ್ದ 2021ರ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಸನ್ಮಾನ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ವಿ. ಅವಿನಾಶ್ (31ನೇ ರ‍್ಯಾಂಕ್), ಮಂತ್ರಿ ಮೌರ್ಯ ಭಾರದ್ವಾಜ್ (28ನೇ ರ‍್ಯಾಂಕ್), ಪುಸಪತಿ ಸಾಹಿತ್ಯ (24ನೇ ರ‍್ಯಾಂಕ್), ಯಶರತ್ ಶೇಖರ್ (12ನೇ ರ‍್ಯಾಂಕ್), ಇಶಿತಾ (8ನೇ ರ‍್ಯಾಂಕ್), ಶ್ರುತಿ (196ನೇ ರ‍್ಯಾಂಕ್), ಶ್ರುತಿ ರಾಜಲಕ್ಷ್ಮಿ (25ನೇ ರ‍್ಯಾಂಕ್), ಉತ್ಸವ್ ಆನಂದ್ (26ನೇ ರ‍್ಯಾಂಕ್), ನಮಾನ್ ಗೋಯಲ್ (30ನೇ ರ‍್ಯಾಂಕ್) ಮತ್ತು ಗಾಮಿನಿ ಸಿಂಗ್ಲಾ (3ನೇ ರ‍್ಯಾಂಕ್) ಅವರನ್ನು ಅಭಿನಂದಿಸಲಾಯಿತು. (ಎಡದಿಂದ ನಿಂತವರು) ರವಿಕುಮಾರ್, ಭ್ರಷ್ಟಾಚಾರ ನಿಗ್ರಹ ದಳ ಎಡಿಜಿಪಿ ಸೀಮಂತ್ ಕುಮಾರ್ ಸಿಂಗ್, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಅಧ್ಯಕ್ಷ ಪಿ. ರವಿಕುಮಾರ್, ಶಿಕ್ಷಣ ತಜ್ಞ ಡಾ. ಗುರುರಾಜ ಕರಜಗಿ ಮತ್ತು 'ಇನ್‌ಸೈಟ್ಸ್ ಐಎಎಸ್' ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ'ದ ಸಂಸ್ಥಾಪಕ ವಿನಯ್ ಕುಮಾರ್ ಜಿ.ಬಿ. ಇದ್ದರು

- ಪ್ರಜಾವಾಣಿ ಚಿತ್ರ



ಚಿಕ್ಕಮಗಳೂರು ಜಿಲ್ಲೆ ಎನ್‌.ಆರ್‌.ಪುರ ಪೊಲೀಸ್ ಠಾಣೆಯ ಕರ್ತವ್ಯ ನಿರತ ಹೆಡ್ ಕಾನ್‌ಸ್ಟೆಬಲ್ ವೈ.ಆರ್‌. ವಸಂತ್ ಕುಮಾರ್ ಅವರು ರಸ್ತೆ ಅಪಘಾತದಲ್ಲಿ ಈಚೆಗೆ ಮೃತಪಟ್ಟಿದ್ದರು. ಪೊಲೀಸ್ ವೇತನ ಪ್ಯಾಕೇಜ್‌ನಡಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದವರು ವಿಮಾ ಮೊತ್ತ ₹30 ಲಕ್ಷದ ಚೆಕ್ ಅನ್ನು ಮೃತರ ತಾಯಿ ಭಾಗ್ಯಲಕ್ಷ್ಮಮ್ಮ ಅವರಿಗೆ ಚಿಕ್ಕಮಗಳೂರಿನಲ್ಲಿ ವಿತರಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಕ್ಷಯ್ ಎಂ.ಹಾಕೆ, ಎಸ್‌ಬಿಐ ಅಧಿಕಾರಿಗಳಾದ ಜೋಬಿ ಜೋಸ್, ಕನ್ನಯ್ಯಲಾಲ್ ಭೋಪಾಲಿ, ಎ.ಎನ್‌.ಬೋಪಣ್ಣ, ಸೈಯದ್ ನಿಜಾಮುದ್ದೀನ್, ವಿನಯ್ ಪ್ರಭಾಕರ್ ಇದ್ದರು

# 'ಖಾಸಗಿ ವಿಶ್ವವಿದ್ಯಾಲಯಗಳು ಒಪ್ಪಿದರೆ ಕೆಇಎಯಿಂದ ಸಿಇಟಿ'

## ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಹೇಳಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಜ್ಯದ ಎಲ್ಲ ಖಾಸಗಿ ವಿಶ್ವವಿದ್ಯಾಲಯಗಳು ಒಪ್ಪುವುದಾದರೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದಲೇ (ಕೆಇಎ) ರಾಷ್ಟ್ರಮಟ್ಟದಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ನಡೆಸಲು ಸರ್ಕಾರ ಸಿದ್ಧ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಎಂಜಿನಿಯರಿಂಗ್ ಕಾಲೇಜುಗಳನ್ನು ಹೊಂದಿರುವ ರಾಜ್ಯದ ಎಲ್ಲ ಖಾಸಗಿ ವಿಶ್ವವಿದ್ಯಾಲಯಗಳ ಕುಲಪತಿಗಳು, ಕುಲಾಧಿಪತಿಗಳು ಮತ್ತು ಕುಲಸಚಿವರ ಸಭೆಯಲ್ಲಿ ಗುರುವಾರ ಅವರು ಮಾತನಾಡಿದರು.

ಸದ್ಯ ಆಡಳಿತ ಮಂಡಳಿಯ ಕೋಟಾದ ಎಂಜಿನಿಯರಿಂಗ್ ಸೀಟುಗಳ ಭರ್ತಿಗೆ ಖಾಸಗಿ ವಿಶ್ವವಿದ್ಯಾಲಯಗಳು ಪ್ರತ್ಯೇಕವಾದ ಪ್ರವೇಶ ಪರೀಕ್ಷೆಗಳನ್ನು ನಡೆಸುತ್ತಿವೆ.

**ಮುಖ್ಯಾಂಶಗಳು**

- ಕುಲಪತಿ, ಕುಲಾಧಿಪತಿಗಳು ಮತ್ತು ಕುಲಸಚಿವರ ಸಭೆ
- ಪ್ರತ್ಯೇಕ ಸಿಇಟಿ ನಡೆಸಲು ಸರ್ಕಾರ ಸಿದ್ಧ: ಸಚಿವ

'ಖಾಸಗಿ ವಿಶ್ವದ್ಯಾಲಯಗಳು ಸರ್ಕಾರಿ ಕೋಟಾದ ಎಂಜಿನಿಯರಿಂಗ್ ಸೀಟುಗಳನ್ನು ಸಿಇಟಿ ರ‍್ಯಾಂಕ್ ಮೇಲೆ ಭರ್ತಿ ಮಾಡಿಕೊಳ್ಳುತ್ತಿವೆ. ಆದರೆ, ಶೇ 60ರಷ್ಟು ಆಡಳಿತ ಮಂಡಳಿಯ ಸೀಟುಗಳನ್ನು ತಮ್ಮದೇ ಪ್ರತ್ಯೇಕ ಸಿಇಟಿ ಮೂಲಕ ವಿಶ್ವದ್ಯಾಲಯಗಳು ಭರ್ತಿ ಮಾಡಿಕೊಳ್ಳುತ್ತಿವೆ. ಈ ರೀತಿ ಪ್ರತ್ಯೇಕ ಸಿಇಟಿಗಳಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತದೆ. ಇದರ ಜತೆಗೆ ಒಂದೇ ಸಿಇಟಿ ಮಾಡುವಂತೆ ಸುಪ್ರೀಂ ಕೋರ್ಟ್ ಕೂಡ ಅಭಿಪ್ರಾಯ ವ್ಯಕ್ತಪಡಿಸಿದೆ. ಎಲ್ಲ ವಿಶ್ವವಿದ್ಯಾಲಯಗಳು ಸೇರಿಕೊಂಡು ಪ್ರತ್ಯೇಕ ಸಿಇಟಿ ಮಾಡಿಕೊಳ್ಳಿ' ಎಂದು ಸಚಿವರು ಸಲಹೆ ನೀಡಿದರು.

ಪಿಇಎಸ್ ವಿಶ್ವವಿದ್ಯಾಲಯದ ಸಹ ಕುಲಾಧಿಪತಿ ಪ್ರೊ. ಜವಾಹರ, 'ಕೆಇಎಯಿಂದಲೇ ರಾಷ್ಟ್ರ ಮಟ್ಟದಲ್ಲಿ ಒಂದೇ ಸಿಇಟಿ ಮಾಡುವುದಾದರೆ ನಮ್ಮದೇನೂ ಅಭ್ಯಂತರ ಇಲ್ಲ' ಎಂದರು. ಆಗ ಸಚಿವರು, 'ಎಲ್ಲ ವಿಶ್ವವಿದ್ಯಾಲಯಗಳು ಸಮಾಲೋಚಿಸಿ ನಿರ್ಧಾರಕ್ಕೆ ಬಂದರೆ ಸೂಕ್ತ' ಎಂದು ಸಲಹೆ ನೀಡಿದರು.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪಿ. ಪ್ರದೀಪ್ ಇದ್ದರು.

# ಮಹಾರಾಷ್ಟ್ರ: ನಾಳೆಯಿಂದ ವಿಶೇಷ ಅಧಿವೇಶನ

**ಮುಂಬೈ (ಪಿಟಿಐ):** ಏಕನಾಥ ಶಿಂಧೆ ಅವರು ನೂತನ ಮುಖ್ಯಮಂತ್ರಿಯಾಗಿ ಗುರುವಾರ ಪ್ರಮಾಣವಚನ ಸ್ವೀಕರಿಸಿದ ಬೆನ್ನಲ್ಲೇ, ಸಚಿವ ಸಂಪುಟದ ಮೊದಲ ಸಭೆಯನ್ನು ನಡೆಸಿದರು.

ವಿಧಾನಸಭೆಯ ವಿಶೇಷ ಅಧಿವೇಶವನ್ನು ಜುಲೈ 2 ಮತ್ತು 3ರಂದು ನಡೆಸುವ ನಿರ್ಧಾರವನ್ನು ಈ ಸಭೆಯಲ್ಲಿ ತೆಗೆದುಕೊಳ್ಳಲಾಯಿತು. ಅಧಿವೇಶನದ ಮೊದಲ ದಿನ ಸ್ಪೀಕರ್ ಆಯ್ಕೆ ನಡೆಯಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮೊದಲ ದಿನವೇ ಮುಖ್ಯಮಂತ್ರಿ ಶಿಂಧೆ ಅವರು ವಿಶ್ವಾಸಮತ ಯಾಚಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆಯಾದರೂ, ಈ ಕುರಿತು ಅಧಿಕೃತ ಮಾಹಿತಿ ಇಲ್ಲ.

'ಅಭಿವೃದ್ಧಿ ಕಾರ್ಯಗಳಿಗೆ ವೇಗ ನೀಡಬೇಕು. ಈ ದಿಸೆಯಲ್ಲಿ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಒಟ್ಟಾಗಿ ಕಾರ್ಯನಿರ್ವಹಿಸಬೇಕು ಎಂಬುದಾಗಿ ಶಿಂಧೆ ಅವರು ಸಭೆಯಲ್ಲಿ ಸೂಚಿಸಿದರು' ಎಂದು ಪ್ರಕಟಣೆ ತಿಳಿಸಿದೆ.

'ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅನುಭವಿಯಾಗಿದ್ದು, ನಮ್ಮ ಸಂಪುಟದಲ್ಲಿ ಇರುವುದು ಆಡಳಿತಾತ್ಮಕವಾಗಿ ನನಗೆ ನೆರವಾಗುವುದು' ಎಂದೂ ಅವರು ಹೇಳಿದ್ದಾಗಿ ಪ್ರಕಟಣೆ ತಿಳಿಸಿದೆ.

'ಆಡಳಿತಾತ್ಮಕ ನಿರ್ಧಾರಗಳನ್ನು ತ್ವರಿತವಾಗಿ ತೆಗೆದುಕೊಳ್ಳುವ ಮೂಲಕ ಅಭಿವೃದ್ಧಿ ಕಾರ್ಯಗಳಿಗೆ ಚುರುಕು ನೀಡಬೇಕು' ಎಂದು ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ರಾಜ್ಯದಲ್ಲಿ ಬಿತ್ತನೆ ಕಾರ್ಯದ ಪ್ರಗತಿ ಬಗ್ಗೆಯೂ ಶಿಂಧೆ ಹಾಗೂ ಫಡಣವೀಸ್ ಅವರು ಮಾಹಿತಿ ಪಡೆದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಶುಭಾಶಯ ಕೋರಿದ ಉದ್ಧವ್:** ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ನೂತನ ಮುಖ್ಯಮಂತ್ರಿ ಏಕನಾಥ ಶಿಂಧೆ, ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರಿಗೆ ಗುರುವಾರ ಶುಭಾಶಯ ಕೋರಿದರು.

ಈ ಕುರಿತು ಮರಾಠಿಯಲ್ಲಿ ಅವರು ಟ್ವೀಟ್ ಮಾಡಿದ್ದಾರೆ.

# ಬೆಂಗಳೂರು– ಮಂಗಳೂರು ಹೆದ್ದಾರಿ ದುರಸ್ತಿಗೆ ಗಡುವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು– ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ಹಾಸನ– ಸಕಲೇಶಪುರ ಮತ್ತು ಅಡ್ಡಹೊಳೆ ವ್ಯಾಪ್ತಿಯಲ್ಲಿ ಹೆದ್ದಾರಿಯು ಹದಗೆಟ್ಟಿರುವುದರಿಂದ ತಕ್ಷಣವೇ ಅಲ್ಲಿ ದುರಸ್ತಿ ಕಾಮಗಾರಿ ಕೈಗೆತ್ತಿಕೊಳ್ಳಬೇಕೆಂದು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ಮತ್ತು ಇಂಧನ ಸಚಿವ ವಿ.ಸುನಿಲ್ ಕುಮಾರ್ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚಿಸಿದರು.

ಲೋಕೋಪಯೋಗಿ ಸಚಿವರ ಕಚೇರಿಯಲ್ಲಿ ಗುರುವಾರ ಈ ಕುರಿತು ನಡೆದ ಸಭೆಯಲ್ಲಿ ಹೆದ್ದಾರಿ ಸಮಸ್ಯೆಯ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು.

ಶಿಥಿಲಗೊಂಡ ಹೆದ್ದಾರಿಯಿಂದಾಗಿ ವಾಹನಗಳಿಗೆ ಆ ಭಾಗದಲ್ಲಿ ಸಂಚರಿಸುವುದೇ ಕಷ್ಟವಾಗಿದೆ. ಈ ಬಗ್ಗೆ ಸಾರ್ವಜನಿಕರಿಂದಲೂ ವ್ಯಾಪಕ ದೂರುಗಳು ಕೇಳಿ ಬಂದಿವೆ. ಇನ್ನೆರಡು ದಿನಗಳೊಳಗೆ ದುರಸ್ತಿ ಕಾರ್ಯವನ್ನು ಆರಂಭಿಸಬೇಕು. ಹತ್ತು ದಿನಗಳಲ್ಲಿ ಹೆದ್ದಾರಿಯನ್ನು ಸುಸ್ಥಿತಿಗೆ ತರಬೇಕೆಂದು ಸಚಿವರು ಗಡುವು ನೀಡಿದರು.

## ಸಂಕ್ಷಿಪ್ತ ಸುದ್ದಿ

### 'ಕೆಪಿಟಿಸಿಎಲ್ ನೇಮಕಾತಿ ಪಾರದರ್ಶಕ'

**ಬೆಂಗಳೂರು:** 'ಕೆಪಿಟಿಸಿಎಲ್ ವತಿಯಿಂದ ಮುಂದಿನ ತಿಂಗಳು 1550 ಹೊಸ ಹುದ್ದೆಗಳಿಗೆ ನೇಮಕ ಪ್ರಕ್ರಿಯೆ ಆರಂಭವಾಗಲಿದೆ. ಅತ್ಯಂತ ಪಾರದರ್ಶಕವಾಗಿ ಈ ನೇಮಕಾತಿ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುವುದು. ಯಾವುದೇ ಕಾರಣಕ್ಕೂ ಮಧ್ಯವರ್ತಿಗಳ ಹೇಳಿಕೆಗಳಿಗೆ ಕಿವಿಗೊಡಬೇಡಿ' ಎಂದು ಉದ್ಯೋಗಾಕಾಂಕ್ಷಿಗಳಿಗೆ ಇಂಧನ ಹಾಗೂ ಕನ್ನಡ ಸಂಸ್ಕೃತಿ ಸಚಿವ ವಿ.ಸುನೀಲ್ ಕುಮಾರ್ ತಿಳಿಸಿದರು.

ನಗರದಲ್ಲಿ ಗುರುವಾರ ಕೆಪಿಟಿಸಿಎಲ್ ಹಾಗೂ ವಿವಿಧ ಎಸ್ಕಾಂ ವ್ಯಾಪ್ತಿಯಲ್ಲಿ ಕಿರಿಯ ಪವರ್ ಮ್ಯಾನ್ ಹಾಗೂ 1375 ಜನರಿಗೆ ನೇಮಕ ಆದೇಶ ನೀಡಿ ಮಾತನಾಡಿದ ಅವರು, 'ಇಂಧನ ಇಲಾಖೆಯಲ್ಲಿ ನಡೆಯುವ ಯಾವುದೇ ನೇಮಕಗಳು ಪ್ರಭಾವ, ಒತ್ತಡಕ್ಕೆ ಮಣಿಯದೆ ಪಾರದರ್ಶಕವಾಗಿ ನಡೆಸುತ್ತೇವೆ. ಯಾವುದೇ ಕಾರಣಕ್ಕೂ ಮಧ್ಯವರ್ತಿಗಳ ಮಾತಿಗೆ ಕಿವಿಕೊಡಬೇಡಿ' ಎಂದು ಎಚ್ಚರಿಕೆ ನೀಡಿದರು.

'ಸರ್ಕಾರಿ ನೌಕರಿ ಪಡೆಯುವುದು ಕಷ್ಟಕರ. ಸುಮಾರು 3.5 ಲಕ್ಷ ಜನರು 1550 ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದು, ಜುಲೈ 23 ಮತ್ತು 24ರಿಂದ ಪ್ರಕ್ರಿಯೆ ಆರಂಭವಾಗುತ್ತದೆ' ಎಂದು

### ಹರ್ಷ ಕೊಲೆ: ಎನ್‌ಐಎ ಭೇಟಿ

**ಶಿವಮೊಗ್ಗ:** ಬಜರಂಗದಳ ಕಾರ್ಯಕರ್ತ ಹರ್ಷ ಹತ್ಯೆಯ ಬಗ್ಗೆ ಹೆಚ್ಚಿನ ತನಿಖೆಗಾಗಿ, ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಬುಧವಾರ ರಾತ್ರಿಯಿಂದ ನಗರದಲ್ಲಿ ಬೀಡು ಬಿಟ್ಟಿದ್ದಾರೆ.

ಎಂಟು ವಾಹನಗಳಲ್ಲಿ ಬಂದಿರುವ ಎನ್‌ಐಎ ಅಧಿಕಾರಿಗಳು ಗುರುವಾರ ನಗರದ 13 ಕಡೆ ತೆರಳಿ ತನಿಖೆ ನಡೆಸಿದರು. ಹರ್ಷ ಕೊಲೆ ನಡೆದ ಸ್ಥಳ, ಆತನ ಮನೆ, ಓಡಾಡುತ್ತಿದ್ದ ಸ್ಥಳ, ಆರೋಪಿಗಳು ಆಶ್ರಯ ಪಡೆದಿದ್ದ ಸ್ಥಳ ಸೇರಿದಂತೆ ಹಲವು ಮಾಹಿತಿಯನ್ನು ತನಿಖಾ ತಂಡ ಪಡೆಯಿತು. ಅವರಿಗೆ ಸ್ಥಳೀಯ ಪೊಲೀಸರು ನೆರವಾದರು.

ಶಿವಮೊಗ್ಗ ನಗರದಲ್ಲಿ ತನಿಖೆಯ ವೇಳೆ ಆರೋಪಿಗಳು ಹಾಗೂ ಶಂಕಿತರಿಗೆ ಸಂಬಂಧಿಸಿದ ಮೊಬೈಲ್ ಫೋನ್, ಸಿಮ್ ಕಾರ್ಡ್‌ಗಳು, ಮೆಮೊರಿ ಕಾರ್ಡ್‌ಗಳು, ಹಾರ್ಡ್ ಡಿಸ್ಕ್ ಸೇರಿದಂತೆ ಡಿಜಿಟಲ್ ಸಾಮಗ್ರಿಗಳು ಹಾಗೂ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಎನ್‌ಐಎ ಪ್ರಕಟಣೆ ತಿಳಿಸಿದೆ.

### ಬೈಜೂಸ್: ಇಂಗ್ಲಿಷ್ ಕಲಿಕೆ ಅವಕಾಶ

**ಬೆಂಗಳೂರು:** ಬೈಜೂಸ್ ಸಂಸ್ಥೆಯು 'ರೈಟ್ ಟು ಲಿವ್'ನೊಂದಿಗೆ ಇಂಗ್ಲಿಷ್ ಕಲಿಕೆಗೆ ಅವಕಾಶ ಕಲ್ಪಿಸಿದೆ.

ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳ ಸುಮಾರು 8,500 ವಿದ್ಯಾರ್ಥಿಗಳಿಗೆ ತಂತ್ರಜ್ಞಾನ ಆಧಾರಿತ ಕಲಿಕೆ ನೀಡುವ ಗುರಿ ಹೊಂದಲಾಗಿದ್ದು, ಬೈಜೂಸ್‌ನ ಉದ್ಯೋಗಿಗಳು ಈ ಮಕ್ಕಳಿಗೆ ಇಂಗ್ಲಿಷ್ ಕಲಿಸಲು ಸ್ವಪ್ರೇರಣೆಯಿಂದ ಮುಂದೆ ಬಂದಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ 338 ಪರವಾನಗಿ ನೀಡಲಾಗಿದೆ. ಒಂದು ಮಗುವಿನ ಭವಿಷ್ಯ ರೂಪಿಸುವಲ್ಲಿ ಗುಣಮಟ್ಟದ ಶಿಕ್ಷಣದ ಅಗತ್ಯ. ಡಿಜಿಟಲ್ ಕಲಿಕಾ ಸಾಧನೆಗಳೊಂದಿಗೆ ವಿದ್ಯಾರ್ಥಿಗಳನ್ನು ಸಬಲಗೊಳಿಸಲಾಗುವುದು ಎಂದು ಸಂಸ್ಥೆಯ ಸಾಮಾಜಿಕ ಉಪಕ್ರಮಗಳ ವಿಭಾಗದ ಉಪಾಧ್ಯಕ್ಷೆ ಮಾನ್ಸಿ ಕಸ್ಲಿವಾಲ್ ತಿಳಿಸಿದ್ದಾರೆ.

### ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ

**ನಂಜನಗೂಡು:** ತಾಲ್ಲೂಕಿನ ವೀರ ದೇವನಪುರದಲ್ಲಿ ಐವರು ಅಪ್ರಾಪ್ತರು, 9 ವರ್ಷದ ಬಾಲಕನ ಮೇಲೆ ಅತ್ಯಾಚಾರ ಎಸಗಿದ್ದು, ಅದನ್ನೇ ವಿಡಿಯೊ ಮಾಡಿ ವೈರಲ್ ಮಾಡಿದ್ದಾರೆ.

ಪ್ರಥಮ ಪಿಯುಸಿಯ ಇಬ್ಬರು, ಎಸ್ಸೆಸ್ಸೆಲ್ಸಿ ಓದುತ್ತಿರುವ ಇಬ್ಬರು ಹಾಗೂ 9ನೇ ತರಗತಿಯ ಒಬ್ಬ ವಿದ್ಯಾರ್ಥಿ 3ನೇ ತರಗತಿಯ ಬಾಲಕನನ್ನು ಆಟವಾಡುವ ನೆಪದಲ್ಲಿ, ಗ್ರಾಮದ ಹೊರವಲಯದ ನಿರ್ಜನ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಲೈಂಗಿಕ ಕಿರುಕುಳ ನೀಡಿದ್ದಾರೆ. ಆತನ ಮೇಲೆ ಇಬ್ಬರು ಅತ್ಯಾಚಾರ ಎಸಗಿದ್ದು, ಉಳಿದ ಮೂವರು ಅದನ್ನು ವಿಡಿಯೊ ಚಿತ್ರೀಕರಣ ಮಾಡಿ, ವಾಟ್ಸ್ ಆ್ಯಪ್‌ನಲ್ಲಿ ಹರಿಬಿಟ್ಟಿದ್ದಾರೆ ಎನ್ನಲಾಗಿದೆ.

ಬಾಲಕನ ಪಾಲಕರು ಪೊಲೀಸರಿಗೆ ದೂರು ನೀಡಿದ್ದು, ಐವರು ಅಪ್ರಾಪ್ತರನ್ನು ವಶಕ್ಕೆ ಪಡೆದಿದ್ದಾರೆ.

## ನಗರದಲ್ಲಿ ಇಂದು

**ಇವಿ ಅಭಿಯಾನ–2022:** ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅತಿಥಿಗಳು: ನಿರ್ಮಲಾ ಸೀತಾರಾಮನ್, ಉಪಸ್ಥಿತಿ: ಸುನೀಲ್ ಕುಮಾರ್, ಅಧ್ಯಕ್ಷತೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಸ್ಥಳ: ಚಾಮರ ವಜ್ರ ಅರಮನೆ ಮೈದಾನ, ಜಯಮಹಲ್ ರಸ್ತೆ, ಬೆಳಿಗ್ಗೆ: 10

**ಜಿಎಸ್‌ಟಿ ದಿನಾಚರಣೆ–2022:** ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಡಾ.ಜೆ.ಪಿ. ಪ್ರಕಾಶ್, ಆಯೋಜನೆ: ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಟ್ಯಾಕ್ಸ್ ಪಾರ್ಟಿಷನರ್ಸ್, ಸ್ಥಳ: ಹೋಟೆಲ್ ವೆಸ್ಟ್ ಫೋರ್ಟ್, ರಾಜಾಜಿನಗರ, ಬೆಳಿಗ್ಗೆ 10

**ಗ್ರೀನ್ ವೆಹಿಕಲ್ ಎಕ್ಸ್‌ಪೋ 3ನೇ ಆವೃತ್ತಿ:** ಉದ್ಘಾಟನೆ: ಭಗವಂತ ಖೂಬಾ, ಸುನೀಲ್ ಕುಮಾರ್, ಮುರುಗೇಶ್ ಆರ್. ನಿರಾಣಿ, ಆಯೋಜನೆ: ಲೋಗೋ9, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ, ಮಧ್ಯಾಹ್ನ 2.30

**ವೈದ್ಯ ದಿನಾಚರಣೆ ಸಮಾರಂಭ:** ಅತಿಥಿಗಳು: ಎನ್.ಸಂತೋಷ್ ಹೆಗ್ಡೆ, ಡಾ.ಮಹೇಶ್ ಜೋಷಿ, ಡಾ.ಕೆ. ರವಿ, ಅಧ್ಯಕ್ಷತೆ: ಡಾ.ಕಟೀಲ್ ಸುರೇಶ ಕುಡ್ವಾ, ಆಯೋಜನೆ: ಇಂಡಿಯನ್ ಮೆಡಿಕಲ್ ಅಸೋಸಿಯೇಷನ್, ಸ್ಥಳ: ಡಾ.ಬಸವರಾಜೇಂದ್ರ ಸಭಾಂಗಣ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರ, ಕೆ.ಆರ್. ರಸ್ತೆ, ಮಧ್ಯಾಹ್ನ 3



ದೇವಕಿ ಪಂಡಿತ, ಜಯತೀರ್ಥ ಮೇವುಂಡಿ

ಬೋಲವ ವಿಠ್ಠಲ್: ಗಾಯನ: ದೇವಕಿ ಪಂಡಿತ ಮತ್ತು ಜಯತೀರ್ಥ ಮೇವುಂಡಿ, ತಬಲಾ: ನಿಖಿಲ್ ಪಾಠಕ್, ಪಖವಾಜ್: ಸುಖದ್ ಮುಂಡೆ, ಹಾರ್ಮೋನಿಯಂ: ಆದಿತ್ಯ ಓಕೆ, ಹೆಚ್ಚುವರಿ ಲಯಗಳು: ಸೂರ್ಯಕಾಂತ್ ಸುರ್ವೆ, ಕೊಳಲು ಷಡ್ಜ್ ಗೋಡ್ಖಿಂಡಿ, ಆಯೋಜನೆ: ಪಂಚಮ್ ನಿಷಾದ್ ಕ್ರಿಯೇಟಿವ್ ಸಂಸ್ಥೆ, ಸ್ಥಳ: ಚೌಡಯ್ಯ ಸ್ಮಾರಕ 1ನೇ ಸಭಾಂಗಣ, ವೈಯಾಲಿ ಕಾವಲ್, ಕೋದಂಡರಾಮಪುರ, ಮಲ್ಲೇಶ್ವರ ಸಂಜೆ 6.30

**ಪತ್ರಿಕಾ ದಿನಾಚರಣೆ ಅಂಗವಾಗಿ ಪತ್ರಿಕೋದ್ಯಮ ಸವಾಲುಗಳು ಅಂದು–ಇಂದು–ಮುಂದು ವಿಚಾರಸಂಕಿರಣ:** ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಎಸ್.ಎಂ. ಕೃಷ್ಣ, ಪ್ರಧಾನ ಭಾಷಣಕಾರರು: ಮಾಯಾ ಶರ್ಮಾ, ಹುಣಸವಾಡಿ ರಾಜನ್, ಉಪಸ್ಥಿತಿ: ಎನ್.ಮಂಜುನಾಥ ಪ್ರಸಾದ್, ಡಾ.ಪಿ.ಎಸ್. ಹರ್ಷ, ಆಯೋಜನೆ: ಕರ್ನಾಟಕ ಮಾಧ್ಯಮ ಅಕಾಡೆಮಿ, ಪ್ರೆಸ್‌ಕ್ಲಬ್ ಆಫ್ ಬೆಂಗಳೂರು ಮತ್ತು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಸ್ಥಳ: ಪ್ರೆಸ್‌ಕ್ಲಬ್ ಆಫ್ ಬೆಂಗಳೂರು, ಮಧ್ಯಾಹ್ನ 3.30

**ನ್ಯಾಯಮೂರ್ತಿ ಋತುರಾಜ ಅವಸ್ಥಿ ಅವರಿಗೆ ಬೀಳ್ಕೊಡುಗೆ ಸಮಾರಂಭ:** ಅತಿಥಿಗಳು: ಅಲೋಕ್ ಅರಾಧೆ, ಬಿ. ವೀರಪ್ಪ, ಪ್ರಭುಲಿಂಗ.ಕೆ. ನಾವದಗಿ, ಎಂ.ಬಿ. ನರಗುಂದ, ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ದಿ ಅಡ್ವಕೇಟ್ಸ್ ಅಸೋಸೇಷನ್, ಸ್ಥಳ: ಹೈಕೋರ್ಟ್ ಎ.ಎ.ಬಿ ಹಾಲ್ ನಂ. 2, ಮಧ್ಯಾಹ್ನ 3.30

**ಹರಿನಾಮ ಸಂಕೀರ್ತನೆ:** ಗಾಯನ: ಅಭಿಜ್ಞಾ.ಪಿ. ಕಶ್ಯಪ್, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಪಿಟೀಲು: ಭಾರ್ಗವಿ ನಾರಾಯಣ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂ ಧರ್ಮ ಪ್ರಚಾರ ಪರಿಷತ್, ಸ್ಥಳ: ಗೀತಾ ಮಂದಿರ, 4ನೇ ಮುಖ್ಯರಸ್ತೆ, ಶ್ರೀರಾಮಪುರ, ಸಂಜೆ 6.30



ಅಭಿಜ್ಞಾ.ಪಿ. ಕಶ್ಯಪ್

## ಇ.ವಿ., ಹೈಬ್ರಿಡ್ ವಾಹನ ಎಕ್ಸ್‌ಪೊ

**ಬೆಂಗಳೂರು:** ನಗರದ 'ಬೆಂಗಳೂರು ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರ'ದಲ್ಲಿ ಜುಲೈ 1ರಿಂದ 3ರವರೆಗೆ ವಿದ್ಯುತ್ ಚಾಲಿತ ಹಾಗೂ ಹೈಬ್ರಿಡ್ ವಾಹನಗಳ ಎಕ್ಸ್‌ಪೊ ನಡೆಯಲಿದೆ.

ವಿದ್ಯುತ್ ಚಾಲಿತ ಹಾಗೂ ಹೈಬ್ರಿಡ್ ವಾಹನಗಳಿಗೆ ಸಂಬಂಧಿಸಿದ ತಂತ್ರಜ್ಞಾನ ಮತ್ತು ಉತ್ಪನ್ನಗಳನ್ನು ಈ ಕಾರ್ಯಕ್ರಮದಲ್ಲಿ ಪ್ರದರ್ಶನಕ್ಕೆ ಇರಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ. ಉದ್ಯಮಕ್ಕೆ ಸಂಬಂಧಿಸಿದ ಹೊಸ ಒಪ್ಪಂದಗಳನ್ನು ಕಾಣಲು, ಉದ್ಯಮದ ತಜ್ಞರ ಜೊತೆ ಸಮಾಲೋಚನೆ ನಡೆಸಲು ಮತ್ತು ಪಾಲುದಾರರನ್ನು ಕಂಡುಕೊಳ್ಳಲು ಇದು ಒಳ್ಳೆಯ ವೇದಿಕೆ ಎಂದೂ ಪ್ರಕಟಣೆ ಹೇಳಿದೆ.

ಜುಲೈ 1ರಿಂದ 3ರವರೆಗೆ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5.30ರವರೆಗೆ ಸಾರ್ವಜನಿಕರಿಗೆ ಪ್ರವೇಶ ಇರಲಿದೆ.

# ಡಿಕೆಶಿ ವಿಚಾರಣೆ ಇಂದು

ಪ್ರಜಾವಾಣಿ ವಾರ್ತೆ

**ನವದೆಹಲಿ:** ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ಜಾರಿ ನಿರ್ದೇಶನಾಲಯದಿಂದ (ಇ.ಡಿ) ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿದಂತೆ ಐವರು ಆರೋಪಿಗಳ ವಿರುದ್ಧ ದಾಖಲಾಗಿರುವ ಪ್ರಕರಣದ ವಿಚಾರಣೆ ಇಲ್ಲಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಜುಲೈ 1ರಿಂದ ನಡೆಯಲಿದೆ.

ಅಕ್ರಮ ಹಣ ವರ್ಗಾವಣೆ ಪ್ರಕರಣದ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಡಿ.ಕೆ. ಶಿವಕುಮಾರ್, ಪ್ರಕರಣದ ಇತರ ಆರೋಪಿಗಳಾದ ಸಚಿನ್ ನಾರಾಯಣ್, ಸುನೀಲ್ ಕುಮಾರ್ ಶರ್ಮಾ, ರಾಜೇಂದ್ರ ಹಾಗೂ ದೆಹಲಿ ಕರ್ನಾಟಕ ಭವನದ ನೌಕರ ಆಂಜನೇಯ ಹನುಮಂತಯ್ಯ ಅವರಿಗೆ ಮೇ ತಿಂಗಳಲ್ಲಿ ಸಮನ್ಸ್ ಜಾರಿ ಮಾಡಲಾಗಿತ್ತು.

ಅಕ್ರಮ ಹಣ ವರ್ಗಾವಣೆ ಆರೋಪದಲ್ಲಿ 2019ರ ಸೆಪ್ಟೆಂಬರ್‌ನಲ್ಲಿ ಬಂಧನಕ್ಕೆ ಒಳಗಾಗಿ ಜಾಮೀನು ಪಡೆದಿರುವ ಶಿವಕುಮಾರ್ ವಿರುದ್ಧ ಇ.ಡಿ. ಅಧಿಕಾರಿಗಳು ಮೇ ತಿಂಗಳಲ್ಲಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ (ಚಾರ್ಜ್‌ಶೀಟ್) ಸಲ್ಲಿಸಿದ್ದರು.

2017ರಲ್ಲಿ ಶಿವಕುಮಾರ್ ಅವರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ದಾಳಿಮಾಡಿದ್ದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶೋಧ ನಡೆಸಿದ್ದರು. ಆಗ, ದೆಹಲಿಯ ವಿವಿಧ ಸ್ಥಳಗಳಲ್ಲಿ ₹ 8.59 ಕೋಟಿ ನಗದು ವಶಕ್ಕೆ ಪಡೆಯಲಾಗಿತ್ತು. ಈ ಕುರಿತು ಜಾರಿ ನಿರ್ದೇಶನಾಲಯ ತನಿಖೆ ನಡೆಸಿತ್ತು.

## ಯಶಸ್ವಿನಿ, ಕ್ಷೀರ ಯೋಜನೆಗೆ ಮರು ಚಾಲನೆ

ಪ್ರಜಾವಾಣಿ ವಾರ್ತೆ

**ರಾಜರಾಜೇಶ್ವರಿ ನಗರ:** ಯಶಸ್ವಿನಿ, ಕ್ಷೀರ ಯೋಜನೆಯನ್ನು ಮತ್ತೆ ಜಾರಿಗೊಳಿಸಲಾಗುವುದು ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು, ಕೃಷಿಕರು, ಸಣ್ಣ ವ್ಯಾಪಾರಿಗಳು, ಸ್ತ್ರೀಶಕ್ತಿ ಸಂಘಗಳಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಸಹಕಾರ ಸಂಘಗಳ ಮೂಲಕ 24 ಸಾವಿರ ಕೋಟಿ ಬಡ್ಡಿ ರಹಿತ ಸಾಲವನ್ನು ನೀಡಲಾಗುವುದು ಎಂದರು.

ಗ್ರಾಮಾಂತರ ಮಂಡಲ ಬಿಜೆಪಿ ಅಧ್ಯಕ್ಷ ಎಂ.ರಂಗರಾಜು, ರಾಜ್ಯ ಹಿಂದುಳಿದ ವರ್ಗ ಬಿಜೆಪಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಪಟೇಲ್ ದೇವರಾಜ್, ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿಗಳಾದ ಚಿಕ್ಕರಾಜು, ಶಿವಕುಮಾರ್ ಗೌಡ, ಮಂಜುನಾಥ್, ಬಿಜೆಪಿ ಮುಖಂಡರಾದ ರಾಮೋಹಳ್ಳಿ ಚೇತನ್, ರೈತರ ಸೇವಾ ಪತ್ತಿನ ಸಹಕಾರ ಬ್ಯಾಂಕ್ ಅಧ್ಯಕ್ಷ ವಿ.ವೇಣುಗೋಪಾಲ್, ಬೆಂಗಳೂರು ದಕ್ಷಿಣ ತಾಲ್ಲೂಕು ಭೂಮಂಜೂರಾತಿ ಮಾಜಿ ಅಧ್ಯಕ್ಷ ಉತ್ತರಿ ವೆಂಕಟಪ್ಪ, ತಾವರೆಕೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆಂಪೇಗೌಡ, ಕ್ಷೇತ್ರದ ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಕೃಷ್ಣ ಸಾಗರ, ಜಗದೀಶ್, ವೆಂಕಟರಾಮು ಹಾಜರಿದ್ದರು.

# ಕನ್ಹಯ್ಯ ಹತ್ಯೆ: ಸೌಹಾರ್ದ ಕರ್ನಾಟಕ ಖಂಡನೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉದಯಪುರದಲ್ಲಿ ಕನ್ಹಯ್ಯ ಲಾಲ್ ಹತ್ಯೆ ಮಾಡಿದವರಿಗೆ ತಕ್ಕ ಶಿಕ್ಷೆಯಾಗಲಿ. ಹಿಂಸೆಯನ್ನು ಪ್ರಚೋದಿಸುವ ಯಾವುದೇ ವ್ಯಕ್ತಿ ಅಥವಾ ಯಾವುದೇ ಧರ್ಮದ ಮೂಲಭೂತವಾದಿಗಳಿಗೆ ಈ ಶಿಕ್ಷೆ ಒಂದು ಪಾಠವಾಗಲಿ' ಎಂದು ಸೌಹಾರ್ದ ಕರ್ನಾಟಕ ಆಗ್ರಹಿಸಿದೆ.

'ನೂಪುರ್ ಶರ್ಮ ಅವರ ಪ್ರಚೋದನಕಾರಿ ಮಾತನ್ನು ನಾವು ಒಪ್ಪುವುದಿಲ್ಲ. ಹಾಗೆಯೇ ಅವರ ಅಭಿಪ್ರಾಯವನ್ನು ಪ್ರಜಾಸತ್ತಾತ್ಮಕ ಮಾರ್ಗಗಳ ಮೂಲಕ ವಿರೋಧಿಸಬೇಕು ಎಂಬುದಾಗಿ ಬಯಸುತ್ತೇವೆ' ಎಂದು ಬರಗೂರು ರಾಮಚಂದ್ರಪ್ಪ, ಕೆ.ಮರುಳಸಿದ್ದಪ್ಪ, ಜಿ.ರಾಮಕೃಷ್ಣ, ಸಿದ್ದನಗೌಡ ಪಾಟೀಲ್, ಕೆ.ಶರೀಫಾ, ನಿಸಾರ್ ಅಹಮದ್, ಮಾವಳ್ಳಿ ಶಂಕರ್, ಆರ್. ಮೋಹನರಾಜು, ಬಿ.ಎಂ.ಹನೀಫ್, ಗೌರಮ್ಮ, ಬಿ.ರಾಜಶೇಖರಮೂರ್ತಿ, ಎಸ್.ವೈ.ಗುರುಶಾಂತ್ ಪ್ರಕಟಣೆಯಲ್ಲಿ ಹೇಳಿದ್ದಾರೆ.

**ನಿಧನವಾರ್ತೆ**

## ಎಂ.ಡಿ.ಹರಿಗೋವಿಂದ



ಬೆಂಗಳೂರು: ಭಾರತ ಕಮ್ಯುನಿಸ್ಟ್ ಪಕ್ಷದ ನಾಯಕ ಹಾಗೂ ಎಐಟಿಯುಸಿ ಕಾರ್ಯಾಧ್ಯಕ್ಷರೂ ಆದ ಎಂ.ಡಿ. ಹರಿಗೋವಿಂದ (75) ಗುರುವಾರ ಸಂಜೆ ಹೃದಯಾಘಾತದಿಂದ ನಿಧನರಾದರು.

ವಿದ್ಯಾರ್ಥಿಯಾಗಿದ್ದಾಗಲೇ ಕಮ್ಯುನಿಸ್ಟ್ ಚಳವಳಿಯಲ್ಲಿ ತೊಡಗಿದ್ದ ಅವರಿಗೆ ಪತ್ನಿ, ಇಬ್ಬರು ಪುತ್ರರಿದ್ದಾರೆ.

1970ರ ದಶಕದಲ್ಲಿ ಬೆಂಗಳೂರಿನಲ್ಲಿ ಯುವಜನ ಸಭಾ (ಎಐವೈಎಫ್ ನ ಹಳೆ ಆವೃತ್ತಿ) ಮೂಲಕ ಪ್ರಗತಿಪರ ಚಳವಳಿಗಳಲ್ಲಿ ಭಾಗವಹಿಸಿದ್ದರು. ಬಳಿಕ ಎಂಇಐ ಕಾರ್ಖಾನೆಯ ನಾಯಕರಾಗಿ, ನಂತರ ಎಐಟಿಯುಸಿ ಹಾಗೂ ಪಕ್ಷದ ಬೆಂಗಳೂರು ಜಿಲ್ಲಾ ನಾಯಕರಾಗಿ ಕಾರ್ಯನಿರ್ವಹಿಸಿದ್ದರು.

ಶುಕ್ರವಾರ ಬೆಳಿಗ್ಗೆ 6ರಿಂದ 9 ಗಂಟೆಯ ತನಕ ಘಾಟೆ ಭವನದಲ್ಲಿ ಅಂತಿಮ ದರ್ಶನಕ್ಕೆ ಅವಕಾಶ ನೀಡಲಾಗಿದೆ.

ಬಳಿಕ ಹರಿಗೋವಿಂದ ಅವರ ದೇಹವನ್ನು ಬೌರಿಂಗ್ ಆಸ್ಪತ್ರೆಗೆ ಹಸ್ತಾಂತರಿಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

## ಕೊಲೆ ಹಿಂದೆ ಭಯೋತ್ಪಾದಕ ಸಂಘಟನೆ: ಬೊಮ್ಮಾಯಿ

ಬೆಂಗಳೂರು: ರಾಜಸ್ಥಾನದ ಉದಯಪುರದಲ್ಲಿ ನಡೆದ ಕನ್ಹಯ್ಯ ಲಾಲ್ ಹತ್ಯೆಯ ಹಿಂದೆ ಭಯೋತ್ಪಾದಕ ಸಂಘಟನೆಗಳಿವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಇದು ಭಯೋತ್ಪಾದನೆಯ ಕೃತ್ಯ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ. ಇದರ ಹಿಂದೆ ಅಂತರರಾಷ್ಟ್ರೀಯ ಷಡ್ಯಂತ್ರವಿದೆ. ಈ ಬಗ್ಗೆ ಆಮೂಲಾಗ್ರವಾಗಿ ತನಿಖೆ ನಡೆಸಿ ಅಪರಾಧಿಗಳನ್ನು ಗಲ್ಲಿಗೇರಿಸಬೇಕು. ಈ ನಿಟ್ಟಿನಲ್ಲಿ ರಾಜಸ್ಥಾನ ಸರ್ಕಾರ ಸಮಗ್ರ ತನಿಖೆ ಕೈಗೊಂಡು ಕ್ರಮ ಜರುಗಿಸಬೇಕು' ಎಂದು ಒತ್ತಾಯಿಸಿದರು.

**ಪ್ರಧಾನಿ ನಿರ್ದೇಶನದಂತೆ ತನಿಖೆ:** ಕೇಂದ್ರ ಗೃಹ ಸಚಿವಾಲಯದಿಂದ ರಾಜ್ಯ ಗುತ್ತಿಗೆದಾರರ ಸಂಘಕ್ಕೆ ದಾಖಲೆಗಳನ್ನು ಒದಗಿಸಲು ಸೂಚಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, 'ಈ ಬಗ್ಗೆ ನನಗೆ ಮಾಹಿತಿ ಇಲ್ಲ. ಗುತ್ತಿಗೆದಾರರ ಸಂಘ ದಾಖಲೆಗಳನ್ನು ಕೊಡಲಿ, ತೊಂದರೆ ಇಲ್ಲ. ಪ್ರಧಾನಮಂತ್ರಿ ನಿರ್ದೇಶನದ ಮೇರೆಗೆ ತನಿಖೆ ನಡೆಸಲಾಗುವುದು' ಎಂದೂ ಬೊಮ್ಮಾಯಿ ಹೇಳಿದರು.

## ತಪ್ಪಿತಸ್ಥರಿಗೆ ತ್ವರಿತ ಶಿಕ್ಷೆ: ಆಗ್ರಹ

ಬೆಂಗಳೂರು: 'ರಾಜಸ್ಥಾನದ ಉದಯಪುರದಲ್ಲಿ ನಡೆದ ಟೈಲರ್ ಕನ್ಹಯ್ಯ ಲಾಲ್ ಕೊಲೆಯ ಕೃತ್ಯ ಮತ್ತು ಕೊಲೆಗಾರರ ವರ್ತನೆ ನಾಗರಿಕ ಸಮಾಜ ತಲೆತಗ್ಗಿಸುವಂಥದ್ದು. ಈ ಕೊಲೆಯನ್ನು ಮನುಷ್ಯತ್ವವಿರುವ ಪ್ರತಿಯೊಬ್ಬರೂ ಖಚಿತ, ತ್ವರಿತ ನಿಲುವು ತಾಳಿ ಸ್ಪಷ್ಟ ಪದಗಳಲ್ಲಿ ಖಂಡಿಸಬೇಕಿದೆ' ಎಂದು ಲೇಖಕರ ಗುಂಪು ಆಗ್ರಹಿಸಿದೆ.

ಈ ಬಗ್ಗೆ ಪತ್ರಿಕೆ ಹೇಳಿಕೆ ನೀಡಿರುವ ಚಂದ್ರಕಾಂತ ವಡ್ಡು, ವೆಂಕಟೇಶ ಮಾಚಕನೂರ, ಬಸವರಾಜ ಸಾದರ, ಜಗದೀಶ ಕೊಪ್ಪ, ಮಲ್ಲಿಕಾರ್ಜುನ ಹೆಗ್ಗಳಗಿ, ಧರಣೇಂದ್ರ ಕುರಕುರೆ, ಬಿ.ಆರ್. ಪೊಲೀಸ್ ಪಾಟೀಲ ಸೇರಿದಂತೆ ಸುಮಾರು 25 ಬರಹಗಾರರು, 'ತಪ್ಪಿತಸ್ಥರನ್ನು ತ್ವರಿತ ಶಿಕ್ಷೆಗೆ ಗುರಿಪಡಿಸುವುದೂ ಮುಖ್ಯ' ಎಂದಿದ್ದಾರೆ.

### ಹಿಂದೂಪರ ಸಂಘಟನೆ ಆಕ್ರೋಶ • ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಮುಸ್ಲಿಂ ಮುಖಂಡರ ಒತ್ತಾಯ

# ಕನ್ಹಯ್ಯಲಾಲ್ ಹತ್ಯೆ: ವಿವಿಧೆಡೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ




ಟೇಲರ್ ಕನ್ಹಯ್ಯ ಲಾಲ್ ಅವರ ಹತ್ಯೆ ಖಂಡಿಸಿ ಹುಬ್ಬಳ್ಳಿಯ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ವಿಶ್ವ ಹಿಂದೂ ಪರಿಷತ್, ಬಜರಂಗದಳ, ಬಿಜೆಪಿ ಹಾಗೂ ಎಬಿವಿಪಿ ಆಶ್ರಯದಲ್ಲಿ ಗುರುವಾರ ಪ್ರತಿಭಟನೆ ನಡೆಯಿತು –ಪ್ರಜಾವಾಣಿ ಚಿತ್ರ

ಬೆಂಗಳೂರು: ರಾಜಸ್ಥಾನದ ಉದಯಪುರದಲ್ಲಿ ಟೇಲರ್ ಕನ್ಹಯ್ಯ ಲಾಲ್ ಅವರನ್ನು ಹತ್ಯೆ ಮಾಡಿದವರಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಆಗ್ರಹಿಸಿ ವಿಶ್ವ ಹಿಂದೂ ಪರಿಷತ್, ಶ್ರೀರಾಮಸೇನೆ, ಬಜರಂಗದಳ, ಬಿಜೆಪಿ, ಎಬಿವಿಪಿ ಹಾಗೂ ಕರ್ನಾಟಕ ಟೈಲರಿಂಗ್ ಅಸೋಸಿಯೇಷನ್‌ನಿಂದ ವತಿಯಿಂದ ಗುರುವಾರ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಯಿತು.

ಹತ್ಯೆ ಖಂಡಿಸಿ, ತಪ್ಪಿತಸ್ಥರ ವಿರುದ್ಧ ಮೂರು ತಿಂಗಳೊಳಗೆ ಕ್ರಮಕ್ಕೆ ಒತ್ತಾಯಿಸಿ ಧಾರವಾಡದ ಅಂಜುಮನ್- ಎ- ಇಸ್ಲಾಂ ಹಾಗೂ ಮುಸ್ಲಿಂ ಮುಖಂಡರು ಹೆಚ್ಚುವರಿ ಜಿಲ್ಲಾಧಿಕಾರಿ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಹುಬ್ಬಳ್ಳಿ ನಗರದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ನಡೆದ ಪ್ರತಿಭಟನೆ ನಡೆಸಿದರು.

ಚಿಕ್ಕಮಗಳೂರಿನಲ್ಲಿ ಟೈಲರ್ಸ್ ಅಸೋಸಿಯೇಷನ್ ಹಾಗೂ ಉಡುಪಿಯಲ್ಲಿ ವಿಎಚ್‌ಪಿ ಮತ್ತು ಬಜರಂಗದಳದವರು ಪ್ರತಿಭಟಿಸಿದರು.

ಬೆಳಗಾವಿಯಲ್ಲಿ ನಗರದ ರಾಣಿ ಚನ್ನಮ್ಮ ವೃತ್ತದಲ್ಲಿ ನೂರಾರು ಕಾರ್ಯಕರ್ತರು ಮಾನವ ಸರಪಳಿ ನಿರ್ಮಿಸಿ, ಹಂತಕರ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು. ಉತ್ತರ ಕನ್ನಡದ ದಾಂಡೇಲಿ ಮತ್ತು ಹಳಿಯಾಳದಲ್ಲಿ ವಿಎಚ್‌ಪಿ, ಬಜರಂಗ ದಳ ಹಾಗೂ ಕರ್ನಾಟಕ ಟೈಲರಿಂಗ್ ಅಸೋಸಿಯೇಷನ್ ವತಿಯಿಂದ ಪ್ರತಿಭಟನೆ ನಡೆಯಿತು.

ಬಾಗಲಕೋಟೆ ಟೈಲರ್ಸ್ ಅಸೋಸಿಯೇಷನ್ ಹಾಗೂ ರಬಕವಿ-ಬನಹಟ್ಟಿಯಲ್ಲಿ ಶ್ರೀರಾಮ ಸೇನೆ ವತಿಯಿಂದ ಬಾಗಲಕೋಟೆಯಲ್ಲಿ ಪ್ರತಿಭಟನೆ ನಡೆದಿದೆ. ಗದಗದಲ್ಲಿ ಬಜರಂಗ ದಳದ ಕಾರ್ಯಕರ್ತರು ಮಾನವ ಸರಪಳಿ ನಿರ್ಮಿಸಿ ಆಕ್ರೋಶ ವ್ಯಕ್ತಪಡಿಸಿದರು. ವಿಜಯಪುರ ಜಿಲ್ಲೆಯ ಸಿಂದಗಿ ಹಾಗೂ ಅಲಮೇಲದಲ್ಲಿಯೂ ಪ್ರತಿಭಟನೆಗಳಾಗಿವೆ.

**ಬಂದ್‌ಗೆ ಕರೆ:** ಕನ್ಹಯ್ಯ ಲಾಲ್ ಕೊಲೆ ಖಂಡಿಸಿ ಜುಲೈ 2ರಂದು 'ಹೊಸಪೇಟೆ ಬಂದ್' ಗೆ ಶ್ರೀರಾಮ ಸೇನೆ ತಾಲ್ಲೂಕು ಘಟಕ ಗುರುವಾರ ತೀರ್ಮಾನಿಸಿದೆ.

ಕಲಬುರಗಿ, ಯಾದಗಿರಿ ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಸಹ ಹಿಂದೂಪರ ಸಂಘಟನೆಗಳು ಪ್ರತಿಭಟನೆ ನಡೆಸಿದವು. ಕಲಬುರಗಿಯಲ್ಲಿ, ಹತ್ಯೆ ಆರೋಪಿಗಳ ಪ್ರತಿಕೃತಿಯನ್ನು ನಡು ರಸ್ತೆಯಲ್ಲಿ ಗಲ್ಲಿಗೇರಿಸಿದ ರೀತಿ ನೇತು ಹಾಕಿ, ನಂತರ ದಹಿಸಲಾಯಿತು.

ಬಜರಂಗ ದಳ, ಹಿಂದೂ ರಕ್ಷಕ ಶಿವಾಜಿ ಬ್ರಿಗೇಡ್, ಹಿಂದೂ ಜಾಗೃತಿ ಸೇನೆ ಮತ್ತು ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಸೇಡಂ, ಚಿತ್ತಾಪುರ ಮತ್ತು ಶಹಾಬಾದ್ ತಾಲ್ಲೂಕುಗಳಲ್ಲೂ ಪ್ರತಿಭಟನೆ ನಡೆಯಿತು.

ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ವಿಶ್ವ ಹಿಂದೂ ಪರಿಷತ್, ಬಜರಂಗ ದಳ ಮತ್ತು ಶ್ರೀರಾಮ ಸೇನೆ ಸಂಘಟನೆ ಮತ್ತು ಯಾದಗಿರಿ ಜಿಲ್ಲೆಯ ಸುರಪುರದಲ್ಲಿ ಬಜರಂಗದಳ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು.

'ಮುಸ್ಲಿಂ ಜಿಹಾದಿಗಳು ಹಿಂದೂ ವ್ಯಕ್ತಿಯನ್ನು ಹತ್ಯೆ ಮಾಡಿದ್ದಾರೆ. ನಮ್ಮ ದೇಶದ ಅನ್ನ ತಿಂದು ದ್ರೋಹ ಬಗೆಯುವವರನ್ನು ದೇಶದಿಂದ ಓಡಿಸಬೇಕು' ಎಂದು ವಿಶ್ವ ಹಿಂದೂ ಪರಿಷತ್ ಶಿವಮೊಗ್ಗ ವಿಭಾಗದ ಕಾರ್ಯದರ್ಶಿ ಚಂದ್ರಶೇಖರ್ ಆಗ್ರಹಿಸಿದರು.

ಶಿವಮೊಗ್ಗದ ಮಹಾವೀರ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಪ್ರತಿಭಟನೆ ನಡೆಸಿದರು. ಸೊರಬ, ಶಿಕಾರಿಪುರ, ತೀರ್ಥಹಳ್ಳಿ, ಭದ್ರಾವತಿಯಲ್ಲೂ ಪ್ರತಿಭಟನೆ ನಡೆಸಲಾಗಿದೆ.

ದಾವಣಗೆರೆಲ್ಲಿ ರಾಜ್ಯ ಹೊಲಿಗೆ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ, ಹಿಂದೂ ಜಾಗರಣಾ ವೇದಿಕೆ ಜಿಲ್ಲಾ ಘಟಕದಿಂದ ಪ್ರತಿಭಟನೆ ನಡೆಯಿತು.

> **ಯಾವ ಧರ್ಮವೂ ಕೊಲೆ ಬೆಂಬಲಿಸುವುದಿಲ್ಲ. ಕೊಲೆಗಡುಕರು ಮಸೀದಿ, ದೇವಸ್ಥಾನಕ್ಕೆ ಬರಲುಬಿಡಬಾರದು. ಆಗ ಅಮಾಯಕರ ಪ್ರಾಣ ಹಾನಿ ತಪ್ಪಿಸಬಹುದು**
> **ವಿನಯ್ ಗುರೂಜಿ,** ಗೌರಿಗದ್ದೆ

> **ಉದಯಪುರದಲ್ಲಿ ಟೇಲರ್ ಕನ್ಹಯ್ಯ ಲಾಲ್ ಅವರ ಹತ್ಯೆ ಖಂಡನೀಯ. ಕೊಲೆ ಮಾಡಿದವರಿಗೆ ಮರಣ ದಂಡನೆ ಶಿಕ್ಷೆ ವಿಧಿಸಬೇಕು.**
> **ಸಿದ್ದರಾಮಯ್ಯ,** ವಿರೋಧ ಪಕ್ಷದ ನಾಯಕ

### ಮಳೆಯಲ್ಲಿಯೇ ಪ್ರತಿಭಟನೆ

ಮೈಸೂರು: ಕನ್ಹಯ್ಯಲಾಲ್ ಹತ್ಯೆ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿ ಮೈಸೂರು ಭಾಗದ ಮೈಸೂರು, ಹಾಸನ, ಮಂಡ್ಯ, ಚಾಮರಾಜನಗರ ಹಾಗೂ ಕೊಡಗಿನಲ್ಲಿ ವಿಶ್ವ ಹಿಂದೂ ಪರಿಷತ್, ಬಜರಂಗದಳ, ಬಿಜೆಪಿ, ಹಿಂದೂ ಜಾಗರಣಾ ವೇದಿಕೆ, ಶ್ರೀರಾಮಸೇನೆ ಕಾರ್ಯಕರ್ತರು ಗುರುವಾರ ಪ್ರತಿಭಟಿಸಿದರು.

ಮಡಿಕೇರಿ ನಗರದಲ್ಲಿ ಸುರಿಯುತ್ತಿದ್ದ ಮಳೆಯಲ್ಲೇ ಕೊಡೆಗಳನ್ನು ಹಿಡಿದು ಜನರಲ್ ತಿಮ್ಮಯ್ಯ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿಯವರೆಗೂ ಮೆರವಣಿಗೆ ನಡೆಸಿದರು.

ಅರಸೀಕೆರೆಯಲ್ಲಿ ಮಾನವ ಸರಪಳಿ ನಿರ್ಮಿಸಿ, ರಸ್ತೆ ತಡೆ ನಡೆಸಿದರು. ಮಂಡ್ಯ ನಗರ, ಮದ್ದೂರು ತಾಲ್ಲೂಕಿನ ಬೆಸಗರಹಳ್ಳಿಯಲ್ಲಿ ವರ್ತಕರು ಅಂಗಡಿ, ಮುಂಗಟ್ಟು ಮುಚ್ಚಿ ಪ್ರತಿಭಟನೆಗೆ ಬೆಂಬಲ ಸೂಚಿಸಿದರು.

'ನಾನು ಸತ್ಯ ಹೇಳಲ್ಲ, ಹೇಳಿದವರ ಪರ ನಿಲ್ಲಲ್ಲ, ನಾನು ಬಡವ, ನನ್ನ ಕುಟುಂಬ ನನ್ನನ್ನೇ ನಂಬಿಕೊಂಡಿದೆ, ನನ್ನ ಕತ್ತನ್ನು ಸೀಳಬೇಡಿ' ಎಂಬ ವಾಕ್ಯಗಳುಳ್ಳ ಫಲಕಗಳನ್ನು ನಂಜನಗೂಡು ,ತಿ.ನರಸೀಪುರದ ವಿವಿಧೆಡೆ ಯುವ ಬ್ರಿಗೇಡ್ ಕಾರ್ಯಕರ್ತರು ಅಂಗಡಿಗಳ ಮುಂದೆ ಅಳವಡಿಸಿ ಪ್ರತಿಭಟಿಸಿದರು.



ಡೋಲಿಯಲ್ಲಿ ಗರ್ಭಿಣಿಯನ್ನು ಕರೆದೊಯ್ಯುತ್ತಿರುವುದು

## ಡೋಲಿಯಲ್ಲಿ ಗರ್ಭಿಣಿಯನ್ನು 8 ಕಿ.ಮೀ ಹೊತ್ತೊಯ್ದರು...

ಪ್ರಜಾವಾಣಿ ವಾರ್ತೆ

**ಹನೂರು:** ತಾಲ್ಲೂಕಿನ ಮಹದೇಶ್ವರ ವನ್ಯಧಾಮದೊಳಗಿನ ದೊಡ್ಡಾಣೆ ಗ್ರಾಮದ ಗರ್ಭಿಣಿಯೊಬ್ಬರಿಗೆ ಬುಧವಾರ ರಾತ್ರಿ ಹೆರಿಗೆ ನೋವು ಕಾಣಿಸಿಕೊಂಡ ಬಳಿಕ ತುರ್ತು ವಾಹನ ಸಿಗದೆ ಸಂಬಂಧಿಕರು ಡೋಲಿಯಲ್ಲಿ ಎಂಟು ಕಿ.ಮೀ ದೂರದಲ್ಲಿರುವ ಸುಳ್ವಾಡಿ ಆಸ್ಪತ್ರೆಗೆ ಹೊತ್ತೊಯ್ದರು.

ಈ ಭಾಗದ ಗ್ರಾಮಗಳ ಜನರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಜಿಲ್ಲಾಡಳಿತ ಹಾಗೂ ಅರಣ್ಯ ಇಲಾಖೆಯ ಜಂಟಿ ಸಹಭಾಗಿತ್ವದಲ್ಲಿ 'ಜನ ವನ ಸೇತುವೆ' ಸಾರಿಗೆ ವ್ಯವಸ್ಥೆ ಜಾರಿಗೆ ತರಲಾಗಿದೆ. ಆದರೆ, ಬುಧವಾರ ರಾತ್ರಿ ಈ ನೆರವು ಗ್ರಾಮಸ್ಥರಿಗೆ ಸಿಗಲಿಲ್ಲ. ಸಂಬಂಧಿಕರು ಜನ ವನ ಸೇತುವೆ ವಾಹನದ ಚಾಲಕರಿಗೆ ಕರೆ ಮಾಡಿದ್ದರೂ ಸಂಪರ್ಕ ಸಾಧ್ಯವಾಗಿಲ್ಲ.

'ಗುರುವಾರ ಮುಂಜಾನೆ 5 ಗಂಟೆಗೆ ಗರ್ಭಿಣಿಯನ್ನು ಕರೆತಂದ ಬಳಿಕ ಗಂಡು ಮಗುವಿಗೆ ಜನ್ಮ ನೀಡಿದರು. ತಾಯಿ–ಮಗು ಆರೋಗ್ಯವಾಗಿದ್ದರೂ, ಮಗುವಿನ ತೂಕ ಕಡಿಮೆ ಇರುವುದರಿಂದ ಮೈಸೂರಿಗೆ ಕಳುಹಿಸಲಾಗಿದೆ' ಎಂದು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ರಾಜೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಮಹದೇಶ್ವರ ಬೆಟ್ಟದಲ್ಲಿ ಬುಧವಾರ ವಿದ್ಯುತ್ ಇಲ್ಲದೆ ಚಾಲಕನ ದೂರವಾಣಿ ಸ್ವಿಚ್ ಆಫ್ ಆಗಿತ್ತು. ವಿದ್ಯುತ್ ಬಂದ ಬಳಿಕ ವಾಪಸ್ ಕರೆ ಮಾಡಿದಾಗ ಗರ್ಭಿಣಿಯನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು. ಕೆಲವು ದಿನಗಳ ಹಿಂದೆ ನಮ್ಮ ಸಾರಿಗೆಯಲ್ಲೇ ಗರ್ಭಿಣಿಯೊಬ್ಬರನ್ನು ಕರೆ ತಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಇಂಥ ಸಮಸ್ಯೆ ಉದ್ಭವಿಸದಂತೆ ಎಚ್ಚರಿಕೆ ವಹಿಸಲಾಗುವುದು' ಎಂದು ಮಲೆಮಹದೇಶ್ವರ ವನ್ಯಧಾಮದ ಉಪ ಅರಣ್ಯ ಸಂರಕ್ಷಣಾಧಿಕಾರಿ ವಿ. ಏಡುಕುಂಡಲು ಪ್ರತಿಕ್ರಿಯಿಸಿದರು.

## ಪಿಎಸ್‌ಐ ಅಕ್ರಮ: ಮುಲಾಜಿಲ್ಲದೇ ಕ್ರಮ ಕೈಗೊಳ್ಳಿ; ಹೈಕೋರ್ಟ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಹಗರಣದ ಹಿಂದೆ ಯಾವುದೇ ಸಚಿವ, ಅಧಿಕಾರಿ ಅಥವಾ ಪ್ರಭಾವಿ ವ್ಯಕ್ತಿ ಇದ್ದರೂ ಅವರ ವಿರುದ್ಧ ಮುಲಾಜಿಲ್ಲದೆ ಕ್ರಮ ಕೈಗೊಳ್ಳಬೇಕು' ಎಂದು ಸಿಐಡಿ ಡಿಜಿಪಿ ಪಿ.ಎಸ್. ಸಂಧು ಅವರಿಗೆ ನಿರ್ದೇಶಿಸಿರುವ ಹೈಕೋರ್ಟ್, 'ಈ ಪ್ರಕರಣದ ತನಿಖೆಯ ಮೇಲೆ ಕೋರ್ಟ್ ಸಂಪೂರ್ಣ ನಿಗಾ ವಹಿಸಲಿದೆ' ಎಂದು ತಿಳಿಸಿದೆ.

ಪ್ರಕರಣದ ಬಂಧಿತ ಆರೋಪಿಗಳಾದ ಹಾಸನದ ಸಿ.ಎನ್. ಶಶಿಧರ್ ಮತ್ತು ಮಂಡ್ಯದ ಆರ್.ಶರತ್ ಕುಮಾರ್ ಸಲ್ಲಿಸಿರುವ ಜಾಮೀನು ಅರ್ಜಿಗಳನ್ನು ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆಗೆ ಖುದ್ದು ಹಾಜರಾಗಿದ್ದ ಸಿಐಡಿ ಡಿಜಿಪಿ ಸಂಧು ತನಿಖೆಯ ಪ್ರಗತಿ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಪೀಠಕ್ಕೆ ಸಲ್ಲಿಸಿದರು.

ಈ ವೇಳೆ ಸಂಧು ಅವರನ್ನು ಉದ್ದೇಶಿಸಿ ನ್ಯಾಯಮೂರ್ತಿ ಸಂದೇಶ್, 'ಈ ನೇಮಕಾತಿಯಲ್ಲಿ ಭ್ರಷ್ಟಾಚಾರ ನಡೆದಿರುವುದು ಗಂಭೀರ ವಿಚಾರ. ಪೊಲೀಸರು ಹಾಗೂ ಗಣ್ಯರು ಸೇರಿದಂತೆ ಹಲವು ಪ್ರಭಾವಿ ವ್ಯಕ್ತಿಗಳ ವಿರುದ್ಧ ಆರೋಪಗಳಿವೆ. ಪೊಲೀಸ್ ಅಧಿಕಾರಿಗಳೇ ಮಧ್ಯವರ್ತಿಗಳಾಗಿರುವ ಆರೋಪಗಳಿವೆ. ಆದ್ದರಿಂದ, ಪ್ರತಿಯೊಂದು ಅಂಶದ ಕುರಿತು ಸಮರ್ಪಕ ತನಿಖೆ ನಡೆಸಿ ಸತ್ಯಸಂಗತಿ ಹೊರಗೆ ಎಳೆಯಬೇಕು. ಇಲಾಖೆಯ ಗೌರವ ಉಳಿಸಿಕೊಳ್ಳುವುದು ನಿಮ್ಮ ಕೈಯಲ್ಲಿದೆ' ಎಂದು ಎಚ್ಚರಿಸಿದರು.

ಮುಂದಿನ ವಿಚಾರಣೆಯನ್ನು ಜುಲೈ 7ಕ್ಕೆ ನಿಗದಿಪಡಿಸಿದ ನ್ಯಾಯಪೀಠ, ಅಂದು ತನಿಖೆಯ ಪ್ರಗತಿ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಸೂಚಿಸಿದೆ.

ವಿಜಯನಗರ, ಗದಗದಲ್ಲೂ ಬಿರುಸಿನ ಮಳೆ: ರೈತರಲ್ಲಿ ಖುಷಿ

# ಹೆದ್ದಾರಿ ಮೇಲೆ ಗುಡ್ಡ ಕುಸಿತ

ಪ್ರಜಾವಾಣಿ ವಾರ್ತೆ

**ಕಾರವಾರ:** ಉತ್ತರ ಕನ್ನಡದ ಎಲ್ಲ ಐದು ಕರಾವಳಿ ತಾಲ್ಲೂಕುಗಳಲ್ಲಿ ಗುರುವಾರ ದಿನವಿಡೀ ವ್ಯಾಪಕ ಮಳೆಯಾಗಿದೆ. ತಡರಾತ್ರಿ ಶುರುವಾರ ವರ್ಷಧಾರೆ ಸಂಜೆಯವರೆಗೂ ಮುಂದುವರಿದಿತ್ತು. ಬಹುತೇಕ ಸಮಯ ಜಿಟಿಜಿಟಿಯಾಗಿ, ಆಗಾಗ ಜೋರಾಗಿ ಸುರಿಯಿತು.

ಅಂಕೋಲಾ–11.6 ಸೆ.ಮೀ, ಹೊನ್ನಾವರ–11.3 ಸೆ.ಮೀ ಹಾಗೂ ಕಾರವಾರದಲ್ಲಿ 9.1 ಸೆ.ಮೀ ಮಳೆ ದಾಖಲಾಗಿದೆ.

ಭಟ್ಕಳ ತಾಲ್ಲೂಕಿನ ಶಿರಾಲಿಯಲ್ಲಿ ರಾಷ್ಟ್ರೀಯ ಹೆದ್ದಾರಿ 66ರ ಮೇಲೆ ನೀರು ನಿಂತು ವಾಹನಗಳ ಸಂಚಾರಕ್ಕೆ ಅಡಚಣೆಯಾಯಿತು. ಚತುಷ್ಪಥ ಕಾಮಗಾರಿಯ ವೇಳೆ ಚರಂಡಿಗಳನ್ನು ಮುಚ್ಚಿದ್ದರಿಂದ ಸಮಸ್ಯೆಯಾಗಿದೆ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ತಾಲ್ಲೂಕಿನಲ್ಲಿ ಮೂರು ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ಹೊನ್ನಾವರ ತಾಲ್ಲೂಕಿನ ಕರ್ಕಿ, ಚಿಕ್ಕನಕೋಡ ಹಾಗೂ ಭಾಸ್ಕೇರಿ ಗ್ರಾಮಗಳಲ್ಲಿ ತಲಾ ಒಂದು ಮನೆಗಳ ಮೇಲೆ ಮರಗಳು ಬಿದ್ದಿದ್ದು, ಭಾಗಶಃ ಹಾನಿಯಾಗಿದೆ. ಯಾವುದೇ ಜೀವಾಪಾಯವಾಗಿಲ್ಲ. ರಾಷ್ಟ್ರೀಯ ಹೆದ್ದಾರಿ 69ರಲ್ಲಿ ಹೊನ್ನಾವರ– ಗೇರುಸೊಪ್ಪ ನಡುವೆ ಖರ್ವಾ ಕ್ರಾಸ್ ಹತ್ತಿರ ಗುಡ್ಡ ಕುಸಿತವಾಗಿದೆ. ಮಣ್ಣು ಹೆದ್ದಾರಿಯ ಒಂದು ಭಾಗದಲ್ಲಿದ್ದು, ವಾಹನ ಸಂಚಾರಕ್ಕೆ ಅಷ್ಟಾಗಿ ಅಡಚಣೆಯಾಗಿಲ್ಲ.

ಗೋಕರ್ಣದಲ್ಲಿ ಮಹಾಬಲೇಶ್ವರ ದೇವರ ಗರ್ಭಗುಡಿಯಲ್ಲಿಯೂ ಸ್ವಲ್ಪ ಹೊತ್ತು ನೀರು ನಿಂತಿತ್ತು. ಹಾಗಾಗಿ ಮಧ್ಯಾಹ್ನದ ಮಹಾಪೂಜೆ ತಡವಾಗಿ ನೆರವೇರಿತು. ರಥಬೀದಿಯಲ್ಲಿ ಸುಮಾರು ಎರಡು ಅಡಿಗಳಷ್ಟು ನೀರು ಹರಿದು ಕೆಲವು ಮನೆಗಳಿಗೆ ಹೊಕ್ಕಿತ್ತು.

ಪುರಾಣ ಪ್ರಸಿದ್ಧ ಮಾಣೇಶ್ವರ ದೇವಸ್ಥಾನದ ಕೆಳಗೆ ಬ್ರಹ್ಮ ತೀರ್ಥದ ಗೋಡೆ ಕುಸಿದಿದೆ.

**ಹೊಸಪೇಟೆಯಲ್ಲಿ ಬಿರುಸಿನ ಮಳೆ:** ವಿಜಯನಗರ ಜಿಲ್ಲೆಯ ಹೊಸಪೇಟೆ ಯಲ್ಲಿ ಬಿರುಸಿನ ಮಳೆಯಾಗಿದೆ. ಹೊಸಪೇಟೆ ನಗರ ಸೇರಿದಂತೆ ತಾಲ್ಲೂಕಿನ ಹಂಪಿ, ಕಮಲಾಪುರ, ಹೊಸೂರು, ಸಂಕ್ಲಾಪುರ, ಇಂಗಳಗಿ ಯಲ್ಲಿ ವರ್ಷಧಾರೆಯಾಗಿದೆ. ಒಂದು ತಿಂಗಳಿಂದ ಮಳೆಯಾಗಿರಲಿಲ್ಲ. ಹೀಗಾಗಿ ಬಿತ್ತನೆ ಸ್ಥಗಿತಗೊಂಡಿತ್ತು. ಗುರುವಾರ ಸುರಿದ ಮಳೆಯಿಂದ ರೈತರು ಖುಷಿಗೊಂಡಿದ್ದಾರೆ.

ಗದಗ ಜಿಲ್ಲೆಯ ರೋಣ ಮತ್ತು ನರಗುಂದ ತಾಲ್ಲೂಕು ಕೇಂದ್ರದಲ್ಲಿ ಅರ್ಧ ತಾಸಿಗೂ ಹೆಚ್ಚು ಮಳೆ ಸುರಿಯಿತು.

ಕೊಪ್ಪಳ ನಗರ ಸೇರಿದಂತೆ ಗಂಗಾವತಿ ತಾಲ್ಲೂಕಿನ ಆನೆಗೊಂದಿ, ಚಿಕ್ಕರಾಂಪುರ, ಹನುಮನಹಳ್ಳಿ, ಸಾಣಾಪುರ ಗ್ರಾಮದಲ್ಲಿ ಮೂರು ಗಂಟೆ ಸಾಧಾರಣ ಮಳೆಯಾಯಿತು. ಯಾದಗಿರಿ ನಗರದಲ್ಲೂ ಮಳೆ ಸುರಿಯಿತು.



ಹೊನ್ನಾವರ– ಗೇರುಸೊಪ್ಪ ನಡುವೆ ಖರ್ವಾ ಕ್ರಾಸ್ ಹತ್ತಿರ ರಾಷ್ಟ್ರೀಯ ಹೆದ್ದಾರಿ 69ರ ಮೇಲೆ ಗುರುವಾರ ಗುಡ್ಡದ ಮಣ್ಣು ಕುಸಿದಿದ್ದು, ತೆರವು ಕಾರ್ಯಾಚರಣೆ ಕೈಗೊಳ್ಳಲಾಯಿತು

## ಕೊಡಗು; ತುಂಬಿ ಹರಿಯುತ್ತಿರುವ ಹಳ್ಳ, ತೊರೆಗಳು

**ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ಗುರುವಾರ ಧಾರಾಕಾರ ಮಳೆ ಸುರಿದಿದ್ದು, ಕಾವೇರಿ ಸೇರಿದಂತೆ ಹಲವು ನದಿಗಳಿಗೆ ಹೆಚ್ಚಿನ ನೀರು ಹರಿದಿದೆ. ನದಿ, ತೊರೆ, ತೋಡುಗಳು ತುಂಬಿ ಹರಿಯುತ್ತಿವೆ. ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ, ಭೇತ್ರಿಯಲ್ಲಿ ನೀರಿನ ಮಟ್ಟ ಹೆಚ್ಚಿದೆ.

ಹಾರಂಗಿ ಜಲಾಶಯಕ್ಕೆ 1,743 ಕ್ಯುಸೆಕ್‌ಗೆ ನೀರಿನ ಒಳಹರಿವು ಹೆಚ್ಚಾಗಿದೆ. 2,859 ಗರಿಷ್ಠ ಅಡಿಯ ಜಲಾಶಯದಲ್ಲಿ ಈಗಾಗಲೇ 2,854 ಅಡಿಗಳಷ್ಟು ನೀರು ತುಂಬಿದೆ.

ಶನಿವಾರಸಂತೆ ಸಮೀಪದ ದುಂಡಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬತ್ತಿದ್ದ ಕಾಜೂರು ಹೊಳೆ, ವಿರಾಜಪೇಟೆಯ ಕದನೂರು ಹೊಳೆ ತುಂಬಿದೆ. ಸೋಮವಾರಪೇಟೆ ಸಮೀಪದ ಮಲ್ಲಹಳ್ಳಿ ಜಲಪಾತಕ್ಕೂ ಹೆಚ್ಚು ನೀರು ಹರಿದು ಬರುತ್ತಿದೆ. ಎಲ್ಲೆಡೆ ಕೃಷಿ ಚಟುವಟಿಕೆಗಳೂ ಬಿರುಸುಗೊಂಡಿವೆ.

'ಮುಂದಿನ 24 ಗಂಟೆಗಳ ಅವಧಿಯಲ್ಲಿ ಸಾಮಾನ್ಯಕ್ಕಿಂತಲೂ ಅಧಿಕ ಮಳೆಯಾಗುವ ಸಾಧ್ಯತೆ ಇದೆ' ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ಉಸ್ತುವಾರಿ ಕೇಂದ್ರ ತಿಳಿಸಿದೆ.

## 'ಬಿಎಸ್‌ವೈ ನಡೆ ಆಧರಿಸಿ ಕಾಂಗ್ರೆಸ್ ಭವಿಷ್ಯ'

**ಬೆಂಗಳೂರು:** ಕಾಂಗ್ರೆಸ್ ನಾಯಕರ ಪರಿಸ್ಥಿತಿಯು ಬಿ.ಎಸ್. ಯಡಿಯೂರಪ್ಪ ಅವರ ಮುಂದಿನ ನಡೆ ಮೇಲೆ ಅವಲಂಬಿತವಾಗಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಗುರುವಾರ ಮಾತನಾಡಿದ ಅವರು, ಯಡಿಯೂರಪ್ಪ ಮುಂದೆ ಏನು ಮಾಡುತ್ತಾರೆ ಎಂಬ ಅಂದಾಜಿನ ಮೇಲೆ ಕಾಂಗ್ರೆಸ್ ನಾಯಕರು ನಡೆದುಕೊಳ್ಳುತ್ತಿದ್ದಾರೆ. ಈ ಹಿಂದೆ ಯಡಿಯೂರಪ್ಪ ಬೇರೆ ಪಕ್ಷ ಕಟ್ಟಿದ್ದರು. ಆ ದಿನದ ಬಳಿಕ ಏನೇನಾಯಿತು ಎಂಬುದನ್ನು ಪರಿಗಣಿಸಿ ಕಾಂಗ್ರೆಸ್ ನಾಯಕರು ಲೆಕ್ಕಾಚಾರ ಹಾಕಿದ್ದಾರೆ. ಆ ಪಕ್ಷದ ಆಂತರಿಕ ಪರಿಸ್ಥಿತಿ ಏನೆಂಬುದು ಗೊತ್ತಿದೆ ಎಂದರು.

'ಅಧಿಕಾರ ಹಿಡಿಯಬೇಕೆಂಬ ತವಕದಲ್ಲಿರುವ ಬಿಜೆಪಿ, ಕಾಂಗ್ರೆಸ್ ಪಕ್ಷಗಳು ದೊಡ್ಡ ದೊಡ್ಡ ಸಮೀಕ್ಷೆ ನಡೆಸುವ ಕಂಪನಿಗಳ ಜತೆ ಸೇರಿಕೊಂಡು, ಜನಾಭಿಪ್ರಾಯ ತಿರುಚುವ ಕೆಲಸ ಮಾಡುತ್ತಿವೆ. ರಾಷ್ಟ್ರೀಯ ಪಕ್ಷಗಳ ಪರಿಸ್ಥಿತಿ ಬಗ್ಗೆ ಮಾಧ್ಯಮಗಳ ವರದಿಗಳೇ ಎಲ್ಲವನ್ನೂ ಹೇಳುತ್ತಿವೆ. ನಮಗೆ ಯಾವುದೇ ಆತಂಕ ಇಲ್ಲ' ಎಂದರು.

'ಜೆಡಿಎಸ್‌ನ ಕೆಲವು ಶಾಸಕರು ಸಿದ್ದರಾಮಯ್ಯ ಅವರ ಸಂಪರ್ಕದಲ್ಲಿ ಇದ್ದಾರೆ ಎಂಬ ಚರ್ಚೆ ಇದೆಯಲ್ಲ' ಎಂಬ ಪ್ರಶ್ನೆಗೆ, ಕೆಲವರು ಅವರ ವಿಶ್ವಾಸದಲ್ಲಿ ಇರಬಹುದು. ಆದರೆ ಅವರಲ್ಲೇ ಗೊಂದಲ ಇದೆ. ಆಷಾಢ ಮಾಸದ ನಂತರ ಅದು ಹೊರ ಬರುತ್ತದೆ ಎಂದರು.

## ಬೆಂಕಿ ಹಚ್ಚಿದ ಪ್ರಕರಣ: ಇನ್ನಿಬ್ಬರು ಸಾವು

**ನಾರಾಯಣಪುರ (ಯಾದಗಿರಿ ಜಿಲ್ಲೆ):** ಕೌಟುಂಬಿಕ ಕಲಹದಿಂದ ಬೇಸತ್ತ ವ್ಯಕ್ತಿಯೊಬ್ಬ ಪತ್ನಿಯ ನಾಲ್ವರು ಸಂಬಂಧಿಕರನ್ನು ಮನೆಯಲ್ಲಿ ಕೂಡಿ ಹಾಕಿ, ಬೆಂಕಿ ಹಚ್ಚಿದ ಪ್ರಕರಣದಲ್ಲಿ ಗಾಯಗೊಂಡಿದ್ದ ಇನ್ನಿಬ್ಬರು ಗುರುವಾರ ಮೃತಪಟ್ಟಿದ್ದಾರೆ.

'ವಿಜಯಪುರ ಜಿಲ್ಲೆಯ ಮುದ್ದೇಬಿಹಾಳದ ಸಿದ್ರಾಮಪ್ಪ ಮುರಾಳ (65) ಮತ್ತು ಮುತ್ತಪ್ಪ ಮುರಾಳ (40) ಮೃತರು. ಇಬ್ಬರನ್ನೂ ರಾಯಚೂರಿನ ರಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ.







## '2ಎ ಮೀಸಲಾತಿ; 2 ತಿಂಗಳ ಗಡುವು'

**ಹುಬ್ಬಳ್ಳಿ:** 'ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಕಲ್ಪಿಸಲು ಸರ್ಕಾರಕ್ಕೆ ಎರಡು ತಿಂಗಳ ಗಡುವು ನೀಡಲಾಗಿದೆ. ಇದು ಕೊನೆಯ ಎಚ್ಚರಿಕೆ' ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಇತ್ತೀಚೆಗೆ ನಡೆದ ಸಂಧಾನ ಸಭೆಯಲ್ಲಿ ಶೀಘ್ರ ಮೀಸಲಾತಿ ನೀಡುವ ಭರವಸೆ ನೀಡಿದ್ದರಿಂದ ಆಗಸ್ಟ್ 27ರವರೆಗೆ ಗಡುವು ನೀಡಲಾಗಿದೆ. ಅಲ್ಲಿಯವರೆಗೆ ಸಮಾಜವನ್ನು ಸಂಘಟಿಸಲಾಗುವುದು' ಎಂದರು.

ಅನುಭವ ಮಂಟಪ ಮೂಲದ ಕುರಿತು ಉಂಟಾಗಿರುವ ವಿವಾದವನ್ನು ಬಗೆಹರಿಸುವ ನಿಟ್ಟಿನಲ್ಲಿ ಸರ್ಕಾರ ಅಧ್ಯಯನ ಸಮಿತಿ ರಚಿಸಬೇಕು ಎಂದರು.





### ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ ಬೀರದು: ಅಧಿಕಾರಿಗಳ ಅಭಿಮತ

# ‘ಜಿಎಸ್‌ಟಿ ಪರಿಹಾರ ನೀಡಿಕೆ ಅನಿಶ್ಚಿತ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯಗಳಿಗೆ ಸರಕು ಮತ್ತು ಸೇವೆಗಳ ತೆರಿಗೆ (ಜಿಎಸ್‌ಟಿ) ‘ಪರಿಹಾರ’ ಯೋಜನೆ ಮುಂದುವರಿಸುವ ಬಗ್ಗೆ ಜಿಎಸ್‌ಟಿ ಮಂಡಳಿ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ. ಒಂದು ವೇಳೆ ಪರಿಹಾರ ಯೋಜನೆಯನ್ನು ನಿಲ್ಲಿಸಿದರೂ ಅದರಿಂದ ಮುಂಬರುವ ವರ್ಷಗಳಲ್ಲಿ ರಾಜ್ಯದ ಆರ್ಥಿಕ ಸ್ಥಿತಿಯ ಮೇಲೆ ಹೆಚ್ಚಿನ ಪರಿಣಾಮವಾಗುವುದಿಲ್ಲ ಎಂದು ಹಣಕಾಸು ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

2022–23ನೇ ಸಾಲಿನ ಬಜೆಟ್‌ನಲ್ಲಿ ಜಿಎಸ್‌ಟಿ ಪರಿಹಾರ ₹5,000 ಕೋಟಿ ಎಂದು ಲೆಕ್ಕ ಹಾಕಲಾಗಿತ್ತು. ಈ ಹಿಂದಿನ ಸಾಲುಗಳಲ್ಲಿ ಅಂದರೆ 2021–22 ರಲ್ಲಿ ₹12,708 ಕೋಟಿ ಮತ್ತು 2020–21ರಲ್ಲಿ ₹13,789 ಕೋಟಿ ಪರಿಹಾರವೆಂದು ಬಜೆಟ್‌ನಲ್ಲಿ ಅಂದಾಜು ಮಾಡಲಾಗಿತ್ತು.

ಪರಿಹಾರ ಮೊತ್ತ ನೀಡುವುದನ್ನು ನಿಲ್ಲಿಸುವುದರಿಂದ ಆಗುವ ಕೊರತೆ ಸರಿದೂಗಿಸಲು ಇತರ ಮೂಲಗಳಿಂದ ಆದಾಯವನ್ನು ಹೆಚ್ಚಿಸಲು ಬಜೆಟ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ. ಇದಕ್ಕಾಗಿ ಪೂರ್ವ ಸಿದ್ಧತೆಯನ್ನೂ ಮಾಡಿಕೊಳ್ಳಲಾಗಿದೆ. ವಿಶೇಷವಾಗಿ ವಾಣಿಜ್ಯ ತೆರಿಗೆ ಮತ್ತು ಅಬಕಾರಿ ಬಾಬ್ತಿನಲ್ಲಿ ಸರಿದೂಗಿಸಲು ಹೆಚ್ಚಿನ ಗುರಿ ನಿಗದಿ ಮಾಡಲಾಗಿದೆ ಎಂದು ಹಣಕಾಸು ಇಲಾಖೆ ಮೂಲಗಳು ಹೇಳಿವೆ.

2017ರ ಜುಲೈ 1 ರಂದು ರಾಜ್ಯಗಳಿಗೆ ಐದು ವರ್ಷಗಳ ಅವಧಿಗೆ ಜಿಎಸ್‌ಟಿ ಪರಿಹಾರ ನೀಡುವುದಾಗಿ ಕೇಂದ್ರ ಭರವಸೆ ನೀಡಿತ್ತು. ಹೊಸ ತೆರಿಗೆ ವ್ಯವಸ್ಥೆ ಜಾರಿಯಾದ ಬಳಿಕ ರಾಜ್ಯಗಳಿಗೆ ಆಗುವ ನಷ್ಟವನ್ನು ಭರಿಸಲು ಈ ಯೋಜನೆ ಜಾರಿ ಮಾಡಲಾಗಿತ್ತು.

**ಆಗಸ್ಟ್‌ನಲ್ಲಿ ನಿರ್ಧಾರ:** ಜಿಎಸ್‌ಟಿ ಪರಿಹಾರವನ್ನು ಮುಂದುವರಿಸಬೇಕು ಎಂದು ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಬಹುತೇಕ ಎಲ್ಲ ರಾಜ್ಯಗಳು ಒತ್ತಡ ಹೇರಿವೆ. ಈ ಬಗ್ಗೆ ಆಗಸ್ಟ್‌ನಲ್ಲಿ ಅಂತಿಮ ನಿರ್ಣಯ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಿಳಿಸಿದರು.

## ರಾಜ್ಯಕ್ಕೆ ವರ್ಷಕ್ಕೆ ₹20 ಸಾವಿರ ಕೋಟಿ ನಷ್ಟ: ಸಿದ್ದರಾಮಯ್ಯ

**ನವದೆಹಲಿ:** ‘ರಾಜ್ಯಗಳಿಗೆ ನೀಡುವ ಜಿಎಸ್‌ಟಿ ಪರಿಹಾರವನ್ನು ಕನಿಷ್ಠ ಐದು ವರ್ಷ ವಿಸ್ತರಿಸಬೇಕು. ಇಲ್ಲದಿದ್ದರೆ ಕರ್ನಾಟಕ ರಾಜ್ಯಕ್ಕೆ ವರ್ಷಕ್ಕೆ ₹20 ಸಾವಿರ ಕೋಟಿ ನಷ್ಟ ಆಗಲಿದೆ’ ಎಂದು ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಜಿಎಸ್‌ಟಿ ಜಾರಿಯಾದ ಮೇಲೆ ರಾಜ್ಯಗಳಿಗೆ ಶೇ 14ರಷ್ಟು ನಷ್ಟ ಪರಿಹಾರ ನೀಡುವ ವ್ಯವಸ್ಥೆ 2017ರ ಜುಲೈನಲ್ಲಿ ಆರಂಭವಾಯಿತು. ಈ ವ್ಯವಸ್ಥೆ ಗುರುವಾರ ಕೊನೆಗೊಂಡಿದೆ. ಈ ವ್ಯವಸ್ಥೆ ಮುಂದುವರಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜಿಎಸ್‌ಟಿ ಸಭೆಯಲ್ಲಿ ಒತ್ತಡ ಹೇರಿಲ್ಲ. ಇದು ರಾಜ್ಯಕ್ಕೆ ಬೊಮ್ಮಾಯಿ ಮಾಡಿರುವ ಅನ್ಯಾಯ’ ಎಂದು ಟೀಕಿಸಿದರು.

‘ಜಿಎಸ್‌ಟಿ ಜಾರಿಯ ಮೊದಲು ಶೇ 14 ಇದ್ದ ತೆರಿಗೆ ಬೆಳವಣಿಗೆ ದರ ಈಗ ಶೇ 6ಕ್ಕೆ ಇಳಿದಿದೆ. ಇದಕ್ಕೆ ಕೋವಿಡ್ ನೆಪ ಹೇಳುತ್ತಿದ್ದಾರೆ. ರಾಜ್ಯಗಳಿಗೆ ತೆರಿಗೆ ಸಂಗ್ರಹ ಕಡಿಮೆ ಆಗಿರುವುದರಿಂದ ಈ ನಷ್ಟ ತುಂಬಿಕೊಡಬೇಕಾದವರು ಯಾರು? ಕೇಂದ್ರ ಸರ್ಕಾರ ಅಲ್ಲವೇ?’ ಎಂದು ಅವರು ಪ್ರಶ್ನಿಸಿದರು.

‘ಕೆಲವು ವಸ್ತುಗಳ ಮೇಲಿನ ಜಿಎಸ್‌ಟಿ ತೆರಿಗೆಯನ್ನು ಭಾರಿ ಹೆಚ್ಚಳ ಮಾಡಲಾಗಿದೆ. ರೈತರು ಹಾಗೂ ಜನಸಾಮಾನ್ಯರು ಹೊಲ ಗದ್ದೆಗಳಲ್ಲಿ ಬಳಸುವ ಸಬ್‌ಮರ್ಸಿಬಲ್ ಪಂಪ್‌ಗಳ ಮೇಲೆ ಶೇ 12 ಇದ್ದ ತೆರಿಗೆಯನ್ನು ಶೇ 15ಕ್ಕೆ ಏರಿಸಿದ್ದಾರೆ. ಹಣ್ಣು, ತರಕಾರಿ ಮತ್ತು ಮೊಟ್ಟೆಗಳನ್ನು ಪ್ರತ್ಯೇಕಗೊಳಿಸುವ, ಗ್ರೇಡಿಂಗ್ ಹಾಗೂ ಹಾಲು ಕರೆಯುವ ಯಂತ್ರಗಳ ಮೇಲೆ ಇದ್ದ ತೆರಿಗೆಯನ್ನು ಶೇ 12ರಿಂದ 18ಕ್ಕೆ ಏರಿಸಿದ್ದಾರೆ. ಬರೆಯುವ ಮತ್ತು ಮುದ್ರಿಸುವ ಇಂಕ್‌ಗಳ ಮೇಲಿನ ತೆರಿಗೆಯನ್ನು ಶೇ 12ರಿಂದ 18ಕ್ಕೆ ಹೆಚ್ಚಿಸಲಾಗಿದೆ. ಇದರಿಂದ ಪತ್ರಿಕೆಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಹೊರೆಯಾಗುತ್ತದೆ. ಈ ರೀತಿ ಅವೈಜ್ಞಾನಿಕವಾಗಿ ಯಾರಾದರೂ ಬೆಲೆ ಏರಿಕೆ ಮಾಡುತ್ತಾರಾ. ಇದು ನರೇಂದ್ರ ಮೋದಿ ಸರ್ಕಾರ ಮಾಡಿರುವ ಘೋರ ಅಪರಾಧ’ ಎಂದು ವಾಗ್ದಾಳಿ ನಡೆಸಿದರು.

# ಠಾಕ್ರೆ ಗರಡಿಯಿಂದ ಸಿ.ಎಂ ಹುದ್ದೆಗೆ

ಪ್ರಜಾವಾಣಿ ವಾರ್ತೆ

**ಮುಂಬೈ:** ಮಹಾರಾಷ್ಟ್ರದ ಠಾಣೆಯಲ್ಲಿ ಆಟೋರಿಕ್ಷಾ ಓಡಿಸುತ್ತಿದ್ದ ದಿನಗಳ ಹಾಗೂ ಇಂದು ಮುಖ್ಯಮಂತ್ರಿ ಗಾದಿಗೇರಿದ ಹಾದಿಯನ್ನು ಏಕನಾಥ ಶಿಂಧೆ ಅವರು ಹಂತ ಹಂತವಾಗಿ ನಡೆದು ಬಂದಿದ್ದಾರೆ. ಶಿವಸೇನಾ ಸಂಸ್ಥಾಪಕ ಬಾಳಾ ಠಾಕ್ರೆ ಹಾಗೂ ಠಾಣೆ ಭಾಗದಲ್ಲಿ ಪಕ್ಷದ ಅತ್ಯಂತ ಪ್ರಭಾವಿ ನಾಯಕರಾಗಿದ್ದ ಆನಂದ್ ದಿಘೆ ಅವರ ಗಾಢ ಪ್ರಭಾವಕ್ಕೆ ಒಳಗಾಗಿ ಪಕ್ಷ ಸೇರಿದ್ದ ಶಿಂಧೆ ಅವರು ಠಾಕ್ರೆ ಅವರ ಪುತ್ರ ಉದ್ಧವ್ ವಿರುದ್ಧವೇ ದಂಗೆ ಎದ್ದು, ರಾಜ್ಯದ ಚುಕ್ಕಾಣಿ ಹಿಡಿದಿದ್ದಾರೆ.


ಏಕನಾಥ ಶಿಂಧೆ

ದಿಘೆ ಅವರ ಜೀವನ ಕುರಿತ ‘ಧರ್ಮವೀರ್–ಮುಕ್ಕಂ ಪೋಸ್ಟ್ ಠಾಣೆ’ ಹೆಸರಿನ ಚಿತ್ರವು ಬಿಡುಗಡೆಯಾಗಿ 45 ದಿನಗಳು ಕಳೆಯುವಷ್ಟರಲ್ಲಿ ಶಿಂಧೆ ಅವರ ಅಭಿಲಾಷೆ ಈಡೇರಿದೆ ಎಂಬುದು ಸ್ಪಷ್ಟವಾಗಿದೆ. ‘ದಿಘೆ ಅವರು ಠಾಣೆಯ ಬಾಳಾ ಠಾಕ್ರೆ’ ಎಂದೇ ಹೆಸರಾಗಿದ್ದವರು. ಪಕ್ಕದ ಪಾಲ್ಘರ್, ರಾಯಗಡ ಜಿಲ್ಲೆಗಳಲ್ಲೂ ಅವರ ಪ್ರಭಾವಳಿ ಇತ್ತು. ಗಡ್ಡಧಾರಿಯಾಗಿ, ಹಣೆಗೆ ತಿಲಕ ಇಟ್ಟು, ಬಿಳಿ ಬಣ್ಣದ ಉಡುಪು ಧರಿಸುವ ಶಿಂಧೆ ಅವರು ದಿಘೆ ಅವರಂತೆಯೇ ಕಾಣಿಸುತ್ತಾರೆ.

ಸತಾರಾ ಜಿಲ್ಲೆಯ ಮರಾಠಿ ಮನೆತನಕ್ಕೆ ಸೇರಿದ ಶಿಂಧೆ 1964ರ ಫೆ. 9ರಂದು ಜನಿಸಿದರು. ಪದವಿ ಪಡೆಯುವ ಮುನ್ನವೇ ಶಿಕ್ಷಣಕ್ಕೆ ವಿದಾಯ ಹೇಳಿದರು. ಮರಾಠಿ ಅಸ್ಮಿತೆ ಮತ್ತು ಹಿಂದುತ್ವದ ಉದ್ದೇಶ ಹೊಂದಿದ್ದ ಶಿವಸೇನಾವನ್ನು 1980ರಲ್ಲಿ ಸೇರಿದರು. ಮುಂಬೈನ ಕಿಸಾನ್ ನಗರದ ಶಾಖಾ ಪ್ರಮುಖ ಹುದ್ದೆಗೆ ಶಿಂಧೆ ನೇಮಕವಾದರು. ಹಲವು ಚಳವಳಿಗಳಲ್ಲಿ ಮುಂಚೂಣಿಯಲ್ಲಿ ಕಾಣಿಸಿಕೊಂಡರು.

1985ರಲ್ಲಿ ಮಹಾರಾಷ್ಟ್ರ–ಕರ್ನಾಟಕ ಗಡಿ ಹೋರಾಟದಲ್ಲಿ ಭಾಗಿಯಾಗಿದ್ದರು. 1997ರಲ್ಲಿ ಠಾಣೆ ಪುರಸಭೆಗೆ ಚುನಾಯಿತರಾದರು. ಠಾಣೆಯ ಜಿಲ್ಲೆಯ ಕೋಪರಿ–ಪಾಚಪಾಖಾಡಿ ಕ್ಷೇತ್ರದಿಂದ ನಾಲ್ಕು ಬಾರಿ ಶಾಸಕರಾಗಿ ಆರಿಸಿಬಂದರು. ಇವರ ಪುತ್ರ ಹಾಗೂ ವೈದ್ಯ ಶ್ರೀಕಾಂತ್ ಶಿಂಧೆ ಅವರು ಕಲ್ಯಾಣ್ ಕ್ಷೇತ್ರದಿಂದ ಎರಡು ಬಾರಿ ಸಂಸದರಾಗಿ ಚುನಾಯಿತರಾಗಿದ್ದಾರೆ.

2014ರಲ್ಲಿ ಕೆಲವು ಸಮಯ ವಿರೋಧ ಪಕ್ಷದ ನಾಯಕರಾಗಿದ್ದ ಶಿಂಧೆ, ಸರ್ಕಾರ ರಚನೆಯಾದಾಗ ಲೋಕೋಪಯೋಗಿ ಇಲಾಖೆಯ ಸಚಿವರಾಗಿ ನೇಮಕವಾದರು. ಸಾರ್ವಜನಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯನ್ನೂ ನೋಡಿಕೊಳ್ಳುತ್ತಿದ್ದರು.

ಶಿಂಧೆ ಅವರು ಫಡಣವೀಸ್ ಅವರ ಕನಸಿನ ಯೋಜನೆಯಾದ ಸಮೃದ್ಧಿ ಕಾರಿಡಾರ್ (ಮುಂಬೈ–ನಾಗ್ಪುರ ಸೂಪರ್ ಕಮ್ಯುನಿಕೇಷನ್ ಹೈವೆ) ಕಾರ್ಯಗತಗೊಳಿಸುತ್ತಿದ್ದರು. ಮುಂಬೈ–ಪುಣೆ ಹೆದ್ದಾರಿ ವಿಸ್ತರಣೆ ಕಾರ್ಯವನ್ನೂ ಮೇಲ್ವಿಚಾರಣೆ ಮಾಡುತ್ತಿದ್ದರು. ನಗರಾಭಿವೃದ್ಧಿ ಸಚಿವರಾಗಿ ನೇಮಕವಾದ ಬಳಿಕ ಬಾಕಿಯಿದ್ದ ಹಲವು ಯೋಜನೆಗಳಿಗೆ ಚುರುಕು ಮುಟ್ಟಿಸಿದರು.

## 40 ದಿನ ಬಳ್ಳಾರಿ ಜೈಲಿನಲ್ಲಿದ್ದ ಶಿಂಧೆ

ಪ್ರಜಾವಾಣಿ ವಾರ್ತೆ

**ಬೆಳಗಾವಿ:** ಮಹಾರಾಷ್ಟ್ರದ ನೂತನ ಮುಖ್ಯಮಂತ್ರಿ ಏಕನಾಥ ಶಿಂಧೆ ಅವರ ರಾಜಕೀಯ ಜೀವನಕ್ಕೆ ಮೆಟ್ಟಿಲಾಗಿದ್ದೇ ಬೆಳಗಾವಿ..!

ಕರ್ನಾಟಕ– ಮಹಾರಾಷ್ಟ್ರ ಗಡಿ ವಿವಾದಕ್ಕೆ ಸಂಬಂಧಿಸಿದಂತೆ 1986ರಲ್ಲಿ ಬೆಳಗಾವಿ ನಗರದಲ್ಲಿ ನಡೆದ ‘ಮಹಾದಂಗೆ’ಯಲ್ಲಿ ಪಾಲ್ಗೊಂಡಿದ್ದೇ ಶಿಂಧೆ ರಾಜಕೀಯ ನಾಯಕರಾಗಿ ಬೆಳೆಯಲು ಕಾರಣವಾಯಿತು. ಗಡಿ ಸಂಘರ್ಷದಲ್ಲಿ ಪಾಲ್ಗೊಂಡಿದ್ದ ಅವರನ್ನು 40 ದಿನಗಳವರೆಗೆ ಬೆಳಗಾವಿ ಹಾಗೂ ಬಳ್ಳಾರಿ ಜೈಲಿನಲ್ಲಿ ಇಡಲಾಗಿತ್ತು. ಆ ಹೋರಾಟದಲ್ಲಿ 9 ಮರಾಠಿಗರು ಪೊಲೀಸರ ಗುಂಡಿಗೆ ಬಲಿಯಾಗಿದ್ದರು.

ಜೈಲಿನ ದಿನಗಳೇ ಅವರನ್ನು ರಾಜಕೀಯವಾಗಿ ಬೆಳೆಯಲು ಪ್ರೇರೇಪಿಸಿದವು. ಹೋರಾಟದ ನಂತರ ಗಡಿ ತಂಟೆಯನ್ನೇ ಬಂಡವಾಳ ಮಾಡಿಕೊಂಡು ಅವರು ಹೋರಾಟದ ನಾಯಕನಾಗಿ ಬೆಳೆದರು. ಅಲ್ಲಿಯವರೆಗೂ ಕೊಲ್ಹಾಪುರದಲ್ಲಿ ಆಟೊ ಚಾಲಕನಾಗಿದ್ದ ಶಿಂಧೆ ‘ಗಡಿ ಉಗ್ರವಾದ’ದ ಮೂಲಕವೇ ಶಿವಸೇನಾ ಸೇರಲು ದಾರಿ ಮಾಡಿಕೊಂಡರು.

**ರಕ್ತಸಿಕ್ತವಾದ ಪುಟ:** ಬೆಳಗಾವಿಯ ಸೇರಿದಂತೆ ಒಟ್ಟು 865 (ನಗರ, ಪಟ್ಟಣ, ಹಳ್ಳಿ) ಪ್ರದೇಶಗಳು ಮಹಾರಾಷ್ಟ್ರಕ್ಕೆ ಸೇರಬೇಕು ಎಂದು 1980ರಲ್ಲಿ ಮರಾಠಿಗರು ಉಗ್ರವಾದ ಹೋರಾಟ ಆರಂಭಿಸಿದ್ದರು. 1986ರ ಜೂನ್ 1ರಂದು ಶಿವಸೇನಾ ಹಾಗೂ ಎಂಇಎಸ್ ಕಾರ್ಯಕರ್ತರು ‘ಸೀಮಾ ಲಡಾಯಿ’ಗೆ (ಗಡಿ ಚಳವಳಿ) ಕರೆ ಕೊಟ್ಟರು. ಸಾವಿರಾರು ಚಳವಳಿಕಾರರು ಕಳ್ಳದಾರಿಯ ಮೂಲಕ ಬೆಳಗಾವಿಗೆ ನುಗ್ಗಿದ್ದರು. ಹೀಗೆ ಬಂದವರ ಗುಂಪಿನಲ್ಲಿ ಇದ್ದರು ಶಿಂಧೆ.

ಆಗ ಮಹಾರಾಷ್ಟ್ರದ ದೊಡ್ಡ ನಾಯಕರಾಗಿದ್ದ ಶರದ್ ಪವಾರ್ ಸೀಮಾ ಲಡಾಯಿಗೆ ಕರೆ ಕೊಟ್ಟಿದ್ದರು. ಶಿವಸೇನಾದಲ್ಲಿದ್ದ ಸುರೇಶ್ ಕಲ್ಮಾಡಿ, ಛಗನ್ ಭುಜಬಲ್ (ಈಗ ಎನ್‌ಸಿಪಿಯಲ್ಲಿ ಇದ್ದಾರೆ) ಅವರ ಹಿಂಬಾಲಕರಾಗಿ ಶಿಂಧೆ ಬಂದಿದ್ದರು.

ಛಗನ್ ನೇತೃತ್ವದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಮರಾಠಿಗರು ನಗರದಲ್ಲಿ ಹಿಂಸಾಚಾರ ನಡೆಸಿದ್ದರು. ಹಲವು ಕನ್ನಡ ಶಾಲೆಗಳಿಗೆ, ಮನೆಗಳಿಗೆ ಬೆಂಕಿ ಹಚ್ಚಿದ್ದರು. ಕಿರ್ಲೋಸ್ಕರ್ ರಸ್ತೆಯಲ್ಲಿ ಕಾವಲಿಗೆ ನಿಂತಿದ್ದ ಪೊಲೀಸ್ ಕಾನ್‌ಸ್ಟೆಬಲ್ ಅವರಿಗೂ ಬೆಂಕಿ ಹಚ್ಚಿದ್ದರು. ರೈಲು ಬೋಗಿಗಳನ್ನು ಉರುಳಿಸಿ, ಹಳಿಗಳನ್ನು ಕಿತ್ತೆಸೆದಿದ್ದರು. ಹಿಂಡಲಗಾ ಜೈಲಿನ ಹತ್ತಿರ ಇದ್ದ ಪಂಪ್‌ಹೌಸ್‌ಗೂ ಕೊಳ್ಳಿ ಇಟ್ಟಿದ್ದರು.

ಆ ಹಿಂಸಾಚಾರ ತಡೆಯಲು ಆಗ ರಾಜ್ಯದ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ ಅವರು ಗೋಲಿಬಾರ್‌ಗೆ ಅನುಮತಿ ನೀಡಿದ್ದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆಗಿದ್ದ ಕೆ.ನಾರಾಯಣ್ ಅವರ ನೇತೃತ್ವದಲ್ಲಿ ನಡೆದ ಗೋಲಿಬಾರ್‌ನಲ್ಲಿ 9 ಮರಾಠಿಗರು ಸ್ಥಳದಲ್ಲೇ ಮೃತರಾಗಿದ್ದರು. ನೂರಾರು ಕಾರ್ಯಕರ್ತರನ್ನು ಬಂಧಿಸಲಾಗಿತ್ತು. ಇದರ ನೆನಪಿಗಾಗಿ ಎಂಇಎಸ್ ಮುಖಂಡರು ಈಗಲೂ ಜೂನ್ 1ಕ್ಕೆ ಹುತಾತ್ಮ ದಿನ ಆಚರಿಸುತ್ತಾರೆ.

ನಾಯಕತ್ವ ವಹಿಸಿದ್ದ ಛಗನ್ ಜತೆಗೆ ಏಕನಾಥ ಶಿಂಧೆ ಅವರನ್ನೂ ಬಂಧಿಸಿ ಹಿಂಡಲಗಾ ಜೈಲಿಗೆ ಕಳುಹಿಸಲಾಗಿತ್ತು. ಅಲ್ಲಿ ಜಾಗ ಸಾಲದ ಕಾರಣ ಬಳ್ಳಾರಿ ಜೈಲಿಗೆ ಕಳುಹಿಸಲಾಗಿತ್ತು. 40 ದಿನ ಜೈಲುವಾಸದ ನಂತರ ಶಿಂಧೆ ಅವರು ಜಾಮೀನು ಪಡೆದು ಹೊರಬಂದರು.

(ಮಾಹಿತಿ: ಅಶೋಕ ಚಂದರಗಿ, ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ)


## ಫಡಣವೀಸ್ ಪುನರಾಗಮನ; ಸ್ವರೂಪ ಬೇರೆ

‘ನಾನು ಮತ್ತೆ ಬರುತ್ತೇನೆ’ ಎಂದು ಪದೇ ಪದೇ ಹೇಳುತ್ತಿದ್ದ ದೇವೇಂದ್ರ ಫಡಣವೀಸ್ ತಮ್ಮ ಮಾತನ್ನು ನಿಜವಾಗಿಸಿದ್ದಾರೆ. ಆದರೆ ಅವರ ಆಗಮನದ ಸ್ವರೂಪ ಮಾತ್ರ ಭಿನ್ನ ಹಾಗೂ ಅಷ್ಟೇ ಅನಿರೀಕ್ಷಿತವೂ ಆಗಿದೆ. ಎರಡು ಬಾರಿ ಮಹಾರಾಷ್ಟ್ರ ಮುಖ್ಯಮಂತ್ರಿ ಹಾಗೂ ವಿರೋಧ ಪಕ್ಷದ ನಾಯಕರಾಗಿದ್ದ ಫಡಣವೀಸ್ ಅವರು, ಉದ್ಧವ್ ಠಾಕ್ರೆ ಅವರ ನೇತೃತ್ವದ ಸರ್ಕಾರವನ್ನು ಉರುಳಿಸಿದ ಬಳಿಕ ಉಪಮುಖ್ಯಮಂತ್ರಿ ಯಾಗಿ ವಾಪಸಾಗಿದ್ದಾರೆ.

ವಿಧಾನಸಭಾ ಚುನಾವಣೆ ವೇಳೆ ‘ನಾನು ಮತ್ತೆ ಬರುತ್ತೇನೆ’ ಎಂಬ ಫಡಣವೀಸ್ ಅವರ ಘೋಷಣೆ ಸಾಕಷ್ಟು ಪ್ರಸಿದ್ಧವಾಗಿತ್ತು. ಆದರೆ ಅವರು ಅಂದುಕೊಂಡಂತೆ ಬಹುಮತ ಪಡೆಯಲು ಸಾಧ್ಯವಾಗಲಿಲ್ಲ. ಆದರೂ, ಅಜಿತ್ ಪವಾರ್ ಬೆಂಬಲದೊಂದಿಗೆ ಮುಖ್ಯಮಂತ್ರಿಯಾಗಿ ಮರಳಿದ್ದರು. ಆದರೆ ಅವರ ಹುದ್ದೆಯ ಆಯುಷ್ಯ ಕೇವಲ 80 ಗಂಟೆಯದ್ದಾಗಿತ್ತು.

ತಾಳ್ಮೆಗೆ ಹೆಸರಾದ ಫಡಣವೀಸ್, ‘ಚಾಣಕ್ಯ’ ಎನಿಸಿಕೊಂಡವರು. ಸರಿಯಾದ ಅವಕಾಶಕ್ಕಾಗಿ ಕಾದಿದ್ದು, ಶಿವಸೇನಾ ಮೇಲೆ ‘ನಿರ್ದಿಷ್ಟ ದಾಳಿ’ ಮಾಡಿದ್ದಾರೆ. ಅವರು ಶಿವಸೇನಾವನ್ನು ಎರಡು ಭಾಗವಾಗಿಸುವಲ್ಲಿ ಯಶಸ್ವಿಯಾಗಿದ್ದು ನಿಜವಾದರೂ, ಬಿಜೆಪಿ ವರಿಷ್ಠರ ಯೋಜನೆಯನ್ನು ಅರಿಯುವಲ್ಲಿ ವಿಫಲರಾಗಿದ್ದೂ ಅಷ್ಟೇ ಸತ್ಯ.

ಮೇ 1ರಂದು ಸುದ್ದಿವಾಹಿನಿಯ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಿದ್ದ ಅವರು ತಮ್ಮ ಮಾತನ್ನು ಪುನರುಚ್ಚರಿಸಿದ್ದರು. ಹೀಗೆ ಹೇಳಿದ ಒಂದೂವರೆ ತಿಂಗಳಲ್ಲಿ ರಾಜ್ಯಸಭಾ ಚುನಾವಣೆ ಹಾಗೂ ವಿಧಾನ ಪರಿಷತ್ ಚುನಾವಣೆಗಳಲ್ಲಿ ‘ಮಹಾ ವಿಕಾಸ ಆಘಾಡಿ’ ಸರ್ಕಾರಕ್ಕೆ ಪೆಟ್ಟು ಕೊಟ್ಟರು. ಎರಡೇ ತಿಂಗಳಲ್ಲಿ ಶಿಂಧೆ ನೇತೃತ್ವದ ಸರ್ಕಾರ ರಚನೆಯ ‘ಕಿಂಗ್ ಮೇಕರ್’ ಆಗಿ ಹೊರಹೊಮ್ಮಿದ್ದಾರೆ.


ದೇವೇಂದ್ರ ಫಡಣವೀಸ್

‘ಶ್ರೀಸಾಮಾನ್ಯ’ ಹಾಗೂ ‘ಶುದ್ಧಹಸ್ತ’ ಎಂಬ ಶ್ರೇಯದ ಫಡಣವೀಸ್ ಮಹಾರಾಷ್ಟ್ರ ಘಟಾನುಘಟಿ ನಾಯಕರನ್ನು ಹಿಂದೆ ಸರಿಸಿ ಮುಂಚೂಣಿಗೆ ಬಂದಿದ್ದರೂ, ಈ ಬಾರಿಯ ಬೆಳವಣಿಗೆ ಗಮನಿಸಿದರೆ ಅವರಿಗೆ ಹಿಂಬಡ್ತಿಯಾಗಿದೆ ಎನ್ನಬಹುದು.

ನಾಗ್ಪುರ ಮೂಲದ ಅವರು, ಮೃದುಭಾಷಿ, ಉತ್ತಮ ವಾಗ್ಮಿ, ಜನರನ್ನು ಸೆಳೆಯುವ ನಾಯಕ ಎಂದು ಕರೆಸಿಕೊಂಡಿದ್ದಾರೆ. ಉತ್ತಮ ಶೈಕ್ಷಣಿಕ ಹಿನ್ನೆಲೆಯ ಇವರ ಬೆನ್ನಿಗೆ ಆರ್‌ಎಸ್‌ಎಸ್ ಇದೆ. ಐದು ಬಾರಿ ಶಾಸಕರಾಗಿ ಚುನಾಯಿತರಾಗಿದ್ದಾರೆ. ಮರಾಠಾ ಪ್ರಾಬಲ್ಯದ ಮಹಾರಾಷ್ಟ್ರದಲ್ಲಿ ಬ್ರಾಹ್ಮಣ ಸಮುದಾಯದಿಂದ ಬಂದು ರಾಜಕೀಯವಾಗಿ ಉನ್ನತ ಸ್ಥಾನಕ್ಕೆ ಏರಿದ್ದಾರೆ. ಇವರ ತಂದೆ ಗಂಗಾಧರ ರಾವ್ ಫಡಣವೀಸ್ ಅವರು ಪರಿಷತ್ ಸದಸ್ಯರಾಗಿ, ತಾಯಿ ಸರಿತಾ ಫಡಣವೀಸ್ ಅವರು ವಿದರ್ಭ ಗೃಹಮಂಡಳಿಯ ನಿರ್ದೇಶಕಿಯಾಗಿ ಕೆಲಸ ಮಾಡಿದ್ದರು.

1970ರ ಜುಲೈ 22ರಂದು ಜನಿಸಿದ ಇವರು ನಾಗ್ಪುರ ವಿಶ್ವವಿದ್ಯಾಲಯದಲ್ಲಿ ಕಾನೂನು ಪದವಿ ಪಡೆದರು. ಬರ್ಲಿನ್‌ನಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡಿದ್ದಾರೆ. ನಾಗ್ಪುರದ ಪುರಸಭೆ ಸದಸ್ಯರಾಗಿ ತಮ್ಮ ರಾಜಕೀಯ ಜೀವನ ಆರಂಭಿಸಿ, ಭಾರತದ ಎರಡನೇ ಅತಿಕಿರಿಯ ವಯಸ್ಸಿನ ಮೇಯರ್ ಎಂಬ ಶ್ರೇಯಕ್ಕೆ ಪಾತ್ರರಾಗಿದ್ದರು.

# ಏಕನಾಥ ಶಿಂಧೆ ಮಹಾರಾಷ್ಟ್ರ ಸಿ.ಎಂ

ಒಂದನೇ ಪುಟದಿಂದ

‘ರಾಜ್ಯದ ಅಭಿವೃದ್ಧಿಯೇ ನನ್ನ ಆದ್ಯತೆ. ಸಮಾಜದ ಎಲ್ಲ ವರ್ಗಗಳನ್ನು ಜತೆಗೆ ಕರೆದೊಯ್ಯುತ್ತೇನೆ’ ಎಂದು ಪ್ರಮಾಣವಚನದ ಬಳಿಕ ಏಕನಾಥ ಶಿಂಧೆ ಅವರು ಹೇಳಿದ್ದಾರೆ.

ಶಿವಸೇನಾದ ಹಲವು ಶಾಸಕರು ಶಿಂಧೆ ನೇತೃತ್ವದಲ್ಲಿ ಮೊದಲು ಸೂರತ್‌ಗೆ ನಂತರ ಗುವಾಹಟಿಗೆ ಹೋಗಿ ಉದ್ಧವ್ ವಿರುದ್ಧ ಬಂಡಾಯ ಎದ್ದಿದ್ದರು. ದಿನಕಳೆದಂತೆ ಶಿಂಧೆ ಪಾಳಯ ಸೇರಿದ ಶಾಸಕರ ಸಂಖ್ಯೆ ಹೆಚ್ಚುತ್ತಲೇ ಹೋಯಿತು. ಶಿವಸೇನಾದ 39 ಶಾಸಕರು ಸೇರಿ 50 ಶಾಸಕರ ಬೆಂಬಲ ಶಿಂಧೆ ಅವರಿಗೆ ಇದೆ ಎನ್ನಲಾಗಿದೆ. ಹಾಗಾಗಿ, ವಿಶ್ವಾಸಮತ ಕೋರುವಂತೆ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರಿಗೆ ರಾಜ್ಯಪಾಲರು ಸೂಚಿಸಿದ್ದರು.

ಅನರ್ಹತೆ ಪ್ರಕ್ರಿಯೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿ ಇತ್ಯರ್ಥ ಆಗುವವರೆಗೆ ವಿಶ್ವಾಸಮತ ಕೋರಿಕೆಗೆ ತಡೆ ಕೊಡಬೇಕು ಎಂದು ಉದ್ಧವ್ ಠಾಕ್ರೆ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಆದರೆ, ಈ ಕೋರಿಕೆಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿತ್ತು. ಉದ್ಧವ್ ಠಾಕ್ರೆ ಅವರು ಮುಖ್ಯಮಂತ್ರಿ ಹುದ್ದೆಗೆ ಬುಧವಾರ ರಾಜೀನಾಮೆ ನೀಡಿದ್ದರು.

## ಸೇನಾ, ಉದ್ಧವ್ ದಮನವೇ ಗುರಿ

ಒಂದನೇ ಪುಟದಿಂದ

ಶಿಂಧೆಯನ್ನು ಮುಖ್ಯಮಂತ್ರಿ ಮಾಡುವ ನಿರ್ಧಾರವು ಶಿವಸೇನಾವನ್ನು ದುರ್ಬಲಗೊಳಿಸಬಹುದು ಮತ್ತು ಅದರ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರನ್ನು ರಾಜಕೀಯವಾಗಿ ಅಪ್ರಸ್ತುತವಾಗಿಸಬಹುದು.

ಶಿವಸೈನಿಕರಲ್ಲಿ ಒಬ್ಬರು ಮುಖ್ಯಮಂತ್ರಿ ಹುದ್ದೆಯಲ್ಲಿದ್ದಾರೆ ಎಂಬ ಅಂಶವು ಈಗ ಕವಲು ದಾರಿಯಲ್ಲಿರುವ ಶಿವಸೈನಿಕರನ್ನು ಶಿಂಧೆ ಅವರತ್ತ ಆಕರ್ಷಿಸಬಹುದು. ಮಹಾರಾಷ್ಟ್ರದ ಅತ್ಯಂತ ಪ್ರಬಲ ಸಮುದಾಯವಾದ ಮರಾಠರು ಎನ್‌ಸಿಪಿ ಮತ್ತು ಶಿವಸೇನಾ ಬೆಂಬಲಿಗರಾಗಿದ್ದಾರೆ. ಶಿಂಧೆ ಅವರು ಮುನ್ನೆಲೆಯಲ್ಲಿ ಇದ್ದರೆ, ಈ ಸಮುದಾಯವನ್ನು ಬಿಜೆಪಿಯತ್ತ ತರಬಹುದು ಎಂಬ ಲೆಕ್ಕಾಚಾರವೂ ಬಿಜೆಪಿಯಲ್ಲಿ ಇದೆ.

ಬಂಡಾಯ ಎದ್ದ ಶಿವಸೇನಾದ ಶಾಸಕರಲ್ಲಿ ಒಬ್ಬರು ಮುಖ್ಯಮಂತ್ರಿ ಆಗಲಿದ್ದಾರೆಯೇ ಎಂದು ಉದ್ಧವ್ ಠಾಕ್ರೆ ಅವರು ಈ ಹಿಂದೆ ಪ್ರಶ್ನಿಸಿದ್ದರು. ಹಾಗಿದ್ದರೆ ಮುಖ್ಯಮಂತ್ರಿ ಹುದ್ದೆ ಬಿಡಲು ಸಿದ್ಧ ಎಂದಿದ್ದರು. ಈಗ, ಈ ವಿಚಾರವನ್ನು ಉದ್ಧವ್ ಅವರು ಮುನ್ನೆಲೆಗೆ ತರುವುದನ್ನು ಬಿಜೆಪಿ ತಡೆದಿದೆ.

### ಸಂಕ್ಷಿಪ್ತ ಸುದ್ದಿ

## ಮಗುವಿನ ಆಧಾರ್ ಕಾರ್ಡ್ ಕಡ್ಡಾಯವಲ್ಲ

**ನವದೆಹಲಿ (ಪಿಟಿಐ):** ಪೋಷಣ್ ಯೋಜನೆ ಅಡಿ ಪ್ರಯೋಜನ ಪಡೆದುಕೊಳ್ಳಲು ಮಗುವಿನ ಆಧಾರ ಕಾರ್ಡ್ ಕಡ್ಡಾಯವಲ್ಲ ಎಂದು ಸ್ಪಷ್ಟಪಡಿಸಿರುವ ಕೇಂದ್ರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ತಾಯಿಯ ಬಯೋಮೆಟ್ರಿಕ್ ಕಾರ್ಡ್ ಬಳಸಿ ಪೋಷಣ್ ಟ್ರ್ಯಾಕರ್ ಆ್ಯಪ್‌ನಲ್ಲಿ ನೋಂದಣಿ ಮಾಡಬಹುದು ಎಂದು ತಿಳಿಸಿದೆ.

ಪೌಷ್ಟಿಕ ಆಹಾರ ಪಡೆಯಲು ಲಕ್ಷಾಂತರ ಮಕ್ಕಳಿಗೆ ಆಧಾರ್ ಕಾರ್ಡ್ ಅಗತ್ಯ ಎಂಬ ಮಾಧ್ಯಮ ವರದಿಗೆ ಸ್ಪಷ್ಟನೆ ನೀಡಿರುವ ಸಚಿವಾಲಯ, ಮಗುವಿನ ಆಧಾರ್ ಕಾರ್ಡ್ ಕಡ್ಡಾಯವಲ್ಲ. ತಾಯಿಯ ಆಧಾರ ಬಳಸಿ ಫಲಾನುಭವಿಗಳಿಗೆ ಯೋಜನೆ ತಲುಪಿಸಬೇಕು ಎಂದು ತಿಳಿಸಿದೆ.

ಕೇಂದ್ರ ವಾರ್ತಾ ಇಲಾಖೆ ಫಾಕ್ಟ್ ಚೆಕ್ ಸಹ ಈ ಬಗ್ಗೆ ಟ್ವೀಟ್ ಮೂಲಕ ಸ್ಪಷ್ಟನೆ ನೀಡಿದೆ.

## ಕೇರಳದಲ್ಲಿ ಆಂಥ್ರಾಕ್ಸ್ : ಕಾಡು ಹಂದಿಗಳ ಸಾವು

**ತ್ರಿಶೂರ್/ತಿರುವನಂತಪುರ (ಪಿಟಿಐ):** ‘ಕೆಲ ದಿನಗಳಲ್ಲಿ ಕೇರಳದ ಅತಿರಪಿಲ್ಲಿ ಅರಣ್ಯ ಪ್ರದೇಶದಲ್ಲಿ ಆಂಥ್ರಾಕ್ಸ್ ಸೋಂಕಿನಿಂದಾಗಿ ಕೆಲ ಕಾಡು ಹಂದಿಗಳು ಮೃತಪಟ್ಟಿವೆ. ಆದರೆ ಜಾನುವಾರುಗಳಲ್ಲಿ ಸೋಂಕು ಕಾಣಿಸಿಕೊಂಡಿಲ್ಲ. ಹೀಗಾಗಿ ಯಾರೂ ಆತಂಕಕ್ಕೆ ಒಳಗಾಗಬಾರದು’ ಎಂದು ತ್ರಿಶೂರ್ ಜಿಲ್ಲಾಧಿಕಾರಿ ಹರಿತಾ ವಿ.ಕುಮಾರ್ ತಿಳಿಸಿದ್ದಾರೆ.

‘ಅರಣ್ಯ ವ್ಯಾಪ್ತಿಯಲ್ಲಿನ ಸಾಕು ಪ್ರಾಣಿಗಳಲ್ಲೂ ಸೋಂಕಿನ ಲಕ್ಷಣಗಳು ಕಂಡುಬಂದಿಲ್ಲ. ಪ್ರಾಣಿಗಳಿಂದ ಮನುಷ್ಯರಿಗೆ ಸೋಂಕು ಹರಡುವ ಸಾಧ್ಯತೆಯೂ ತೀರಾ ಕಡಿಮೆ. ಹೀಗಾಗಿ ಗಾಬರಿಪಡುವ ಬದಲು ಕೆಲ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು’ ಎಂದು ಹೇಳಿದ್ದಾರೆ.

## ಅಮೆರಿಕಕ್ಕೆ ಲಸಿಕೆ ರಫ್ತು: ಅನುಮೋದನೆ ಕೋರಿದ ಸೀರಂ

**ನವದೆಹಲಿ (ಪಿಟಿಐ):** ಕೋವಿಡ್ ಲಸಿಕೆ ಕೋವೊವ್ಯಾಕ್ಸ್‌ನ 32.4 ಲಕ್ಷ ಡೋಸ್‌ಗಳನ್ನು ‘ನುವಾಕ್ಸೊವಿಡ್’ ಹೆಸರಿನಲ್ಲಿ ಅಮೆರಿಕಕ್ಕೆ ರಫ್ತು ಮಾಡಲು ಅನುಮೋದನೆ ನೀಡುವಂತೆ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ಕೇಂದ್ರ ಸರ್ಕಾರವನ್ನು ಕೋರಿದೆ ಎಂದು ಮೂಲಗಳು ಗುರುವಾರ ತಿಳಿಸಿವೆ.

ಭಾರತದಲ್ಲಿ ತಯಾರಿಸಿ ಅಮೆರಿಕಕ್ಕೆ ರಫ್ತು ಮಾಡುತ್ತಿರುವ ಕೋವಿಡ್ ಅಥವಾ ಕೋವಿಡೇತರ ಮೊದಲ ಲಸಿಕೆ ಇದಾಗಲಿದೆ ಎಂದೂ ಹೇಳಿವೆ.

ನಿಗದಿತ ಸಮಯಕ್ಕೆ ಅನುಮೋದನೆ ಲಭಿಸಿದರೆ ಜುಲೈ 3ರಂದು ಲಸಿಕೆ ರವಾನೆಯಾಗುವ ಸಾಧ್ಯತೆ ಇದೆ ಎಂದು ಎಸ್‌ಐಐನ ಸರ್ಕಾರಿ ಮತ್ತು ನಿಯಂತ್ರಣ ವ್ಯವಹಾರಗಳ ನಿರ್ದೇಶಕ ಪ್ರಕಾಶ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

## ಇಸ್ರೊ: 3 ವಾಣಿಜ್ಯ ಉಪಗ್ರಹ ನಭಕ್ಕೆ

**ಶ್ರೀಹರಿಕೋಟಾ (ಎಪಿ):** ಇಲ್ಲಿನ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಉಪಗ್ರಹ ಉಡಾವಣಾ ನೆಲೆಯಿಂದ ಇಸ್ರೊದ ಪಿಎಸ್‌ಎಲ್‌ವಿ ಸಿ–53 ರಾಕೆಟ್ ಮೂಲಕ ಸಿಂಗಪುರದ ಮೂರು ವಾಣಿಜ್ಯ ಬಳಕೆಯ ಉಪಗ್ರಹಗಳನ್ನು ಗುರುವಾರ ಸಂಜೆ 6.02 ಗಂಟೆಗೆ ಯಶಸ್ವಿಯಾಗಿ ಉಡಾವಣೆ ಮಾಡಲಾಗಿದೆ.

ಇದು ಪಿಎಸ್‌ಎಲ್‌ವಿ ರಾಕೆಟ್‌ನ 55ನೇ ಯೋಜನೆ. ಬಾಹ್ಯಾಕಾಶ ಸಂಸ್ಥೆಯ ವಾಣಿಜ್ಯ ಉದ್ದೇಶದ ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್‌ಗೂ (ಎನ್‌ಎಸ್‌ಐಎಲ್) ಇದು ಎರಡನೇ ವಾಣಿಜ್ಯ ಕಾರ್ಯಾಚರಣೆಯಾಗಿದೆ.

ಪಿಎಸ್‌ಎಲ್‌ವಿ ಸಿ–53 ರಾಕೆಟ್ ಡಿಎಸ್–ಇಒ ಉಪಗ್ರಹದ ಜತೆಗೆ ಇನ್ನೆರಡು ಉಪಗ್ರಹಗಳನ್ನು ಹೊತ್ತು, ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಎರಡನೇ ಉಡಾವಣಾ ನೆಲೆಯಿಂದ ಕಕ್ಷೆಗೆ ಹಾರಿತು ಎಂದು ಇಸ್ರೊ ತಿಳಿಸಿದೆ.

## ಮುರ್ಮು, ಸಿನ್ಹಾ ನಾಮಪತ್ರ ಕ್ರಮಬದ್ಧ

**ನವದೆಹಲಿ (ಪಿಟಿಐ):** ಜುಲೈ 18ರಂದು ನಡೆಯಲಿರುವ ರಾಷ್ಟ್ರಪತಿ ಚುನಾವಣೆಗೆ ಸಲ್ಲಿಕೆಯಾಗಿರುವ ನಾಮಪತ್ರಗಳನ್ನು ಪರಿಶೀಲಿಸಲಾಗಿದ್ದು, ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಮತ್ತು ಪ್ರತಿಪಕ್ಷಗಳ ಅಭ್ಯರ್ಥಿ ಯಶವಂತ ಸಿನ್ಹಾ ಅವರ ನಾಮಪತ್ರಗಳು ಕ್ರಮಬದ್ಧವಾಗಿವೆ.

ಈ ಇಬ್ಬರು ಅಭ್ಯರ್ಥಿಗಳು ಅಂತಿಮ ಕಣದಲ್ಲಿ ಉಳಿದಿದ್ದಾರೆ ಎಂದು ರಾಜ್ಯಸಭೆ ಪ್ರಧಾನ ಕಾರ್ಯದರ್ಶಿ ಪಿ.ಸಿ. ಮೋದಿ ಗುರುವಾರ ತಿಳಿಸಿದ್ದಾರೆ.

94 ಅಭ್ಯರ್ಥಿಗಳಿಂದ 115 ನಾಮಪತ್ರಗಳು ಸಲ್ಲಿಕೆಯಾಗಿದ್ದವು. ಇದರಲ್ಲಿ ಅಗತ್ಯ ದಾಖಲೆಗಳಿರದ ಕಾರಣ 107 ನಾಮಪತ್ರಗಳನ್ನು ತಿರಸ್ಕರಿಸಲಾಗಿದೆ. ಮುರ್ಮು ಮತ್ತು ಸಿನ್ಹಾ ಅವರು ತಲಾ ನಾಲ್ಕು ಪ್ರತಿಗಳಲ್ಲಿ ನಾಮಪತ್ರ ಸಲ್ಲಿಸಿದ್ದು, ಕ್ರಮಬದ್ಧವಾಗಿರುವುದರಿಂದ ಈ ಇಬ್ಬರ ನಾಮಪತ್ರಗಳನ್ನು ಸ್ವೀಕರಿಸಲಾಗಿದೆ ಎಂದು ಅವರು ತಿಳಿಸಿದರು.

# ಸಿನಿಮಾ ಪುರವಣಿ





ಶೀತಲ್ ಶೆಟ್ಟಿ

# ಕಥೆ ಹೇಳುವುದೇ ಶೀತಲ ತುಡಿತ

ಟಿ.ವಿ. ನಿರೂಪಕಿಯಾಗಿದ್ದವರು ಸಾಧನೆಯ ಹಂಬಲದಿಂದ ಮುನ್ನುಗ್ಗಿದರು. ಒಂದಿಷ್ಟು ಕಷ್ಟಪಟ್ಟರು. ಮಾಡೆಲಿಂಗ್, ನಟನೆ, ಸಾಕ್ಷ್ಯಚಿತ್ರ ನಿರ್ಮಾಣ ಹೀಗೆ ಹಲವು ಕ್ಷೇತ್ರಗಳಲ್ಲಿ ತೊಡಗಿಸಿಕೊಂಡರು. ಈಗ ಪಕ್ಕಾ ಪಳಗಿದ ನಟಿ, ನಿರ್ದೇಶಕಿಯಾಗಿ ಬೆಳ್ಳಿತೆರೆ ಮೇಲೆ ಬರುತ್ತಿದ್ದಾರೆ ಶೀತಲ್ ಶೆಟ್ಟಿ. ಅವರ ನಿರ್ದೇಶನದ 'ವಿಂಡೋ ಸೀಟ್', ನಟನೆಯ 'ಚೇಸ್' ಚಿತ್ರ ತೆರೆ ಕಾಣುತ್ತಿರುವ ಹೊತ್ತಿನಲ್ಲಿ ಒಂದಿಷ್ಟು ಮಾತುಕತೆ.

**ಶರತ್ ಹೆಗ್ಡೆ**

- **ಕಥೆ ಹೇಳಬೇಕು ಎಂದು ಅನಿಸಿದ್ದು ಏಕೆ?**

ಪ್ರತಿಯೊಬ್ಬರಲ್ಲೂ ಕಥೆ ಇರುತ್ತದೆ. ಹೇಳಿಕೊಳ್ಳದಿರಬಹುದು ಅಷ್ಟೆ. ಆದರೆ ಹೇಳಬೇಕು ಎಂಬ ತುಡಿತ, ಆಶಯ ಇದ್ದೇ ಇರುತ್ತದೆ. ನನಗೂ ಒಂದೊಳ್ಳೆಯ ಕಥೆಯನ್ನು ಹೇಳುವುದು ಇಷ್ಟ. ಪ್ರತಿಯೊಬ್ಬರೂ ಹೇಳುವ ರೀತಿ ಬೇರೆ ಬೇರೆಯೇ ಇರುತ್ತದೆ. ಒಳ್ಳೆಯ ಕಥೆ ಹೇಳಲು ನನ್ನ ಸಿದ್ಧತೆ ಇದ್ದೇ ಇದೆ. ಆ ತುಡಿತದ ಫಲವೇ ಈಗ ನಿರ್ದೇಶನದವರೆಗೆ ಕರೆತಂದಿದೆ.

- **ಎಂಥ ವಸ್ತು (ಕಂಟೆಂಟ್) ಕೊಡಬೇಕು ಎಂಬುದು ನಿಮ್ಮ ಆಸೆ?**

ನಾನು ಇಂಥದ್ದೇ ಶೈಲಿ ಎಂದು ಅನುಸರಿಸುವವಳಲ್ಲ. ಇದುವರೆಗೆ ಮಾಡಿದ ಡಾರ್ಕ್ ಝೋನ್‌ನಿಂದ ಹೊರಬರಬೇಕು. ಲಘು, ಹಾಸ್ಯ, ಕುತೂಹಲಕಾರಿ ವಿಷಯಗಳನ್ನು ಕೊಡಬೇಕು. ನೋಡೋಣ, ಯಾವುದಕ್ಕೂ ಪ್ರೇಕ್ಷಕನ ನಾಡಿಮಿಡಿತ ತಿಳಿಯಬೇಕು. ಅದರ ಮೇಲೆ ನನ್ನದೇ ಆದ ಶೈಲಿಯನ್ನು ರೂಪಿಸಬಹುದು.

- **ಕಥೆ ಹೇಳುವಲ್ಲಿ ನಿಮ್ಮ ಬಾಲ್ಯದ ಪ್ರಭಾವ?**

ಖಂಡಿತವಾಗಿಯೂ ಇದೆ. ಸಾಗರದಲ್ಲಿ ಕಳೆದ ಬಾಲ್ಯ, ಬ್ರಹ್ಮಾವರದಲ್ಲಿ ಕಳೆದ ಹೈಸ್ಕೂಲ್ ದಿನಗಳು, ಇವೆಲ್ಲವೂ ಪ್ರಭಾವ ಬೀರಿವೆ. ಆದರೆ, ಸಿನಿಮಾ ವಿಚಾರಕ್ಕೆ ಬಂದಾಗ ವಸ್ತು ಏನನ್ನು ಕೇಳುತ್ತದೋ ಆ ರೀತಿ ಕಥೆ ಹೊಸೆಯಬೇಕಾಗುತ್ತದೆ.

- **ಶೂಟಿಂಗ್ ಸಮಯದ ಅನುಭವ?**

ಅದ್ಭುತವಾಗಿತ್ತು. ಸಾಗರ ನನ್ನ ಬಾಲ್ಯ ಕಳೆದ ಊರು. ರೈಲು ಅಂದಾಕ್ಷಣ ನೆನಪಾಗುವುದೇ ತಾಳಗುಪ್ಪ ರೈಲು ನಿಲ್ದಾಣ. ನಾನು ಮೊದಲು ರೈಲು ಯಾನ ಮಾಡಿದ್ದೇ ಅಲ್ಲಿಂದ. ಅಲ್ಲಿನ ಖುಷಿಯ ಕ್ಷಣಗಳು ಸಾಕಷ್ಟಿವೆ. ಶೂಟಿಂಗ್ ಸಮಯದಲ್ಲಿ ಜನ ತಮ್ಮೂರಿನ ಹುಡುಗಿ ಎಂಬ ಪ್ರೀತಿ, ಅಭಿಮಾನದಿಂದ ನೋಡಿದರು. ಅಪ್ಪನ ಹೆಸರೂ ಅಲ್ಲಿ ಚಾಲ್ತಿಯಲ್ಲಿತ್ತಲ್ಲಾ. ಹಾಗಾಗಿ ಎಲ್ಲವೂ ಸುಗಮವಾಯಿತು.

- **ಕೆಲಕಾಲ ಸಿನಿಮಾಗಳಿಂದ ಬ್ರೇಕ್ ತೆಗೆದುಕೊಂಡಿರಾ?**

ಹಾಗೇನಿಲ್ಲ. ಒಂದೆಡೆ ನನ್ನ ಕಂಪನಿಯ (ಮೀಡಿಯಾ ಮನೆ- ಕಿರುಚಿತ್ರ, ಜಾಹೀರಾತು ನಿರ್ಮಾಣ ಸಂಸ್ಥೆ) ಕೆಲಸಗಳೂ ನಡೆಯುತ್ತಿದ್ದವು. ಅದರ ಜೊತೆಗೆ ಸಿನಿಮಾ ಕೆಲಸ ಮಾಡಬೇಕಿತ್ತು. ಎರಡನ್ನೂ ನಿಭಾಯಿಸಬೇಕಲ್ಲಾ? ಇನ್ನೂ ಹೇಳಬೇಕೆಂದರೆ ನನಗೆ ಬರುವ ಪಾತ್ರಗಳೂ ಅಂಥದ್ದೇ ಇದ್ದವು. ಪತ್ರಕರ್ತೆ, ಡಾಕ್ಟರ್, ಐಎಎಸ್ ಅಧಿಕಾರಿ ಇಂಥವು. ಒಂದು ರೀತಿ ಏಕತಾನತೆ ಅನಿಸಿತ್ತು. ಅಫ್‌ಕೋರ್ಸ್, ಅವು ತುಂಬಾ ಗೌರವಯುತವಾಗಿ ಕಾಣಿಸುವ ಪಾತ್ರಗಳೇ ಹೌದು. ಆದರೆ, ನನ್ನೊಳಗಿರುವ ಹೊಸತನದ ತುಡಿತಕ್ಕೆ ಇನ್ನೇನೋ ಬೇಕು ಅನಿಸುತ್ತಿತ್ತು. ಈಗ ನೋಡಿ ನಿರ್ದೇಶನ ಹಾಗೂ ನಟನೆಯ ಅವಕಾಶ ಒಟ್ಟಿಗೇ ಬಂದಿವೆ. ಹಾಗಾಗಿ ನಾನು ತುಂಬಾ ಅದೃಷ್ಟವಂತೆ.

- **'ಚೇಸ್' ಸಿನಿಮಾ ಬಗ್ಗೆ?**

'ಚೇಸ್' ಸಿನಿಮಾವನ್ನು ನಿರ್ದೇಶಕ ವಿಲೋಕ್ ಶೆಟ್ಟಿ ಅವರು ತುಂಬಾ ಆಸ್ಥೆಯಿಂದ ಮಾಡಿದ್ದಾರೆ. ಹಾಡುಗಳೂ ತುಂಬಾ ಚೆನ್ನಾಗಿವೆ. ಟೀಸರ್‌ಗೆ ತುಂಬಾ ಒಳ್ಳೆಯ ಪ್ರತಿಕ್ರಿಯೆ ಬಂದಿದೆ. ಕುತೂಹಲಕಾರಿ ಕಥಾ ಹಂದರದ ಚಿತ್ರವದು. ನನ್ನ ಪಾತ್ರ ಏನು ಎಂಬುದನ್ನು ತೆರೆಯ ಮೇಲೆ ನೋಡಬೇಕು. ಒಳ್ಳೆಯ ಪಾತ್ರ ಕೊಟ್ಟಿದ್ದಾರೆ. ಒಂದು ಭಿನ್ನ ಮಾದರಿಯ ಸಿನಿಮಾ ಎಂದು ಹೇಳಬಲ್ಲೆ. ❖

### ಏನಿದು 'ವಿಂಡೋ ಸೀಟ್'?

ಕಥೆ ಕಾಲ್ಪನಿಕ ಆದರೂ ಅದರಲ್ಲೊಂದು ತರ್ಕವನ್ನು ಕೊಟ್ಟಿದ್ದೇವೆ. ರೈಲಿನ ಕಿಟಕಿ ಸೀಟನ್ನೇ ವಸ್ತುವಾಗಿಟ್ಟುಕೊಂಡು ಒಂದಿಷ್ಟು ಸಸ್ಪೆನ್ಸ್, ಥ್ರಿಲ್ಲರ್, ಮರ್ಡರ್ ಮಿಸ್ಟರಿ ಕೊಟ್ಟಿದ್ದೇವೆ. ಸಹಜವಾಗಿ ಒಂದಿಷ್ಟು ಕಮರ್ಷಿಯಲ್ ಅಂಶಗಳನ್ನೂ ಸೇರಿಸಿದ್ದೇವೆ. ಮೊದಲ ಪ್ರಯತ್ನ. ಪ್ರೇಕ್ಷಕರಿಗೆ ಇಷ್ಟವಾಗುತ್ತದೆ ಎಂಬ ನಂಬಿಕೆ ನನ್ನದು. ನೋಡಿದವರು ಇನ್ನೊಮ್ಮೆ ತಿರುಗಿ ನೋಡಬೇಕು. ಇದರ ಫಲಿತಾಂಶ ನೋಡಿಕೊಂಡು ಪ್ರೇಕ್ಷಕನಿಗೆ ಎಂತಹ ಕಥೆ ಬೇಕು ಎನ್ನುವುದನ್ನು ತಿಳಿದುಕೊಳ್ಳಬಹುದು.

## 'ಸಂಚಿನ ಸುಳಿಯಲಿ' ಭೂಮಿ



ಭೂಮಿ ಶೆಟ್ಟಿ ಹಾಗೂ ಪವನ್

**'ಪುಟ್ಟಕ್ಕನ ಮಕ್ಕಳು'** ಧಾರಾವಾಹಿ ಖ್ಯಾತಿಯ ಪವನ್‌ಕುಮಾರ್ ಹಾಗೂ 'ಕಿನ್ನರಿ'ಯ ನಟಿ, ಬಿಗ್‌ಬಾಸ್ ಸ್ಪರ್ಧಿ ಭೂಮಿ ಶೆಟ್ಟಿ ನಟಿಸಿರುವ 'ಸಂಚಿನ ಸುಳಿಯಲಿ' ಸಿನಿಮಾ ಮುಹೂರ್ತ ಇತ್ತೀಚೆಗೆ ನಡೆಯಿತು.

ನಿರ್ದೇಶಕ ನಂದಕಿಶೋರ್ ಮೊದಲ ದೃಶ್ಯಕ್ಕೆ ಕ್ಲ್ಯಾಪ್ ಮಾಡಿದರು. ಉದ್ಯಮಿ ಕೆ.ಎನ್. ನಾಗೇಗೌಡ ಮತ್ತು ಮೈಸೂರಿನ ಫ್ಯಾಶನ್ ಡಿಸೈನರ್ ಹಂಸರವಿಶಂಕರ್ ಜಂಟಿಯಾಗಿ ಮಾನ್ಯ ಕ್ರಿಯೇಶನ್ಸ್ ಅಡಿಯಲ್ಲಿ ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. 'ಅಚಲ' 'ಯಾರವಳು' ಸಿನಿಮಾಗಳನ್ನು ನಿರ್ದೇಶಿಸಿದ್ದ ಪ್ರಮೋದ್ ಎಸ್. ಆರ್. ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

'2014ರಂದು ಮೈಸೂರಿನಲ್ಲಿ ನಡೆದ ಘಟನೆಯೊಂದು ದಿನಪತ್ರಿಕೆಯಲ್ಲಿ ಪ್ರಕಟಗೊಂಡಿತ್ತು. ಅದರ ಎಳೆಯನ್ನು ತೆಗೆದುಕೊಂಡು ಕಥೆ ಹೆಣೆದಿದ್ದೇನೆ. ಕಾಲೇಜು ವಿದ್ಯಾರ್ಥಿಗಳ ತಂಡವೊಂದು ನಿರ್ಜನ ಪ್ರದೇಶಕ್ಕೆ ತೆರಳುತ್ತದೆ. ಅಲ್ಲಿಗೆ ಹೋದಾಗ ಸಂಚಿನ ಸುಳಿಯಲ್ಲಿ ಸಿಲುಕುತ್ತದೆ. ಇದು ಕಥೆಯ ಎಳೆ' ಎಂದಿದ್ದಾರೆ ಪ್ರಮೋದ್. ಕಥೆಗೆ ಅನುಗುಣವಾಗಿ ಶೇಕಡ 90ರಷ್ಟು ಚಿತ್ರೀಕರಣವನ್ನು ಉಡುಪಿ, ಬೆಂಗಳೂರು ಸುತ್ತಮುತ್ತ ಎರಡು ಹಂತಗಳಲ್ಲಿ ನಡೆಸಲು ಚಿತ್ರತಂಡ ನಿರ್ಧರಿಸಿದೆ. ಕೆವಿನ್ ಎಂ. ಸಂಗೀತ, ವಿನೋದ್ ಆರ್. ಛಾಯಾಗ್ರಹಣ ಚಿತ್ರಕ್ಕಿದೆ. ❖

ಸಿನಿ ಸಂಕ್ಷಿಪ್ತ

## ಪೃಥ್ವಿ ಅಂಬಾರ್ ಎಂದರೆ 'ಭುವನಂ ಗಗನಂ'!

**'ದಿಯಾ' ಸಿನಿಮಾದ** 'ಆದಿ' ಖ್ಯಾತಿಯ ನಟ ಪೃಥ್ವಿ ಅಂಬಾರ್ ಹಾಗೂ 'ರತ್ನನ್ ಪ್ರಪಂಚ' ಸಿನಿಮಾದ 'ಉಡಾಳ್ ಬಾಬುರಾವ್' ಖ್ಯಾತಿಯ ನಟ ಪ್ರಮೋದ್ ಜೊತೆಯಾಗಿ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ ಎನ್ನುವ ಸುದ್ದಿ ಗಾಂಧಿನಗರದಲ್ಲಿ ಕೆಲ ತಿಂಗಳ ಹಿಂದೆಯೇ ಹರಿದಾಡಿತ್ತು. ಇದೀಗ ಅವರಿಬ್ಬರೂ ಜೊತೆಯಾಗಿ ನಟಿಸುತ್ತಿರುವ ಸಿನಿಮಾ ಶೀರ್ಷಿಕೆ ಅನಾವರಣವಾಗಿದೆ. 'ಭುವನಂ ಗಗನಂ' ಎಂಬ ಸಿನಿಮಾ ಸೆಟ್ಟೇರಿದ್ದು, ಗಿರೀಶ್ ಮೂಲಿಮನಿ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

ಎಂ.ಮುನೇಗೌಡ ಸಾರಥ್ಯದ ಎಸ್‌ವಿಸಿ ಫಿಲ್ಮ್ಸ್‌ನ ಚೊಚ್ಚಲ ಚಿತ್ರ ಇದಾಗಿದ್ದು, ಬೆಂಗಳೂರಿನ ಕಂಠೀರವ ಸ್ಟುಡಿಯೊದಲ್ಲಿ ಇತ್ತೀಚೆಗೆ ಚಿತ್ರದ ಮುಹೂರ್ತ ನಡೆಯಿತು. 'ರಾಜರು' ಎಂಬ ಚಿತ್ರ ನಿರ್ದೇಶನ ಮಾಡಿದ್ದ ಗಿರೀಶ್ ಅವರೇ 'ಭುವನಂ ಗಗನಂ' ಸಿನಿಮಾಗೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ.

ಚಿತ್ರದ ಕಥೆಯ ಕುರಿತು ಮಾತನಾಡಿದ ಪ್ರಮೋದ್, 'ಕ್ಲಾಸ್ ಲವ್‌ಸ್ಟೋರಿ ಕಥೆ ಹೊಂದಿರುವ ಸಿನಿಮಾ ಹುಡುಕುತ್ತಿದ್ದೆ. ಈ ಕಥೆ ಕೇಳಿ ಇಷ್ಟವಾಯಿತು. ಈ ಸಿನಿಮಾದಲ್ಲಿ ನಾನು ಬೇರೆ ರೀತಿಯೇ ಕಾಣಿಸುತ್ತೇನೆ. ಇಡೀ ಸಿನಿಮಾ ನನಗೆ ಬೇರೆಯೇ ಗುರುತು ನೀಡಲಿದೆ ಎನ್ನುವ ನಂಬಿಕೆಯ ಮೇಲೆ ಈ ಸಿನಿಮಾ ಒಪ್ಪಿಕೊಂಡಿದ್ದೇನೆ' ಎಂದರು.

'ಯಾವುದೇ ಸಿನಿಮಾವಾಗಲಿ, ಸಿನಿಮಾ ಬಗ್ಗೆ ಅತ್ಯುತ್ಸಾಹವಿರುವ ನಿರ್ಮಾಪಕರು, ನಿರ್ದೇಶಕರು ಬೇಕು. ಅಂಥ ತಂಡ ಇದಾಗಿದೆ. ಚಿತ್ರದ ಶೀರ್ಷಿಕೆ ನನಗೆ ಬಹಳ ಇಷ್ಟವಾಯ್ತು. ನನ್ನ ಹೆಸರಿನ ಅರ್ಥ ಕೂಡ 'ಭುವನಂ ಗಗನಂ'. ಕಥೆ ಕೇಳಿದಾಗ ನನಗೆ ಬಹಳ ಕನೆಕ್ಟ್ ಆಗಿತ್ತು. ಪ್ರಮೋದ್ ಒಬ್ಬರು ಅದ್ಭುತ ಕಲಾವಿದ' ಎಂದರು ಪೃಥ್ವಿ ಅಂಬಾರ್. ❖



ಭುವನಂ ಗಗನಂ
ಪೃಥ್ವಿ ಅಂಬಾರ್
ಪ್ರಮೋದ್

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



# ಅಭಿಮತ



❦ **ಸುಭಾಷಿತ** ❦
ಪ್ರತಿಯೊಬ್ಬ ವ್ಯಕ್ತಿಯೂ ತನಗೆ ತಾನೇ ವಿಕಾಸಗೊಂಡು ತನ್ನ ಮಟ್ಟವನ್ನು ಮುಟ್ಟಬೇಕು.
–ಗೋಪಾಲಕೃಷ್ಣ ಅಡಿಗ

# ಉದಯಪುರ: ಘೋರ ಕೃತ್ಯ ತಕ್ಕ ಶಿಕ್ಷೆ ತ್ವರಿತವಾಗಿ ಆಗಲಿ

**ರಾಜಸ್ಥಾನದ** ಉದಯಪುರದಲ್ಲಿ ವ್ಯಕ್ತಿಯೊಬ್ಬರನ್ನು ಬೀಭತ್ಸವಾಗಿ ಹತ್ಯೆ ಮಾಡಿ, ಈ ಘೋರ ಕೃತ್ಯವನ್ನು ಸಾಮಾಜಿಕ ಜಾಲತಾಣದ ಮೂಲಕ ಹರಿಯಬಿಡಲಾಗಿದೆ. ದೇಶದಲ್ಲಿ ಇತ್ತೀಚೆಗೆ ಕಾಣಿಸಿಕೊಂಡ ದ್ವೇಷ ಮತ್ತು ಅನಾಗರಿಕತೆಯ ಸಂಸ್ಕೃತಿಯು ಅದರ ಪಾತಾಳ ತಲುಪಿದೆ ಎಂಬುದನ್ನು ಇದು ತೋರಿಸುತ್ತದೆ. ಈ ಪ್ರಕರಣದಲ್ಲಿ ಹಲವು ಸೂಕ್ಷ್ಮ ಅಂಶಗಳು ಒಳಗೊಂಡಿವೆ. ಈ ಘಟನೆಯು ಊಹೆಗೂ ಮೀರಿದ ಪರಿಣಾಮಗಳಿಗೆ ಕಾರಣವಾಗಬಹುದು. ಬಿಜೆಪಿಯ ವಕ್ತಾರೆಯಾಗಿದ್ದ ನೂಪುರ್ ಶರ್ಮಾ ಅವರು ಪ್ರವಾದಿ ಮಹಮ್ಮದ್ ಅವರ ಬಗ್ಗೆ ಆಕ್ಷೇಪಾರ್ಹ ಮಾತುಗಳನ್ನು ಆಡಿದ್ದರು. ನೂಪುರ್ ಅವರನ್ನು ಬೆಂಬಲಿಸಿ ಕನ್ನಯ್ಯ ಲಾಲ್ ಎಂಬ ಟೇಲರ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು. ಇಬ್ಬರು ವ್ಯಕ್ತಿಗಳು ಕನ್ನಯ್ಯ ಮೇಲೆ ದಾಳಿ ನಡೆಸಿ, ಅವರ ತಲೆ ಕತ್ತರಿಸಿ, ಈ ಕೃತ್ಯದ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದ್ದಾರೆ. ಅವರಿಬ್ಬರನ್ನೂ ಗುರುತಿಸಿ, ಬಂಧಿಸಲಾಗಿದೆ. ಉದಯಪುರದಲ್ಲಿ ಪರಿಸ್ಥಿತಿ ಪ್ರಕ್ಷುಬ್ಧವಾಗಿದೆ. ಅಲ್ಲಿ ಕರ್ಫ್ಯೂ ಮತ್ತು ಇತರ ನಿರ್ಬಂಧಗಳನ್ನು ಹೇರಲಾಗಿದೆ. ರಾಜಸ್ಥಾನದ ಇತರೆಡೆಗಳಲ್ಲಿ ಮತ್ತು ರಾಜ್ಯದ ಹೊರಗಿನ ಕೆಲವು ಸ್ಥಳಗಳಲ್ಲಿ ಕೂಡ ಪರಿಸ್ಥಿತಿ ಬಿಗುವಿನಿಂದ ಕೂಡಿದೆ. ಹತ್ಯಾ ಕೃತ್ಯವು ಅತ್ಯಂತ ಹೇಯವಾದುದು ಮತ್ತು ಅದನ್ನು ಅತ್ಯಂತ ಕಟುವಾದ ಪದಗಳಲ್ಲಿ ಖಂಡಿಸಬೇಕು. ರಾಜಕೀಯ, ಧರ್ಮ ಮತ್ತು ಸಮುದಾಯಗಳನ್ನೆಲ್ಲ ಮೀರಿ ದೇಶದ ಎಲ್ಲೆಡೆ ಈ ಕೃತ್ಯಕ್ಕೆ ಖಂಡನೆ ಮತ್ತು ಬಲವಾದ ಪ್ರತಿಕ್ರಿಯೆ ವ್ಯಕ್ತವಾಗಿರುವುದು ಸ್ವಾಗತಾರ್ಹ.



**ಈ ಹತ್ಯಾ ಕೃತ್ಯವು ಅತ್ಯಂತ ಹೇಯವಾದುದು ಮತ್ತು ಇದನ್ನು ಅತ್ಯಂತ ಕಟುವಾದ ಪದಗಳಲ್ಲಿ ಖಂಡಿಸಬೇಕು. ಈ ಪ್ರಕರಣದ ತನಿಖೆ ಮತ್ತು ವಿಚಾರಣೆಯು ತ್ವರಿತವಾಗಿ ನಡೆದು, ನ್ಯಾಯದಾನ ಆಗಬೇಕು**

ಖಂಡನೆಯು ಸರಿಯಾದ ಮತ್ತು ನ್ಯಾಯಸಮ್ಮತ ಕ್ರಮ. ಆದರೆ, ಈ ಕೃತ್ಯವನ್ನು ರಾಜಕೀಯಗೊಳಿಸಿ, ರಾಜಕೀಯ, ಕೋಮು ಮತ್ತು ಇತರ ಸಂಕುಚಿತ ಉದ್ದೇಶಕ್ಕೆ ಬಳಸಿಕೊಳ್ಳಬೇಕು ಎಂಬ ಪ್ರಲೋಭನೆಯು ಅತ್ಯಂತ ಕೆಟ್ಟ ರೀತಿಯ ಪ್ರತಿಕ್ರಿಯೆ. ತಲೆ ಕತ್ತರಿಸಿದ ಅಮಾನವೀಯ ಕೃತ್ಯವನ್ನು ಒಂದು ಸಮುದಾಯದ ಮೇಲಿನ ದಾಳಿ ಎಂಬಂತೆಯೋ ಇನ್ನೊಂದು ಸಮುದಾಯದ ಪರವಾಗಿ ನಡೆಸಿದ ಕೃತ್ಯ ಎಂಬಂತೆಯೋ ನೋಡಬಾರದು. ಇದು ಉನ್ಮತ್ತ ಮತ್ತು ವಿಕ್ಷಿಪ್ತ ಮನೋಭಾವದ ಇಬ್ಬರು ನಡೆಸಿದ ಭೀಕರ ಅಪರಾಧ ಕೃತ್ಯ. ಈ ಪ್ರಕರಣದ ತನಿಖೆ ಮತ್ತು ವಿಚಾರಣೆಯು ಅತ್ಯಂತ ತ್ವರಿತವಾಗಿ ನಡೆದು, ನ್ಯಾಯದಾನ ಆಗಬೇಕು. ಕೃತ್ಯದ ಹಿಂದೆ ಪಾಕಿಸ್ತಾನದ ಕೈವಾಡ ಇದೆ ಎಂದು ಹೇಳಲಾಗಿದೆ. ಕೋಮು ನೆಲೆಯಲ್ಲಿ ಧ್ರುವೀಕರಣಗೊಂಡಿರುವ ಭಾರತದ ವ್ಯವಹಾರಗಳಲ್ಲಿ ಮೂಗುತೂರಿಸುವುದು ಆ ದೇಶದ ಚಪಲವಾಗಿದೆ. ಪಾಕಿಸ್ತಾನದ ಕೈವಾಡದ ಬಗ್ಗೆಯೂ ತನಿಖೆ ನಡೆಯಬೇಕು.

ಭೀಕರ ಕೃತ್ಯದ ಚಿತ್ರಗಳು ಮತ್ತು ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿರುವುದು ದುರದೃಷ್ಟಕರ. ಚಿತ್ರಗಳು ಹೀಗೆ ಹರಿದಾಡಿದರೆ, ಅದು ಸಂಘರ್ಷ ಸೃಷ್ಟಿಸುವ ಅಪಾಯ ಇದೆ. ಹಾಗಾಗಿ, ಈ ಚಿತ್ರ ಮತ್ತು ವಿಡಿಯೊಗಳು ಹರಿದಾಡುವುದನ್ನು ಸರ್ಕಾರವು ತಡೆಯಬೇಕು. ಇದು ಕೇಂದ್ರ ಮತ್ತು ರಾಜ್ಯದ ನಡುವಣ ಮೇಲಾಟದ ವಿಚಾರವೂ ಅಲ್ಲ. ರಾಜಕೀಯ ಲಾಭಕ್ಕಾಗಿ ಈ ಕೃತ್ಯವನ್ನು ಬಳಸಿಕೊಳ್ಳಬೇಕು ಎಂಬ ಹಂಬಲವು ರಾಜಕೀಯ ಪಕ್ಷಗಳಲ್ಲಿ ಕಾಣಿಸಿಕೊಳ್ಳಬಹುದು. ರಾಜಸ್ಥಾನ ವಿಧಾನಸಭೆಗೆ ಶೀಘ್ರವೇ ಚುನಾವಣೆ ನಡೆಯಲಿರುವುದರಿಂದ ಇಂತಹ ಅಪಾಯ ಇನ್ನೂ ಹೆಚ್ಚು. ಆದರೆ, ಹಾಗೆ ಮಾಡುವುದನ್ನು ಪ್ರಮಾದ ಎಂದೇ ಪರಿಗಣಿಸಬೇಕಾಗುತ್ತದೆ. ಕೋಮು ಸಂಘರ್ಷ ಮತ್ತು ಹಿಂಸೆಯಿಂದ ದೇಶಕ್ಕೆ ಯಾವ ಲಾಭವೂ ಇಲ್ಲ, ಬದಲಿಗೆ ನಷ್ಟವೇ ಹೆಚ್ಚು. ಹತ್ಯೆಯಿಂದ ಆಗಬಹುದಾದ ಇತರ ಪರಿಣಾಮಗಳನ್ನು ತಡೆಯಲು ಬೇಕಾದ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು. ತಪ್ಪು ದಾರಿಗೆ ಎಳೆಯುವಂತಹ ಮಾಹಿತಿ ಹರಿದಾಡದಂತೆ ಸಂಬಂಧಪಟ್ಟವರು ನೋಡಿಕೊಳ್ಳಬೇಕು. ತೊಂದರೆಗೆ ಕಾರಣವಾಗಬಹುದಾದ ಪ್ರಚೋದನಕಾರಿ ನಡವಳಿಕೆಗೂ ತಡೆ ಒಡ್ಡಬೇಕು.

## ದಿನದ ಟ್ವೀಟ್

### ಖರೀದಿಸುವವರೇ ಮುಖ್ಯಮಂತ್ರಿ!



**ಪ್ರತೀ ಚುನಾವಣೆಯ ನಂತರ ನಾವು ಸದನದಲ್ಲಿ ಸಂಖ್ಯಾಬಲ ಪರೀಕ್ಷಿಸುವ ಬದಲು ಶಾಸಕರ ಹರಾಜು ಪ್ರಕ್ರಿಯೆ ನಡೆಸಬೇಕು. ಅತಿಹೆಚ್ಚಿನ ಸಂಖ್ಯೆಯಲ್ಲಿ ಶಾಸಕರನ್ನು ಖರೀದಿಸಿದವರು ಮುಖ್ಯಮಂತ್ರಿ ಆಗಬೇಕು.**

**ಗೌತಮ್ ಮಾಚಯ್ಯ,** ಪತ್ರಕರ್ತ

## ಕಿಡಿನುಡಿ



**ರಾಜ್ಯದಲ್ಲಿ ಲೋಕಾಯುಕ್ತದಿಂದಾಗಲೀ, ಎಸಿಬಿಯಿಂದಾಗಲೀ ನಡೆದ ದಾಳಿಗಳು ಪ್ರಯೋಜನವಿಲ್ಲ. ಎಸಿಬಿ ಮುಖ್ಯಸ್ಥರನ್ನೇ ಕಳಂಕಿತ ಅಂತ ಹೈಕೋರ್ಟ್ ನ್ಯಾಯಮೂರ್ತಿಗಳೇ ಹೇಳಿದ್ದಾರೆ. ಇದು ನಾಚಿಕೆಗೇಡಿನ ಸಂಗತಿ. ದಾಳಿ ವೇಳೆ ಕೆ.ಜಿ, ರಾಶಿಗಟ್ಟಲೆ ಚಿನ್ನ, ಬೆಳ್ಳಿ ವಶಪಡಿಸಿಕೊಂಡಿರುವುದನ್ನು ತೋರಿಸಲಾಗುತ್ತದೆ. ಆದರೆ, ಭ್ರಷ್ಟ ಅಧಿಕಾರಿಗಳ ಮೇಲೆ ಇಲ್ಲಿಯವರೆಗೆ ಯಾವುದಾದರೂ ಒಂದು ಕ್ರಮ ಆಗಿದೆಯಾ? ಇದು ಈ ರಾಜ್ಯದ ವ್ಯವಸ್ಥೆ.**

**ಎಚ್.ಡಿ. ಕುಮಾರಸ್ವಾಮಿ,** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

## 25 ವರ್ಷಗಳ ಹಿಂದೆ

ಮಂಗಳವಾರ, 1-7-1997

• **ಹಾಂಕಾಂಗ್ ಐತಿಹಾಸಿಕ ಹಸ್ತಾಂತರ**

**ಹಾಂಕಾಂಗ್, ಜೂನ್ 30 (ಪಿಟಿಐ)**– ಬ್ರಿಟಿಷ್ ಆಧಿಪತ್ಯವನ್ನು ಮಧ್ಯರಾತ್ರಿ ಕಳಚಿಕೊಂಡ ಹಾಂಕಾಂಗ್, ಚೀನಾದಲ್ಲಿ ಐಕ್ಯಗೊಂಡಿತು.

156 ವರ್ಷಗಳ ಕಾಲ ಹಾಂಕಾಂಗ್‌ನ ಚುಕ್ಕಾಣಿ ಹಿಡಿದಿದ್ದ ಬ್ರಿಟನ್‌ನ ಜಾಕ್ ಮೆಲ್ಲ ಮೆಲ್ಲನೆ ಕೆಳಗಿಳಿಯುತ್ತಿದ್ದಂತೆಯೇ ಚೀನಾದ ಧ್ವಜ ಮೇಲೇರಿ ಹಾರಾಡತೊಡಗಿತು. ಲಕ್ಷಾಂತರ ಜನ ಹರ್ಷೋದ್ಗಾರಗಳೊಡನೆ ನಲಿದರು. ಈ ಐತಿಹಾಸಿಕ ಹಸ್ತಾಂತರವನ್ನು ಇಡೀ ವಿಶ್ವವೇ ಸ್ವಾಗತಿಸಿತು.

ಉದ್ವೇಗದ ಭಾಷಣದೊಂದಿಗೆ ಅಧಿಕಾರವನ್ನು ಹಾಂಕಾಂಗ್ ಡೆಮೊಕ್ರೆಟಿಕ್ ಪಕ್ಷದ ಮುಖ್ಯಸ್ಥ ಮಾರ್ಟಿನ್ ಲೀ ಬಿಟ್ಟುಕೊಟ್ಟರು. ನಂತರ ನಡೆದ 90 ನಿಮಿಷಗಳ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಚೀನಾ ಬೆಂಬಲಿತ, ಪ್ರಾಂತೀಯ ಶಾಸಕ ಮಂಡಳಿಯ 60 ಸದಸ್ಯರು ಪ್ರಮಾಣ ವಚನ ಸ್ವೀಕರಿಸಿದರು.

• **ಸಿಬಿಐ ನಿರ್ದೇಶಕ ಜೋಗಿಂದರ್ ಹಠಾತ್ ವರ್ಗಾವಣೆ**

**ನವದೆಹಲಿ, ಜೂನ್ 30 (ಪಿಟಿಐ)**– ಮಹತ್ವದ ಬೆಳವಣಿಗೆಯೊಂದರಲ್ಲಿ ಮೇವು ಹಾಗೂ ಹವಾಲ ಸೇರಿದಂತೆ ಹಲವು ಪ್ರಮುಖ ಹಗರಣಗಳ ತನಿಖೆ ನಡೆಸುತ್ತಿದ್ದ ಕೇಂದ್ರ ತನಿಖಾ ದಳದ (ಸಿಬಿಐ) ನಿರ್ದೇಶಕ ಜೋಗಿಂದರ್ ಸಿಂಗ್ ಅವರನ್ನು ಹಠಾತ್ ಆಗಿ ವರ್ಗಾವಣೆ ಮಾಡಲಾಗಿದೆ.

ಸಿಬಿಐನ ವಿಶೇಷ ನಿರ್ದೇಶಕ ಆರ್.ಸಿ. ಶರ್ಮಾ ಅವರನ್ನು ನಿರ್ದೇಶಕರ ಹುದ್ದೆಗೆ ನೇಮಕ ಮಾಡಲಾಗಿದೆ. ನಿವೃತ್ತಿಯ ಅಂಚಿನಲ್ಲಿರುವ ಸಿಂಗ್ ಅವರಿಗೆ ಬಡ್ತಿ ನೀಡಿ ಕೇಂದ್ರ ಗೃಹ ಸಚಿವಾಲಯದ ವಿಶೇಷ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಅಕ್ಟೋಬರ್ ಕೊನೆಯಲ್ಲಿ ಜೋಗಿಂದರ್ ಸಿಂಗ್ ನಿವೃತ್ತಿ ಹೊಂದಲಿದ್ದಾರೆ. ಸಿಂಗ್ ಹನ್ನೊಂದು ತಿಂಗಳ ಹಿಂದೆ ಸಿಬಿಐ ನಿರ್ದೇಶಕರಾಗಿ ನೇಮಕಗೊಂಡಿದ್ದರು.

## 50 ವರ್ಷಗಳ ಹಿಂದೆ

ಶನಿವಾರ, 1-7-1972

• **ಇಂದಿರಾ– ಭುಟ್ಟೊ ನಡುವೆ 40 ನಿಮಿಷ ನೇರ ಚರ್ಚೆ**

**ಸಿಮ್ಲಾ, ಜೂನ್ 30**– ಸಹಾಯಕರ ನೆರವಿಲ್ಲದೆ ಭಾರತದ ಪ್ರಧಾನಿ ಇಂದಿರಾ ಗಾಂಧಿ ಹಾಗೂ ಪಾಕಿಸ್ತಾನದ ಅಧ್ಯಕ್ಷ ಭುಟ್ಟೊ ಅವರಿಬ್ಬರೇ ಇಂದು ಸಂಜೆ ಇಲ್ಲಿಯ ರಾಜಭವನದಲ್ಲಿ ಸುಮಾರು ನಲವತ್ತು ನಿಮಿಷಗಳ ಕಾಲ ಮಾತುಕತೆ ನಡೆಸಿದರು.

ಎರಡೂ ರಾಷ್ಟ್ರಗಳ ನಡುವೆ ಶಾಂತಿ ಹಾಗೂ ಮೈತ್ರಿಯುತ ಬಾಂಧವ್ಯ ಸ್ಥಾಪನೆಗೆ ಕರಡು ಒಪ್ಪಂದ ರಚಿಸುವುದರಲ್ಲಿ ಅಧಿಕಾರಿ ಮಟ್ಟದಲ್ಲಿ ಒಪ್ಪಿಗೆಯಾಗದೇ ನನೆಗುದಿಗೆ ಬಿದ್ದ ಅಂಶಗಳನ್ನು ಅವರಿಬ್ಬರೂ ಚರ್ಚಿಸಿದರೆಂದು ಗೊತ್ತಾಗಿದೆ.

• **ಹಿಂದುಳಿದ ವರ್ಗ ನಿರ್ಧರಿಸುವ ಈಗಿನ ನೀತಿ ಬದಲಾಯಿಸಲು ರಾಜ್ಯ ಸರ್ಕಾರದ ಆಲೋಚನೆ**

**ಬೆಂಗಳೂರು, ಜೂನ್ 30**– ಬಡತನವನ್ನು ಆಧರಿಸಿ, ಹಿಂದುಳಿದ ವರ್ಗದವರನ್ನು ನಿರ್ಧರಿಸುವ ಈಗಿನ ನೀತಿಯನ್ನು ಬದಲಾಯಿಸಿ, ಹಿಂದುಳಿದ ಕೆಲವೊಂದು ಜಾತಿಗಳನ್ನೂ ಹಿಂದುಳಿದ ವರ್ಗದ ಪಟ್ಟಿಗೆ ಸೇರಿಸುವ ಬಗ್ಗೆ ರಾಜ್ಯ ಸರ್ಕಾರ ಯೋಚಿಸುತ್ತಿದೆ.

ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ದಲಿತವೆಂದು ಪರಿಗಣಿಸಲಾಗಿರುವ ಕೆಲವು ಜಾತಿಗಳವರ ಹಲವು ವರ್ಷಗಳ ಒತ್ತಾಯವನ್ನು ಅನುಸರಿಸಿ, ಈ ಬದಲಾವಣೆ ಮಾಡಲು ಉದ್ದೇಶಿಸಿರುವ ಸರ್ಕಾರ, ಹಿಂದುಳಿದ ವರ್ಗಗಳ ಹೊಸ ಪಟ್ಟಿಯೊಂದನ್ನು ರಚಿಸುವ ಬಗ್ಗೆ ಪರಿಶೀಲನೆ ನಡೆಸುತ್ತಿದೆ.

ಪ್ರಶ್ನೋತ್ತರ ಕಾಲದಲ್ಲಿ ಈ ವಿಷಯವನ್ನು ಇಂದು ವಿಧಾನಸಭೆಗೆ ತಿಳಿಸಿದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು 'ಆದಾಯದ ಮೇಲೆ ಹಿಂದುಳಿದ ವರ್ಗದವರನ್ನು ನಿರ್ಧರಿಸುವ ಈಗಿನ ಕ್ರಮದಿಂದ ನ್ಯಾಯ ದೊರೆಯುತ್ತಿಲ್ಲ ಎಂಬ ಕೆಲವು ಜಾತಿಗಳವರ ಮನವಿಗಳನ್ನು ಸರ್ಕಾರ ಮನಗಂಡಿದೆ' ಎಂದರು.

ರಾಷ್ಟ್ರಪತಿ ಭವನ: ಸಂವಿಧಾನಕ್ಕೆ ಸರ್ಕಾರ ಬದ್ಧವಾಗಿರುವಂತೆ ನೋಡಿಕೊಳ್ಳಬೇಕಾದ ಜಾಗೃತ ಸ್ಥಳ

# ರಾಷ್ಟ್ರಪತಿ: ಮಿತಿ ಮತ್ತು ಹೊಣೆ



ಸೀಮೋಲ್ಲಂಘನ

**ಸುಧೀಂದ್ರ ಬುಧ್ಯ**

**ನೂತನ** ರಾಷ್ಟ್ರಪತಿಯನ್ನು ಚುನಾಯಿಸುವ ಪ್ರಕ್ರಿಯೆಗೆ ಚಾಲನೆ ದೊರೆತಿದೆ. ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಷ್ಟ್ರಪತಿ ಹುದ್ದೆಯನ್ನು ಒಂದು ಅಲಂಕಾರಿಕ ಹುದ್ದೆಯನ್ನಾಗಿ ನೋಡಲಾಗುತ್ತದೆ. ಡಾ.ಬಿ.ಆರ್. ಅಂಬೇಡ್ಕರ್ ಅವರು 'ರಾಷ್ಟ್ರಪತಿ ಎಂದರೆ ಸರ್ಕಾರದ ಮುಖ್ಯಸ್ಥರು, ಆದರೆ ಕಾರ್ಯಾಂಗದ ಮುಖ್ಯಸ್ಥರಲ್ಲ. ಅವರು ರಾಷ್ಟ್ರವನ್ನು ಪ್ರತಿನಿಧಿಸುತ್ತಾರೆ, ಆದರೆ ರಾಷ್ಟ್ರವನ್ನು ಆಳುವುದಿಲ್ಲ' ಎಂದು ರಾಷ್ಟ್ರಪತಿ ಹುದ್ದೆಯನ್ನು ವ್ಯಾಖ್ಯಾನಿಸಿದ್ದರು.

ರಾಷ್ಟ್ರಪತಿ ಹುದ್ದೆಗೆ ಚುನಾಯಿತರಾದವರು 'I will preserve, protect and defend the constitution and law of the country' ಎಂದು ಪ್ರತಿಜ್ಞಾವಿಧಿ ಸ್ವೀಕರಿಸುತ್ತಾರೆ. ಅಂದರೆ ಸಂವಿಧಾನ ಮತ್ತು ಕಾನೂನನ್ನು ರಕ್ಷಿಸುವ ಜವಾಬ್ದಾರಿ ರಾಷ್ಟ್ರಪತಿಗಳದ್ದು. ಪ್ರಧಾನಿ ಸೇರಿದಂತೆ ಸಂಪುಟದ ಸಚಿವರು, ಸಂವಿಧಾನ ಮತ್ತು ಕಾನೂನಿಗೆ ಬದ್ಧವಾಗಿ ನಡೆದುಕೊಳ್ಳುವ ಪ್ರಮಾಣ ಮಾತ್ರ ಮಾಡುತ್ತಾರೆ. ಹಾಗಾಗಿ ಸಾಂವಿಧಾನಿಕ ಬಿಕ್ಕಟ್ಟು ಉದ್ಭವಿಸಿದಾಗ, ದೇಶದ ಭದ್ರತೆಗೆ ಸವಾಲು ಎದುರಾದಾಗ, ಆಂತರಿಕ ಪ್ರಕ್ಷುಬ್ಧತೆಯನ್ನು ನಿರ್ವಹಿಸಲು ಸರ್ಕಾರ ಸೋತಾಗ, ರಾಷ್ಟ್ರಪತಿ ತಾತ್ಕಾಲಿಕವಾಗಿ ದೇಶದ ಸಂರಕ್ಷಕರಾಗಿ ಅಧಿಕಾರವನ್ನು ನಿರ್ವಹಿಸಬೇಕಾಗುತ್ತದೆ. ಚುನಾಯಿತ ಸರ್ಕಾರದ ಸಲಹೆಯನ್ನು ರಾಷ್ಟ್ರಪತಿ ಪುರಸ್ಕರಿಸಬೇಕು ಎಂಬುದು ದಿಟವಾದರೂ ಸರ್ಕಾರದ ನಿರ್ಣಯಗಳ ಕುರಿತು ವಿವರಣೆ ಕೇಳುವ ಅಧಿಕಾರವನ್ನು ರಾಷ್ಟ್ರಪತಿ ಹೊಂದಿರುತ್ತಾರೆ. ಹಾಗಾಗಿ ಅದು ಕೇವಲ ಅಲಂಕಾರಿಕ ಹುದ್ದೆಯಲ್ಲ.

ಆದ್ದರಿಂದಲೇ ರಾಷ್ಟ್ರಪತಿ ಸ್ಥಾನದಲ್ಲಿ ತಮಗೆ ನಿಷ್ಠರಾದವರನ್ನು ಕೂರಿಸುವ ಪ್ರಯತ್ನವನ್ನು ಸರ್ಕಾರಗಳು ಮಾಡಿವೆ. ಪ್ರಧಾನಿಗೆ ಅಂಕುಶ ಹಾಕಲು ರಾಷ್ಟ್ರಪತಿ ಹುದ್ದೆಯನ್ನು ಬಳಸಿಕೊಂಡ ನಿದರ್ಶನಗಳಿವೆ. ರಾಷ್ಟ್ರಪತಿ ಭವನದಲ್ಲಿ ಕೂತು ಆ ಹುದ್ದೆಯ ಘನತೆ ಹೆಚ್ಚಿಸಿದವರು ಕೆಲವರಾದರೆ, ಸರ್ಕಾರದ ಕೈಗೊಂಬೆಯಾಗಿ, 'ರಬ್ಬರ್ ಸ್ಟ್ಯಾಂಪ್' ಎನಿಸಿಕೊಂಡ ರಾಷ್ಟ್ರಪತಿಗಳನ್ನೂ ಭಾರತ ಕಂಡಿದೆ.

ಮೌಂಟ್ ಬ್ಯಾಟನ್ ಅವರ ಬಳಿಕ ಗವರ್ನರ್ ಜನರಲ್ ಆಗಿದ್ದ ರಾಜಗೋಪಾಲಾಚಾರಿ ಅವರು ಭಾರತದ ಮೊದಲ ರಾಷ್ಟ್ರಪತಿಯಾಗಬೇಕು ಎಂಬ ಬಯಕೆ ಪ್ರಧಾನಿ ಜವಾಹರಲಾಲ್ ನೆಹರೂ ಅವರಲ್ಲಿತ್ತು. ಆದರೆ ನೆಹರೂ ಅವರ ವೇಗಕ್ಕೆ ತಡೆಯೊಡ್ಡಲು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಬಣವು ಡಾ.ರಾಜೇಂದ್ರ ಪ್ರಸಾದ್ ಅವರನ್ನು ಆ ಹುದ್ದೆಗೆ ಬೆಂಬಲಿಸಿತು.

ಮೊದಲ ಪ್ರಧಾನಿ ಮತ್ತು ಮೊದಲ ರಾಷ್ಟ್ರಪತಿ ನಡುವೆ ಅನೇಕ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಇತ್ತು. 'ಹಿಂದೂ ಕೋಡ್' ಮಸೂದೆಯು ಇಬ್ಬರ ನಡುವಿನ ಭಿನ್ನಾಭಿಪ್ರಾಯವನ್ನು ಜಾಹೀರುಗೊಳಿಸಿತ್ತು. ಆ ಬಗ್ಗೆ ರಾಜೇಂದ್ರ ಪ್ರಸಾದ್ 'ಸಂಸತ್ತಿನಲ್ಲಿ ಮಸೂದೆ ಅಂಗೀಕಾರವಾದರೂ, ಅಂಕಿತ ಹಾಕುವ ಮೊದಲು ಅದರ ಸಾಧಕ ಬಾಧಕಗಳನ್ನು ಪರಿಶೀಲಿಸುವ ಮತ್ತು ಅಭಿಪ್ರಾಯವನ್ನು ಸಂಸತ್ತಿನ ಎದಿರು ಮಂಡಿಸುವ ಹಕ್ಕು ರಾಷ್ಟ್ರಪತಿಗೆ ಇದೆ' ಎಂದು ಪ್ರಧಾನಿಗೆ ಪತ್ರ ಬರೆದಿದ್ದರು. ಅದಕ್ಕೆ ಉತ್ತರಿಸಿದ್ದ ನೆಹರೂ 'ನಿಮ್ಮ ಅಭಿಪ್ರಾಯವು ರಾಷ್ಟ್ರಪತಿ ಹಾಗೂ ಸರ್ಕಾರದ ನಡುವೆ ಸಂಘರ್ಷಕ್ಕೆ ಎಡೆಮಾಡಿಕೊಡುತ್ತದೆ' ಎಂದಿದ್ದರು. ನಂತರ ರಾಷ್ಟ್ರಪತಿ ಮತ್ತು ಪ್ರಧಾನಿಯ ನಡುವೆ ಹಲವು ಪತ್ರಗಳ ವಿನಿಮಯವಾಗಿತ್ತು. ಇಬ್ಬರೂ ತಮ್ಮ ವಾದಕ್ಕೆ ಪೂರಕವಾಗಿ ಬ್ರಿಟಿಷ್ ಸಂಸತ್ತಿನ ಕಾರ್ಯವಿಧಾನವನ್ನು ಉಲ್ಲೇಖಿಸಿದ್ದರು. ಈ ಮೇಧಾವಿ ನಾಯಕರ ನಡುವಿನ ಅಭಿಪ್ರಾಯ ವಿನಿಮಯ ರಾಷ್ಟ್ರಪತಿ ಹುದ್ದೆಯ ಬಾಧ್ಯತೆ ಮತ್ತು ಮಿತಿಗಳನ್ನು ಸ್ಪಷ್ಟಗೊಳಿಸಿತು.

1969ರಲ್ಲಿ ರಾಷ್ಟ್ರಪತಿ ಜಾಕೀರ್ ಹುಸೇನ್ ಅವರ ನಿಧನದ ನಂತರ ನಡೆದ ರಾಷ್ಟ್ರಪತಿ ಚುನಾವಣೆಯು ಮೊದಲ ಬಾರಿಗೆ ಪ್ರತಿಷ್ಠೆಯ ಕಣವಾಯಿತು. ಇಂದಿರಾ ಗಾಂಧಿ ಅವರನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಬಯಸಿದ್ದ ಹಿರಿಯ ನಾಯಕರ 'ಸಿಂಡಿಕೇಟ್' ಸೋಲೊಪ್ಪಿಕೊಳ್ಳಬೇಕಾಯಿತು. ಆ ನಂತರ ರಾಷ್ಟ್ರಪತಿಯಾದ ಫಕ್ರುದ್ದೀನ್‌ಅಲಿಅಹ್ಮದ್‌ಅವರುತುರ್ತುಪರಿಸ್ಥಿತಿಹೇರುವ ಆದೇಶಕ್ಕೆ ಮಧ್ಯರಾತ್ರಿ ಸಹಿ ಮಾಡಿ ವ್ಯಂಗ್ಯಚಿತ್ರಗಳಿಗೆ ವಸ್ತುವಾದರು. ಅಲ್ಲಿಗೆ ರಾಷ್ಟ್ರಪತಿ ಹುದ್ದೆಯ ಘನತೆ 'ರಬ್ಬರ್ ಸ್ಟ್ಯಾಂಪ್' ಮಟ್ಟಕ್ಕಿಳಿದು ಕುಬ್ಜವಾಯಿತು.

ಬಳಿಕ ರಾಷ್ಟ್ರಪತಿಗಳನ್ನು ವಿವಿಧ ರಾಜ್ಯಗಳಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರುವ ಕೆಲಸಕ್ಕಷ್ಟೇ ಬಳಸಿಕೊಳ್ಳಲಾಯಿತು. ಇಂದಿರಾ ಗಾಂಧಿ ಅವರು ಪ್ರಧಾನಿಯಾಗಿದ್ದ, ಸಂಜೀವ ರೆಡ್ಡಿಯವರು ರಾಷ್ಟ್ರಪತಿಯಾಗಿದ್ದ ಅವಧಿಯಲ್ಲಿ ಒಂಬತ್ತು ರಾಜ್ಯಗಳಲ್ಲಿ ರಾಷ್ಟ್ರಪತಿ ಆಡಳಿತ ಹೇರಲಾಗಿತ್ತು. ರಾಜೀವ್ ಗಾಂಧಿ ಪ್ರಧಾನಿಯಾಗುವ ವೇಳೆಗೆ ರಾಷ್ಟ್ರಪತಿಯಾಗಿ ಜೇಲ್ ಸಿಂಗ್ ಇದ್ದರು. ರಾಜೀವ್ ಮತ್ತು ಜೇಲ್ ಸಿಂಗರ 'ಜಗಳ್ಬಂದಿ' ರಾಷ್ಟ್ರಪತಿ ಭವನದ ಇತಿಹಾಸದಲ್ಲಿ ಪ್ರಮುಖ ಅಧ್ಯಾಯವಾಯಿತು.

ಕೆ.ಆರ್. ನಾರಾಯಣನ್ ಅವರು ರಾಷ್ಟ್ರಪತಿ ಭವನ ಪ್ರವೇಶಿಸಿದಾಗ ರಾಷ್ಟ್ರಪತಿ ಭವನ ತನ್ನ ಪ್ರಾಮುಖ್ಯವನ್ನು ಮರಳಿ ಪಡೆಯಿತು. ಅವರು ತಮ್ಮ ಅಭಿಪ್ರಾಯಗಳನ್ನು ಬಹಿರಂಗವಾಗಿ ಹೇಳಲು ಹಿಂಜರಿಯುತ್ತಿರಲಿಲ್ಲ. ಭಾರತಕ್ಕೆ ಭೇಟಿಯಿತ್ತಿದ್ದ ಅಮೆರಿಕ ಅಧ್ಯಕ್ಷ ಬಿಲ್ ಕ್ಲಿಂಟನ್ 'ಭಾರತ ಉಪಖಂಡ ಇಂದು ವಿಶ್ವದ ಅಪಾಯಕಾರಿ ಸ್ಥಳವಾಗಿದೆ ಮತ್ತು ಪರಮಾಣು ಯುದ್ಧಕ್ಕೆ ಕಾಶ್ಮೀರ ಕಾರಣವಾಗಬಹುದು' ಎಂಬರ್ಥದ ಮಾತನ್ನು ಆಡಿದ್ದರು. ರಾಷ್ಟ್ರಪತಿ ಭವನದಲ್ಲಿ ಏರ್ಪಡಿಸಿದ್ದ ಔತಣಕೂಟದ ಭಾಷಣದಲ್ಲಿ ಕ್ಲಿಂಟನ್ ಅವರ ಅಭಿಪ್ರಾಯವನ್ನು ನಾರಾಯಣನ್ ಖಂಡಿಸಿದ್ದರು. ಅಮೆರಿಕದೊಂದಿಗೆ ಉತ್ತಮ ಬಾಂಧವ್ಯ ಹೊಂದಲು ಹವಣಿಸುತ್ತಿದ್ದ ವಾಜಪೇಯಿ ನೇತೃತ್ವದ ಸರ್ಕಾರಕ್ಕೆ ರಾಷ್ಟ್ರಪತಿಗಳ ಮಾತು ಇರಿಸುಮುರಿಸು ತಂದಿತ್ತು. ರಾಷ್ಟ್ರಪತಿಗಳ ಭಾಷಣವನ್ನು ಪ್ರಧಾನಮಂತ್ರಿ ಕಾರ್ಯಾಲಯದ ಗಮನಕ್ಕೆ ತರಲಿಲ್ಲವೇಕೆ ಎಂದು ವಿದೇಶಾಂಗ ಇಲಾಖೆ ಆಕ್ಷೇಪಿಸಿತು. 'ಅವರ ಅಧಿಕಾರದ ವ್ಯಾಪ್ತಿಯಲ್ಲೇ ರಾಷ್ಟ್ರಪತಿ ಮಾತನಾಡಿದ್ದಾರೆ' ಎಂದು ರಾಷ್ಟ್ರಪತಿ ಭವನ ಸಮರ್ಥಿಸಿಕೊಂಡಿತು.



ಎ.ಪಿ.ಜೆ. ಅಬ್ದುಲ್ ಕಲಾಂ ಅವರು ರಾಷ್ಟ್ರಪತಿಯಾಗಿ ಜನರೊಂದಿಗೆ ಹೆಚ್ಚು ಬೆರೆತರು. ಪ್ರತಿಭಾ ಪಾಟೀಲರು ರಾಷ್ಟ್ರಪತಿಯಾದಾಗ ಮತ್ತೊಮ್ಮೆ 'ರಬ್ಬರ್ ಸ್ಟ್ಯಾಂಪ್' ಮೂದಲಿಕೆ ಕೇಳಿಬಂತು. ಪ್ರಣವ್ ಮುಖರ್ಜಿ ಆ ಸ್ಥಾನಕ್ಕೆ ಬಂದಾಗ ರಾಷ್ಟ್ರಪತಿ ಭವನವು ವರ್ಚಸ್ಸನ್ನು ಮರಳಿ ಪಡೆಯಿತು. ಮುಖರ್ಜಿ ತಮ್ಮ ಅಭಿಪ್ರಾಯಗಳನ್ನು ಬಹಿರಂಗವಾಗಿ ಹೇಳಿದರು. ಬಹುತ್ವದ ಕುರಿತು ಮಾತನಾಡಿದರು. ಅಸಹಿಷ್ಣುತೆಯ ವಿರುದ್ಧ ಧ್ವನಿ ಎತ್ತಿದರು. ಆರ್.ಎಸ್.ಎಸ್ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವರು ಹಿಂದೇಟು ಹಾಕಲಿಲ್ಲ. ನಾಗಪುರದಲ್ಲಿ ಹೆಡಗೇವಾರ್ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ, ಗೋಳ್ವಲ್ಕರ್ ಸಮಾಧಿಗೆ ನಮಿಸಿ ರಾಷ್ಟ್ರ, ರಾಷ್ಟ್ರೀಯತೆ ಮತ್ತು ದೇಶಪ್ರೇಮದ ಕುರಿತು ಮುಖರ್ಜಿ ಭಾಷಣ ಮಾಡಿದರು. ಈಗಿನ ರಾಷ್ಟ್ರಪತಿ ರಾಮನಾಥ ಕೋವಿಂದ್ ಈ ಐದು ವರ್ಷಗಳಲ್ಲಿ ರಾಷ್ಟ್ರಪತಿ ಭವನದ ಘನತೆ ಮುಕ್ಕಾಗದಂತೆ ನೋಡಿಕೊಂಡರಾದರೂ, ರಾಷ್ಟ್ರಪತಿ ಭವನದ ಮೌನ ಎದ್ದುಕಂಡಿತು.

ಇದೀಗ ಚುನಾವಣಾ ಕಣದಲ್ಲಿರುವ ದ್ರೌಪದಿ ಮುರ್ಮು ಅವರು ಬುಡಕಟ್ಟು ಜನಾಂಗದ ಹಿನ್ನೆಲೆಯಿಂದ ಬಂದವರು. ಅವರನ್ನು ಕಣಕ್ಕೆ ಇಳಿಸಿರುವ ಎನ್.ಡಿ.ಎಗೆ ತಾನು ಸ್ಥಾನಮಾನ ವಂಚಿತ ಸಮುದಾಯಗಳ ಪರ, ಮಹಿಳೆಯರ ಪರ ಎಂದು ತೋರಿಸಿಕೊಳ್ಳುವ ಬಯಕೆ ಇರಬಹುದು. ಪ್ರತಿಪಕ್ಷಗಳು ಯಶವಂತ ಸಿನ್ಹಾ ಅವರನ್ನು ಅಭ್ಯರ್ಥಿಯಾಗಿಸಿರುವುದರ ಹಿಂದೆ ಅವರು ಪ್ರಸ್ತುತ ಸರ್ಕಾರದ ಕಾರ್ಯವೈಖರಿಯನ್ನು ದೊಡ್ಡ ಧ್ವನಿಯಲ್ಲಿ ಟೀಕಿಸುತ್ತಿರುವವರು, ಊಹೆಗಳನ್ನು ಮೀರಿ ಅವರು ಗೆದ್ದರೆ, ಕೇಂದ್ರ ಸರ್ಕಾರಕ್ಕೆ ಅಂಕುಶ ಹಾಕಬಹುದು ಎಂಬ ಲೆಕ್ಕಾಚಾರ ಇರಬಹುದು. ಅರ್ಹತೆಯ ದೃಷ್ಟಿಯಿಂದ ಇಬ್ಬರೂ ಆಡಳಿತಾತ್ಮಕ ಅನುಭವ ಉಳ್ಳವರು, ಸಂವಿಧಾನ ಮತ್ತು ಕಾನೂನು ತಿಳಿದವರು.

ಆದರೆ ಅದಷ್ಟೇ ಮುಖ್ಯವೇ? ರಾಷ್ಟ್ರಪತಿ ಎಂದರೆ ಬಿರುದು ಬಾವಲಿ ಅಲ್ಲ. ಅದೊಂದು ಸಾಂವಿಧಾನಿಕ ಹುದ್ದೆ. ಅದಕ್ಕೆ ಅದರದ್ದೇ ಆದ ಕರ್ತವ್ಯಗಳನ್ನು ಗುರುತಿಸಲಾಗಿದೆ. ವ್ಯಕ್ತಿಗತ ಹಿನ್ನೆಲೆ, ಸೈದ್ಧಾಂತಿಕ ಒಲವು, ಸಮುದಾಯದ ಪ್ರತಿನಿಧಿತ್ವ ಏನೇ ಇರಲಿ, ರಾಷ್ಟ್ರಪತಿ ಹುದ್ದೆಯಲ್ಲಿ ಕುಳಿತವರು ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ದೇಶದ ಆಗುಹೋಗುಗಳನ್ನು ತೆರೆದ ಕಣ್ಣಿನಿಂದ ಗಮನಿಸುವ, ಸಮಕಾಲೀನ ವಿದ್ಯಮಾನಗಳಿಗೆ ಕಿವಿಗೊಡುವ, ಸರ್ಕಾರ ಎಡವಿದಾಗ ಎಚ್ಚರಿಸುವ ಕೆಲಸ ಮಾಡಬೇಕಾಗುತ್ತದೆ. ಅಷ್ಟಕ್ಕೂ ರಾಷ್ಟ್ರಪತಿ ಭವನ ಎಂದರೆ 340 ಕೊಠಡಿಗಳ ಧ್ಯಾನ ಕೇಂದ್ರವಲ್ಲ, ಕಾನೂನು ಮತ್ತು ಸಂವಿಧಾನಕ್ಕೆ ಸರ್ಕಾರ ಬದ್ಧವಾಗಿರುವಂತೆ ನೋಡಿಕೊಳ್ಳಬೇಕಾದ ಜಾಗೃತ ಸ್ಥಳ. ಕಣದಲ್ಲಿರುವ ಈ ಇಬ್ಬರಲ್ಲಿ ಯಾರು ಗೆದ್ದರೂ, ರಾಷ್ಟ್ರಪತಿ ಭವನವು ಧ್ವನಿ ಉಳಿಸಿಕೊಳ್ಳಬೇಕು. ಅದು ಮುಖ್ಯ.

## ಚುರುಮುರಿ



### ಒಗ್ಗರಣೆ ಸುದ್ದಿ!

• ಬಿ.ಎನ್. ಮಲ್ಲೇಶ್

'ರೀ... ಅರ್ಜೆಂಟ್, ಕೊತ್ತಮರಿ ಸೊಪ್ಪು ಬೇಕಿತ್ತು, ಒಗ್ಗರಣೆ ಮಂಡಕ್ಕಿ ಮೇಲೆ ಉದುರುಸಾಕೆ... ಪಟ್ ಅಂತ ಹೋಗಿ ತರ್ತೀರಾ?'

'ಇರೆ, ನೀನೊಬ್ಳು... ಟೀವಿಲಿ ಮಹಾರಾಷ್ಟ್ರದ ಬಿಗ್ ಬ್ರೇಕಿಂಗ್ ಬರ್ತಿದೆ...'

'ಬೆಳಬೆಳಿಗ್ಗೆ ಅದೇನ್ ನ್ಯೂಸ್ ಹಾಕಿದೀರಿ ತೆಲಿನೋವು... ಎದ್ದುಹೋಗಿ ಅರ್ಧ ಲೀಟರ್ ಹಾಲು ತನ್ನಿ, ಇಲ್ಲಾಂದ್ರೆ ಕಾಫಿ ಇಲ್ಲ...'

'ತಡಿಯೆ, ಬಿಜೆಪಿಯೋರು ಸಂಭ್ರಮ ಆಚರಿಸಿ ಸ್ವೀಟ್ ತಿನ್ನಿಸ್ತಿದಾರೆ...'

'ನಿಮಗೆ ಡಯಾಬಿಟಿಸ್ ಇದೆ, ಸ್ವೀಟ್ ತಿನ್ನಿಸೋದು ನೋಡಿದ್ರೂ ಶುಗರ್ ಜಾಸ್ತಿ ಆಗುತ್ತೆ, ಚಾನೆಲ್ ಚೇಂಜ್ ಮಾಡಿ...'

'ಚೇಂಜ್ ಮಾಡಿದೆ, ಅಯ್ಯಯ್ಯಪ್ಪ ಇದ್ರಲ್ಲಿ ತಲೆ ಕತ್ತರಿಸಿದ ಸುದ್ದಿ ಬರ್ತಿದೆ. 'ಕೊಲೆ ಹೇಗೆ ನಡೀತು ಗೊತ್ತಾ' ಅಂತ ಆ್ಯಂಕರ್ ಕೇಳ್ತಿದಾಳೆ...'

'ಅವಳ ತಲೆ, ಮೊದ್ಲು ಆ ಚಾನೆಲ್ ಚೇಂಜ್ ಮಾಡಿ, ಅಂಥ ಸುದ್ದಿ ನೋಡಿದ್ರೆ ನಿಮ್ ಬೀಪಿ ಏರಿಬಿಡುತ್ತೆ...'

'ಆಯ್ತು, ಇದ್ಯಾವುದೋ ಚಾನೆಲ್‌ನೋರು ಕೊರೊನಾ ಪಿಟೀಲು ಕುಯ್ತಿದಾರಪ್ಪ...'

'ಅದೂ ಬೇಡ, ಬೇರೆ ಹಾಕಿ'

'ಓಕೆ, ಮ್ಯೂಸಿಕ್ ಚಾನೆಲ್ ಹಾಕ್ತೀನಿ, ಅರೆ ಏನಿದು ಎಕ್ಕಾ ಚಕ್ಕಾ ಹಾಡು... ಯಾರೆ ಇವಳು?'

'ಥು ನಿಮ್ಮ, ಬಾಯಿ ಮುಚ್ಕೊಂಡು ಬೇರೆ ಹಾಕಿ, ಇಲ್ಲ ಆಫ್ ಮಾಡಿ...'

'ಅಲ್ಲ ನನ್ನನ್ನೇನು ರಿಮೋಟ್ ಡ್ರೈವರ್ ಅಂದ್ಕಂಡಿದೀಯ? ಒಗ್ಗರಣೆಗೆ ಕೊತ್ತಮರಿ ಬೇಡ್ವಾ?'

'ಆ ಟೀವಿಯೋರು ಹಾಕೋ ಮಾತಿನ ಒಗ್ಗರಣೆ ಮುಂದೆ ನಂದ್ಯಾವ ಲೆಕ್ಕ ಬಿಡಿ, ಆಗ್ಲೇ ಮಂಡಕ್ಕಿ ರೆಡಿ ಆಯ್ತು...'

'ಅಲ್ವೇ, ನಾವು ಟೀವಿ ನೋಡದೆ ಇದ್ರೆ ಅವರ ಟಿಆರ್‌ಪಿ ಏರೋದೆಂಗೆ, ಅವರು ಬದುಕೋದೆಂಗೆ?'

'ಅವರ ಟಿಆರ್‌ಪಿ ಹೆಂಗೋ ಏರುತ್ತೆ, ಆದ್ರೆ ಏರಿದ ನಿಮ್ ಬೀಪಿ ಇಳಿಯಲ್ವಲ್ಲ... ಎದ್ದೋಗಿ ಹಾಲು ತಗಂಡ್ ಬನ್ನಿ...'

ಮಡದಿ ಮಾತು ಮೀರಿ ಉಳಿದೋರುಂಟೆ?

## ಸಂಗತ

# 'ದ್ವಾರಕಾ' ಖ್ಯಾತಿಯ ಶ್ರೇಷ್ಠ ಪುರಾತತ್ತ್ವಜ್ಞ

### ಡಾ.ಎಸ್‌.ಆರ್‌. ರಾವ್ ಅವರ ಜನ್ಮಶತಮಾನೋತ್ಸವದ ಸ್ಮರಣೆ

• ಎಚ್.ಎಸ್. ಗೋಪಾಲ ರಾವ್


**ವಿಶ್ವದ** ಕೆಲವು ಶ್ರೇಷ್ಠ ಪುರಾತತ್ತ್ವಜ್ಞರನ್ನು ಆದ್ಯತೆಯ ಮೇಲೆ ಪಟ್ಟಿ ಮಾಡಿ ಎಂದರೆ, ಅಗ್ರಪಂಕ್ತಿಯಲ್ಲಿ ನಿಲ್ಲುವ ಕೆಲವರಲ್ಲಿ ಕರ್ನಾಟಕದ ಡಾ. ಎಸ್.ಆರ್.ರಾವ್ ಅವರೂ ಒಬ್ಬರು. ಕರ್ನಾಟಕದ ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲುಗಳಲ್ಲಿ ಕಾರ್ಯನಿರ್ವಹಿಸಿದವರಷ್ಟೆ ಅಲ್ಲ; ಭಾರತದ ಪ್ರಮುಖ ಪುರಾತತ್ತ್ವ ನೆಲೆಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿ ಖ್ಯಾತಿ ಪಡೆದವರು. ಅವರು ಭಾರತೀಯರಾಗಿ ಮಾತ್ರವೇ ಉಳಿಯದೆ ವಿಶ್ವಮಾನ್ಯರಾಗಿದ್ದಾರೆ. 2022ರ ಜುಲೈ 1ನೆಯ ತಾರೀಖು ಅವರ ಜನ್ಮಶತಮಾನೋತ್ಸವದ ಸವಿನೆನಪಿನ ದಿನ.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ರಂಗನಾಥ ರಾವ್ ಅವರು ಭಾರತೀಯರಿಗೆ ಮಾತ್ರವಲ್ಲದೆ, ಇಡೀ ವಿಶ್ವಕ್ಕೆ ತಿಳಿದಿರುವುದು ಎಸ್.ಆರ್. ರಾವ್ ಎಂಬ ಹೆಸರಿನಿಂದ. 1922ರ ಜುಲೈ 1ನೆಯ ತಾರೀಖು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಆನಂದಪುರದಲ್ಲಿ ಜನಿಸಿದ ರಾವ್ ಅವರು ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎ (ಆನರ್ಸ್) ಪದವಿಯನ್ನೂ, ನಾಗಪುರ ವಿಶ್ವವಿದ್ಯಾಲಯದಿಂದ ಎಂ.ಎ ಪದವಿಯನ್ನೂ ಪಡೆದರು. ಡಿ.ಲಿಟ್ ಪದವಿಯನ್ನು ಪಡೆದದ್ದು ಮೈಸೂರು ವಿಶ್ವವಿದ್ಯಾಲಯದಿಂದ. ಆರಂಭದಲ್ಲಿ ಹಲವಾರು ಉದ್ಯೋಗಗಳಲ್ಲಿ ತೊಡಗಿಕೊಂಡರೂ, ಬಹಳ ಬೇಗ ಭಾರತೀಯ ಪುರಾತತ್ತ್ವ ಇಲಾಖೆಯಲ್ಲಿ ಉದ್ಯೋಗ ಪಡೆದು, ಅಲ್ಲಿಯೇ ಸುಮಾರು 32 ವರ್ಷಗಳ ಕಾಲ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ, 1980ರಲ್ಲಿ ನಿವೃತ್ತರಾದರು. ಆನಂತರವೂ ಸಾಗರದಾಳದ ಪುರಾತತ್ತ್ವ ಶೋಧನೆಯಲ್ಲಿ ಬಹಳ ವರ್ಷಗಳ ಕಾಲ ಕಾರ್ಯ ನಿರ್ವಹಿಸಿದರು. ಅವರು ನಿಧನರಾದದ್ದು 2013ರ ಜನವರಿ 3ರಂದು.

ಸ್ವಾತಂತ್ರ್ಯಪೂರ್ವದ ಬರೋಡಾ ಸಂಸ್ಥಾನದ ಪುರಾತತ್ತ್ವ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರಾಗಿ ವೃತ್ತಿಜೀವನವನ್ನು ಆರಂಭಿಸಿದ ಅವರು, ಪುರಾತತ್ತ್ವಶಾಸ್ತ್ರ, ಶಾಸನಶಾಸ್ತ್ರ, ನಾಣ್ಯಶಾಸ್ತ್ರಗಳಲ್ಲಿ ತರಬೇತು ಪಡೆದು, ಬರೋಡಾ ಸಂಸ್ಥಾನವು ಭಾರತೀಯ ಗಣರಾಜ್ಯದೊಡನೆ ಸೇರಿದ ನಂತರ, ಭಾರತೀಯ ಪುರಾತತ್ತ್ವ ಇಲಾಖೆಯಲ್ಲಿ ಸಹಾಯಕ ಅಧೀಕ್ಷಕರಾಗಿ ನೇಮಕಗೊಂಡರು. ಆಗಿನಿಂದ 1980ರಲ್ಲಿ ನಿವೃತ್ತರಾಗುವವರೆಗೆ ಇಲಾಖೆಯ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದರು. ನಿವೃತ್ತಿಯ ನಂತರ, ಭಾರತೀಯ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯು ಗೋವಾದಲ್ಲಿ ಸ್ಥಾಪಿಸಿರುವ ಭಾರತೀಯ ಸಾಗರತಳದ ಪುರಾತತ್ತ್ವ ಶೋಧಗಳಲ್ಲಿ ಮುಖ್ಯಸ್ಥರಾಗಿ, ಉತ್ತಮ ಫಲಿತಾಂಶಗಳನ್ನು ನೀಡಿದ್ದಾರೆ.

ವಿದ್ಯಾರ್ಥಿಜೀವನದಲ್ಲಿ ಹಲವು ಪ್ರಶಸ್ತಿಗಳನ್ನು ಪಡೆದ ರಾವ್ ಅವರು, ಭಾರತದಲ್ಲಿನ ಹಲವು ಪ್ರಮುಖ ಉತ್ಖನನಗಳ ನೇತೃತ್ವ ವಹಿಸಿದ್ದಾರೆ. ಹಲವು ಪ್ರಮುಖ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಮಾಡಿದ್ದಾರೆ. ಅವುಗಳಲ್ಲಿ ಉದಾಹರಿಸಲೇಬೇಕಾದ ಕೆಲವು ಕಾರ್ಯಗಳೆಂದರೆ – ತಾಜ್‌ಮಹಲ್‌ನ ತಳಪಾಯ ಮತ್ತು ಕಟ್ಟಡದ ಸಂರಕ್ಷಣೆ, ಅಜಂತಾದಲ್ಲಿನ ಕೆಲವು ಗುಹೆಗಳ ಸಂರಕ್ಷಣೆ, ಎಲ್ಲೋರಾದ ಕೈಲಾಸ ದೇವಾಲಯದ ಸಂರಕ್ಷಣೆ ಇತ್ಯಾದಿಗಳು. ಇವಲ್ಲದೆ ಚಿತ್ತೋರ್‌ಗಡದ ಕೋಟೆ, ಮುಂಬಯಿಯ ಜೋಗೇಶ್ವರಿ, ಪಾತಾಳೇಶ್ವರ, ಕಾರ್ಲೆ, ಎಲಿಫೆಂಟಾ ಗುಹಾಂತರ ದೇವಾಲಯಗಳ ಸಂರಕ್ಷಣೆ, ತಂಜಾವೂರು ಮತ್ತು ಮಹಾಬಲಿಪುರಗಳಲ್ಲಿನ ದೇವಾಲಯಗಳ ಸಂರಕ್ಷಣೆ ಇತ್ಯಾದಿ ಕಾರ್ಯಗಳನ್ನೂ ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ಕರ್ನಾಟಕದ ಐಹೊಳೆ, ಪಟ್ಟದಕಲ್ಲು ಮತ್ತು ಬಾದಾಮಿಗಳಲ್ಲಿನ ಬಾದಾಮಿ ಚಾಲುಕ್ಯರ ಕಾಲದ ಗುಹಾಲಯಗಳು ಮತ್ತು ನಿರ್ಮಿತ ದೇವಾಲಯಗಳ ಸಂರಕ್ಷಣೆ, ಬಳ್ಳಿಗಾವೆ, ಲಕ್ಕುಂಡಿ ಮತ್ತು ಚೌಡದಾನಪುರಗಳಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳ ಸಂರಕ್ಷಣೆಯೂ ಸೇರಿವೆ. ಈ ಪಟ್ಟಿಗೆ ಹಳೆಬೀಡು, ಬೇಲೂರು, ಮೊಸಳೆಯ ಹೊಯ್ಸಳರ ಕಾಲದ ನಿರ್ಮಿತಿಗಳು, ಹಂಪಿಯ ವಿಜಯನಗರ ಕಾಲದ ಸ್ಮಾರಕಗಳೂ ಸೇರುತ್ತವೆ. ಇನ್ನೂ ಅನೇಕ ಸ್ಮಾರಕಗಳನ್ನು ವಿಜಯಪುರ, ಬೀದರ್, ಶ್ರೀರಂಗಪಟ್ಟಣ ಮತ್ತು ಇತರೆಡೆಗಳಲ್ಲಿ ಸಂರಕ್ಷಿಸಿದ್ದಾರೆ. ರಾವ್ ಅವರ ಹೆಸರನ್ನು ಸದಾ ಕಾಲ ನೆನಪಿಸುವ ಕೆಲಸಗಳೆಂದರೆ ಲೋಥಾಲ್, ರಂಗಪುರಗಳಲ್ಲಿ ಅವರಿಂದ ಶೋಧಗೊಂಡ ಹರಪ್ಪೋತ್ತರ ಸಂಸ್ಕೃತಿಯ ಕುರುಹುಗಳು; ಸಾಗರತಳದ ಉತ್ಖನನ, ಶೋಧಗಳಲ್ಲಿ, ಗುಜರಾತ್ ಕರಾವಳಿಯ ಬೇಟ್ ದ್ವಾರಕಾದಲ್ಲಿ ದ್ವಾರಕಾಧೀಶ ಮಂದಿರ ಮತ್ತು ಇತರ ಸ್ಮಾರಕಗಳು.



ಭಾರತೀಯ ಪುರಾತತ್ತ್ವ ಇತಿಹಾಸದಲ್ಲಿ ಇಂದಿಗೂ ಸಂಶೋಧಕರಲ್ಲಿ ಸಹಮತ ಇಲ್ಲದಿರುವಂಥವು ಹರಪ್ಪಾಕಾಲೀನ ಲಿಪಿಗಳು. ಮುದ್ರೆಗಳ ಮೇಲಿರುವ 'ಲಿಪಿ'ಗಳನ್ನು ಎಲ್ಲರೂ ಒಪ್ಪುವಂತೆ ಇನ್ನೂ ಓದಲಾಗಿಲ್ಲ. ಆ ಪ್ರಯತ್ನದಲ್ಲಿ ರಾವ್ ಸ್ವಲ್ಪಮಟ್ಟಿಗೆ ಸಾಫಲ್ಯಪಡೆದಿದ್ದಾರೆ.ವೇದಪೂರ್ವಕಾಲದಸಂಸ್ಕೃತದ ಛಾಯೆಯನ್ನುಹರಪ್ಪಾ ಮುದ್ರೆಗಳ ಮೇಲಿನ ಲಿಪಿಯಲ್ಲಿ ಗುರುತಿಸುವ ಅವರ ಪ್ರಯತ್ನವನ್ನು ಹೆಚ್ಚು ಜನ ವಿದ್ವಾಂಸರು ಒಪ್ಪಿದ್ದಾರೆ ಎಂಬುವುದು ಸಂತೋಷದ ವಿಷಯ. ಈ ಕೆಲಸ ಮುಂದುವರಿದು ಹರಪ್ಪಾ ಲಿಪಿಗಳ ಓದು ಸಾರ್ವತ್ರಿಕವಾಗಿ ಎಲ್ಲ ವಿದ್ವಾಂಸರಿಂದ ಅನುಮೋದನೆಗೊಂಡರೆ ಅದು ಎಸ್.ಆರ್.ರಾವ್ ಅವರಿಗೆ ಸಲ್ಲುವ ಮಹತ್ವದ ಕೊಡುಗೆಯಾಗುತ್ತದೆ.

ಹಲವಾರು ಸಂಘ, ಸಂಸ್ಥೆಗಳೊಡನೆ ನಿಕಟ ಸಂಪರ್ಕ ವಿರಿಸಿಕೊಂಡಿದ್ದ ಅವರನ್ನು ಹಲವಾರು ಪ್ರಶಸ್ತಿಗಳು ಅರಸಿಕೊಂಡು ಬಂದವು. ಇಲಾಖೆಯ ಉತ್ಖನನ, ಸಂರಕ್ಷಣೆ ಇತ್ಯಾದಿಗಳ ವರದಿಗಳಲ್ಲದೆ, ಹತ್ತು ಗ್ರಂಥಗಳನ್ನು ಮತ್ತು ಎಪ್ಪತ್ತಕ್ಕೂ ಹೆಚ್ಚು ಸಂಶೋಧನ ಲೇಖನಗಳನ್ನು ಪ್ರಕಟಿಸಿರುವ ಎಸ್.ಆರ್. ರಾವ್ ಮುಂದಿನ ಪೀಳಿಗೆಗೆ ಉತ್ತಮ ಮಾರ್ಗದರ್ಶಕರಾಗಿ ನಮಗೆ ಒದಗುತ್ತಲೇ ಇರುತ್ತಾರೆ.

## ವಾಚಕರ ವಾಣಿ

### ಪಕ್ಷಾಂತರ: ನಂಬಿಕೆದ್ರೋಹ ತರವಲ್ಲ

ಪಕ್ಷಾಂತರ ನಿಷೇಧ ಕಾಯ್ದೆಗೆ ತಿದ್ದುಪಡಿ ತಂದು ಅದನ್ನು ಬಿಗಿಗೊಳಿಸಬೇಕು ಎಂದು ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಇತ್ತೀಚೆಗೆ ಅಭಿಪ್ರಾಯಪಟ್ಟಿದ್ದಾರೆ. ಬಲಿಷ್ಠ ಆಡಳಿತ ಪಕ್ಷವು ಪ್ರಾದೇಶಿಕ ಪಕ್ಷಗಳನ್ನು ಮತ್ತು ಕಾಂಗ್ರೆಸ್ ಪಕ್ಷವನ್ನು ನಿರ್ಮೂಲನೆ ಮಾಡಲು ಹಟ ತೊಟ್ಟಂತೆ ಪರೋಕ್ಷವಾಗಿ ಆಪರೇಷನ್ ಕಮಲ ಮಾಡಹೊರಟಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಮುಂದೊಂದು ದಿನ ತನಗೇ ಇದು ತಿರುಗುಬಾಣ ಆಗಬಹುದು.

ಮಹಾರಾಷ್ಟ್ರದಲ್ಲಿ ನಡೆಯುತ್ತಿರುವ ರಾಜಕೀಯ ವಿದ್ಯಮಾನಗಳು ಮುಂದಿನ ಭೀಕರತೆಯನ್ನು ತೋರಿಸುತ್ತಿವೆ. ಒಂದು ಪಕ್ಷದಿಂದ ಆರಿಸಿಬಂದ ಜನಪ್ರತಿನಿಧಿಯು ಪಕ್ಷನಿಷ್ಠೆ ಮರೆತು ಅಧಿಕಾರದಾಹಕ್ಕಾಗಿ ಇನ್ನೊಂದು ಪಕ್ಷಕ್ಕೆ ಹಾರುವುದನ್ನು ತಪ್ಪಿಸಬೇಕು. ಚುನಾವಣೆಗೆ ಮೊದಲು ಪಕ್ಷ ತೊರೆಯಲಿ, ಆದರೆ ಗೆದ್ದ ನಂತರ ತಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ ಜನರಿಗೆ, ಪಕ್ಷಕ್ಕೆ ನಂಬಿಕೆದ್ರೋಹ ಮಾಡುವುದು ಉಚಿತವಲ್ಲ.

**ಮಲ್ಲತ್ತಹಳ್ಳಿ ಡಾ.ಎಚ್.ತುಕಾರಾಂ,** ಬೆಂಗಳೂರು

### ಭಾವೈಕ್ಯವಿದ್ದಲ್ಲಿ... ಮಧುರ ಮೈತ್ರಿ

'ನಮ್ಮ ಧರ್ಮ ದೊಡ್ಡದು, ನಿಮ್ಮ ಧರ್ಮ ಸಂಕುಚಿತವಾದದ್ದು' ಎಂದು ಅವರು ಹೆಮ್ಮೆಯಿಂದ ಎದೆತಟ್ಟಿ ಹೇಳಿಕೊಳ್ಳುತ್ತಾರೆ. 'ಇಲ್ಲ, ಇಲ್ಲ. ಅದೆಲ್ಲಾ ಸುಳ್ಳು. ನಮ್ಮ ಧರ್ಮ ಹಿರಿದು; ನಿಮ್ಮ ಧರ್ಮ ಕಿರಿದು' ಎಂದು ಇವರು ಟೀಕಿಸುತ್ತಾರೆ. ಯಾವ ಧರ್ಮವೂ ತನ್ನಷ್ಟಕ್ಕೆ ತಾನೇ ಶ್ರೇಷ್ಠವಲ್ಲ, ಯಾವ ಧರ್ಮವೂ ಕೀಳಲ್ಲ! ಇದು ಪರಸ್ಪರ ದೋಷಾರೋಪಣೆ, ನಂಜಿನ ನಾಲಗೆ ಆಡುವ ಮಾತು. ಎಲುಬಿಲ್ಲದ ನಾಲಗೆ ಏನನ್ನಾದರೂ ಹೇಳುತ್ತದೆ!

ಅವನನ್ನು ಇರಿ, ಇವನನ್ನು ಕೊಚ್ಚು, ಕೊಲ್ಲು, ಇವನನ್ನು ಬೆಂಡೆತ್ತು, ಮೂಳೆ ಮುರಿ, ಸಾಯಿಬಡಿ– ಇಂಥಾವೆಲ್ಲಾ ಎಷ್ಟು ಸರಿ? ಹಿಂದೆ ಚರಿತ್ರೆಯಲ್ಲಿ ಆಗಿಹೋಗಿದ್ದು ಆಗಿಹೋಗಿದೆ. ಘಟಿಸಿದೆ, ಗತಿಸಿದೆ. ನೀನಲ್ಲದಿದ್ದರೆ ನಿಮ್ಮಪ್ಪನೋ, ನಿಮ್ಮಜ್ಜನೋ ಹೀಗೆ ಮಾಡಿದ್ದಾನೆಂದು ಈಗ ಪ್ರತೀಕಾರ ತೀರಿಸಿಕೊಳ್ಳಲು ಹೊರಟರೆ ರಣರಂಗವಾಗುತ್ತದೆ ನಮ್ಮ ಬದುಕು. ಅದರಿಂದ ಯಾರಿಗೂ ಲಾಭವಿಲ್ಲ. ಯಾವ ಮತಕ್ಕೂ ಏಳಿಗೆಯಿಲ್ಲ. ತನ್ಮೂಲಕ ಯಾವ ಧರ್ಮವೂ ಶ್ರೇಷ್ಠ ಆಗುವುದಿಲ್ಲ. ಇದು ಖಂಡಿತ. ಅದರಿಂದ ಎರಡೂ ಕಡೆ ಪರಸ್ಪರ ಸಂಘರ್ಷವಾಗಿ ನೆಮ್ಮದಿಯ ಬಾಳು ಹಾಳಾಗುತ್ತದೆ.

ಐದು ಸಾವಿರ ವರ್ಷಗಳ ಅಖಂಡ ಹಿರಿಮೆ ಹೊಂದಿದ ಭಾರತ ಮಲಿನವಾಗುವುದೇನು ಚೆಂದ? ರಾಮ, ರಹೀಮಾ ಎಲ್ಲಾ ಒಂದೇ. ಅದೇ ಮೈತ್ರಿ ಬಂಧ! ಸರಿದು ಹೋಗುವ ಕಾಲ ಎಲ್ಲಕ್ಕೂ ಸಾಕ್ಷೀಭೂತ ಸತ್ಯವಾಗಿದೆ. ಜಾಗೃತಿ ಎಲ್ಲ ಧರ್ಮಗಳಲ್ಲೂ ನಿತ್ಯವಾಗಿದೆ. ಹೀಗಿರುವಾಗ ಹೊಡೆದಾಟವೇಕೆ? ನಮಗೆ ಬಡಿದಾಟವೇಕೆ?

**ದೊಡ್ಡರಂಗೇಗೌಡ,** ಬೆಂಗಳೂರು

### ಅನಗತ್ಯ ಕಿರಿಕಿರಿ ತಪ್ಪಬಹುದು

ಎಂಟು ದಿನಗಳ ತೀವ್ರ ಗುದ್ದಾಟದಲ್ಲಿ ಕೊನೆಗೂ ಏಕನಾಥ ಶಿಂಧೆ ನೇತೃತ್ವದ ಬಂಡಾಯ ಶಾಸಕರ ತಂಡವು ಮಹಾರಾಷ್ಟ್ರದ ಮಹಾ ವಿಕಾಸ ಆಘಾಡಿ ಸರ್ಕಾರವನ್ನು ಪತನಗೊಳಿಸುವಲ್ಲಿ ಯಶಸ್ವಿಯಾಗಿದೆ. ಮಹಾರಾಷ್ಟ್ರದ ಈಗಿನ ವಿದ್ಯಮಾನಕ್ಕೂ ಕರ್ನಾಟಕದಲ್ಲಿ 2019ರಲ್ಲಿ ನಡೆದ ಪ್ರಹಸನಕ್ಕೂ ಅನೇಕ ಸಾಮ್ಯತೆಗಳಿವೆ. ಅಸಮಾಧಾನಗೊಂಡ ಶಾಸಕರ ಸಂಖ್ಯೆ, ರೆಸಾರ್ಟ್‌ನಲ್ಲಿ ಕಳೆದ ದಿನಗಳು ಬಿಟ್ಟರೆ ಎರಡೂ ರಾಜ್ಯಗಳು ಕಂಡ ಫಲಿತಾಂಶ ಒಂದೇ ರೀತಿಯದ್ದು.

ಇದೀಗ, ಶಿಂಧೆ ಅವರೇ ಚುಕ್ಕಾಣಿ ಹಿಡಿದಿದ್ದಾರೆ. ಕಹಿ ಪ್ರಸಂಗಗಳನ್ನು ಮರೆತು, ಆಡಳಿತಕ್ಕೆ ಚುರುಕು ಮುಟ್ಟಿಸುವ ಕೆಲಸ ನಡೆಯಲಿ. ಮಹಾರಾಷ್ಟ್ರದಲ್ಲಿ ಮಹಾ ವಿಕಾಸ್ ಆಘಾಡಿ ಅಧಿಕಾರಕ್ಕೆ ಬಂದ ನಂತರ ಬೆಳಗಾವಿ ವಿಷಯದಲ್ಲಿ ಅನಗತ್ಯ ಕಿರಿಕಿರಿ ಹೆಚ್ಚಾಗಿತ್ತು. ಸರ್ಕಾರದಲ್ಲಿ ಈಗ ಬಿಜೆಪಿ ಪಾಲುದಾರ ಪಕ್ಷ ಆಗಿರುವುದರಿಂದ ಈ ಕಿರಿಕಿರಿ ನಿವಾರಣೆ ಆಗಬಹುದು. ಏಕೆಂದರೆ, ಎರಡೂ ಕಡೆ ಅದೇ ಪಕ್ಷ ಆಡಳಿತದಲ್ಲಿ ಇರುವುದರಿಂದ ತಕರಾರು ಸಹಜವಾಗಿಯೇ ತಪ್ಪಬಹುದು.

**ಮಣಿಕಂಠ ಪಾ. ಹಿರೇಮಠ,** ಚವಡಾಪೂರ

### ಗ್ರಾಮ ಅರಣ್ಯ ಸಮಿತಿ: ಅನುದಾನ ಬೇಕು

ಪ್ರತೀ ಗ್ರಾಮದಲ್ಲಿ ಇಲ್ಲವೇ ಮೂರು– ನಾಲ್ಕು ಗ್ರಾಮಗಳಿಗೊಂದು ಗ್ರಾಮ ಅರಣ್ಯ ಸಮಿತಿ ರಚಿಸಬೇಕು. 20– 30 ವರ್ಷಗಳ ಹಿಂದೆ ರಚಿಸಿದ ಗ್ರಾಮ ಅರಣ್ಯ ಸಮಿತಿಗಳು ಅಸ್ತಿತ್ವದಲ್ಲಿದ್ದರೂ, ಅರಣ್ಯ ಇಲಾಖೆಯ ಸಹಯೋಗ ಇಲ್ಲದಿರುವುದು ಕಂಡುಬರುತ್ತದೆ. ಸರ್ಕಾರವು ವಾರ್ಷಿಕ ಆಯವ್ಯಯದಲ್ಲಿ ಗ್ರಾಮ ಅರಣ್ಯ ಸಮಿತಿಗಳಿಗೆ ಸಮರ್ಪಕವಾಗಿ ಅನುದಾನ ಘೋಷಿಸದೇ ಇರುವುದು ಅರಣ್ಯಾಭಿವೃದ್ಧಿಗೆ ಅಡ್ಡಿಯಾಗಿದೆ.

ರಾಜ್ಯದ ಅರಣ್ಯ ಸಚಿವ ಉಮೇಶ ಕತ್ತಿ ಅವರು ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಗ್ರಾಮ ಅರಣ್ಯ ಸಮಿತಿಗಳ ಸ್ಥಿತಿಗತಿ ಬಗ್ಗೆ ವಿಶೇಷ ಸಭೆ ಕರೆದು ಚರ್ಚಿಸಬೇಕು. ನಿರ್ದಿಷ್ಟ ಮೊತ್ತದ ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಬೇಕು. ಆ ಮೂಲಕ ಗ್ರಾಮ ಅರಣ್ಯ ಸಮಿತಿಗಳ ಪುನಶ್ಚೇತನಕ್ಕೆ ಒತ್ತು ನೀಡಬೇಕು.

**ಎಸ್.ಎನ್.ಅಮೃತ,** ಪುತ್ತೂರು

### ಮೂತ್ರಪಿಂಡ ಸಮಸ್ಯೆ: ನೆರವಿಗೆ ಮನವಿ

ಬೆಂಗಳೂರಿನ ನಾಗಸಂದ್ರದ ನಿವಾಸಿ, ಎಂಜಿನಿಯರಿಂಗ್‌ನ ಅಂತಿಮ ವರ್ಷದ ವಿದ್ಯಾರ್ಥಿ ಎಚ್.ಎಂ. ದಿನೇಶ್‌ಗೆ ಎರಡೂ ಮೂತ್ರಪಿಂಡಗಳಲ್ಲಿ ಸಮಸ್ಯೆಯಾಗಿದ್ದು, ಚಿಕಿತ್ಸೆ ಕೊಡಿಸಲು ಕುಟುಂಬಕ್ಕೆ ಆರ್ಥಿಕ ಸಂಕಷ್ಟ ಎದುರಾಗಿದೆ. ದಿನೇಶ್ ರ್‍ಯಾಂಕ್ ವಿದ್ಯಾರ್ಥಿ. ಅವರ ತಂದೆ ಮಂಜುನಾಥ್ ನಿಧನರಾಗಿದ್ದು, ತಾಯಿ ರಾಧಮ್ಮ ಗಾರ್ಮೆಂಟ್ಸ್‌ನಲ್ಲಿ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದಾರೆ.

ಕಡುಬಡತನದಿಂದ ಮಗನಿಗೆ ಚಿಕಿತ್ಸೆ ಕೊಡಿಸಲು ಸಾಧ್ಯವಾಗುತ್ತಿಲ್ಲ. ತೀವ್ರತರವಾದ ಮೂತ್ರಪಿಂಡ ಸಮಸ್ಯೆಗೆ ಒಳಗಾಗಿದ್ದು ಚಿಕಿತ್ಸೆಗೆ ಅಂದಾಜು ₹ 6 ಲಕ್ಷ ಅಗತ್ಯವಿದೆ. 15 ದಿನಗಳ ಒಳಗೆ ಚಿಕಿತ್ಸೆ ಕೊಡಿಸಬೇಕಿದೆ. ಡಯಾಲಿಸಿಸ್‌ಗೆ ಈಗಾಗಲೇ ಬಹಳಷ್ಟು ಹಣ ವ್ಯಯವಾಗಿದೆ. ದಾನಿಗಳು ನೆರವು ನೀಡಿದರೆ ಸಹಾಯವಾಗಲಿದೆ. ಬ್ಯಾಂಕ್ ಖಾತೆ ಸಂಖ್ಯೆ: 20476957934, ಐಎಫ್‌ಎಸ್ ಕೋಡ್: SBIN0010369, ಬಿಇಎಲ್ ಫ್ಯಾಕ್ಟರಿ ಕ್ಯಾಂಪಸ್ ಶಾಖೆ, ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು. ಸಂಪರ್ಕ ಸಂಖ್ಯೆ: 9844392984.

**ಮೇರಿಯಮ್ಮ,** ದಲಿತ ಕ್ರಿಶ್ಚಿಯನ್ ಅಸೋಸಿಯೇಷನ್, ಬೆಂಗಳೂರು

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.  To know more about The Printers (Mysore) Private Ltd, visit www.printersmysore.com.

# ದೇಶದ ಎಲ್ಲೆಲ್ಲೂ 'ಆಪರೇಷನ್ ಕಮಲ'


ಮಹಾರಾಷ್ಟ್ರದಲ್ಲಿ ಅಸ್ತಿತ್ವದಲ್ಲಿ ಇದ್ದ ಶಿವಸೇನಾ, ಎನ್‌ಸಿಪಿ ಮತ್ತು ಕಾಂಗ್ರೆಸ್ ಮೈತ್ರಿಯ ಮಹಾ ವಿಕಾಸ ಆಘಾಡಿ ಸರ್ಕಾರವು ಪತನವಾಗಿದೆ. ಶಿವಸೇನಾದ ಬಹುಸಂಖ್ಯಾತ ಶಾಸಕರ ಬೆಂಬಲ ಹೊಂದಿರುವ ಏಕನಾಥ ಶಿಂಧೆ ನಾಯಕತ್ವದಲ್ಲಿ ಹೊಸ ಸರ್ಕಾರ ರಚನೆಯಾಗಿದೆ. ವಿಧಾನಸಭೆ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ದೊರೆಯದಿದ್ದರೂ 'ಆಪರೇಷನ್ ಕಮಲ' ಮೂಲಕ (ಬೇರೆ ಪಕ್ಷಗಳ ಶಾಸಕರನ್ನು ಬಿಜೆಪಿಗೆ ಸೆಳೆದುಕೊಂಡು ಬಹುಮತ ಸೃಷ್ಟಿ) ಬಿಜೆಪಿ ಹಲವು ರಾಜ್ಯಗಳ ಆಡಳಿತ ಚುಕ್ಕಾಣಿ ಹಿಡಿದಿದೆ. ಮೊತ್ತ ಮೊದಲಿಗೆ, ಕರ್ನಾಟಕದಲ್ಲಿ 2008ರಲ್ಲಿ ಬಿ.ಎಸ್. ಯಡಿಯೂರಪ್ಪ ಅವರು 'ಆಪರೇಷನ್ ಕಮಲ' ಮಾದರಿಯನ್ನು ಆರಂಭಿಸಿದ್ದರು. ನಂತರ ವಿವಿಧ ರಾಜ್ಯಗಳಲ್ಲಿ ಈ ತಂತ್ರ ಬಳಸಿ ಬಿಜೆಪಿಯೇತರ ಸರ್ಕಾರಗಳನ್ನು ಉರುಳಿಸಲಾಗಿದೆ. ಕೆಲವೆಡೆ ಫಲಿತಾಂಶ ಬರುತ್ತಿದ್ದಂತೆಯೇ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಪಕ್ಷದ ಶಾಸಕರು, ಪ್ರಾದೇಶಿಕ ಪಕ್ಷಗಳ ಶಾಸಕರು ಮತ್ತು ಪಕ್ಷೇತರ ಶಾಸಕರನ್ನು ತನ್ನತ್ತ ಸೆಳೆದು ಬಿಜೆಪಿ ಸರ್ಕಾರ ರಚಿಸಿದೆ. ಕರ್ನಾಟಕ, ಮಧ್ಯಪ್ರದೇಶ, ಅರುಣಾಚಲ ಪ್ರದೇಶ, ಮಹಾರಾಷ್ಟ್ರದಲ್ಲಿ ಅಸ್ತಿತ್ವದಲ್ಲಿದ್ದ ಬೇರೆ ಪಕ್ಷಗಳು/ಮೈತ್ರಿಕೂಟಗಳ ಸರ್ಕಾರವನ್ನು ಉರುಳಿಸಿ ಸರ್ಕಾರ ರಚಿಸಿದೆ. ರಾಜಸ್ಥಾನದಲ್ಲಿ ಬಿಜೆಪಿ ನಡೆಸಿದ ಇಂತಹದ್ದೇ ಪ್ರಯತ್ನ ಫಲ ನೀಡಲಿಲ್ಲ

ಕಾಂಗ್ರೆಸ್ | ಬಿಜೆಪಿ | ಎನ್‌ಪಿಪಿ | ಪಕ್ಷೇತರ ಶಾಸಕರು | ಎಂಜಿಪಿ | ಜಿಎಫ್‌ಪಿ | ಬಿಎಸ್‌ಪಿ | ಎಸ್‌ಪಿ | ಶಿವಸೇನಾ | ಇತರೆ | ಜೆಡಿಎಸ್

## ಮಹಾರಾಷ್ಟ್ರ

ಚುನಾವಣಾಪೂರ್ವ ಮೈತ್ರಿಯೊಂದಿಗೆ 2019ರ ಮಹಾರಾಷ್ಟ್ರ ವಿಧಾನಸಭಾ ಚುನಾವಣಾ ಕಣಕ್ಕೆ ಧುಮುಕಿದ್ದ ಬಿಜೆಪಿ ಹಾಗೂ ಶಿವಸೇನಾ ಮಧ್ಯೆ ಸರ್ಕಾರ ರಚನೆಗೆ ಒಮ್ಮತ ಮೂಡಲಿಲ್ಲ. ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡುವಂತೆ ಶಿವಸೇನಾ ಪಟ್ಟು ಹಿಡಿಯಿತು. ಇದಕ್ಕೆ ಒಪ್ಪದ ಬಿಜೆಪಿ, ಎನ್‌ಸಿಪಿ ಮುಖಂಡ ಅಜಿತ್ ಪವಾರ್ ಅವರ ಬೆಂಬಲದೊಂದಿಗೆ ತರಾತುರಿಯಲ್ಲಿ ಸರ್ಕಾರ ರಚನೆಗೆ ಮುಂದಾಯಿತು. ಮುಖ್ಯಮಂತ್ರಿಯಾಗಿ ದೇವೇಂದ್ರ ಫಡಣವೀಸ್ ಹಾಗೂ ಉಪಮುಖ್ಯಮಂತ್ರಿಯಾಗಿ ಅಜಿತ್ ಪವಾರ್ ಪ್ರಮಾಣವಚನ ಸ್ವೀಕರಿಸಿದರು. ಆದರೆ ಎನ್‌ಸಿಪಿ ಬೆಂಬಲ ಸಿಗದೇ ಸರ್ಕಾರ ಪತನವಾಯಿತು.


ಅಖಾಡಕ್ಕೆ ಇಳಿದ ಎನ್‌ಸಿಪಿ ವರಿಷ್ಠ ಶರದ್ ಪವಾರ್, ಶಿವಸೇನಾ–ಎನ್‌ಸಿಪಿ–ಕಾಂಗ್ರೆಸ್ ಮೈತ್ರಿಕೂಟ ರಚಿಸಿದರು. ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಎರಡೂವರೆ ವರ್ಷಗಳ ಬಳಿಕ ಶಿವಸೇನಾ ನಾಯಕ ಏಕನಾಥ ಶಿಂಧೆ ಅವರು ಪಕ್ಷದ ವಿರುದ್ಧ ಬಂಡಾಯ ಸಾರಿದ್ದರಿಂದ, ಠಾಕ್ರೆ ಸರ್ಕಾರ ಪತನವಾಗಿದ್ದು, ಮತ್ತೆ ಬಿಜೆಪಿ ನೇತೃತ್ವದ ಸರ್ಕಾರ ರಚನೆಯಾಗಿದೆ. ಶಿವಸೇನಾ ಪಕ್ಷವನ್ನು ಎರಡು ಹೋಳಾಗಿಸುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಶಿಂಧೆ ಅವರಿಗೆ ಸೇನಾದ 39 ಶಾಸಕರ ಬೆಂಬಲ ಇದೆ. ಶಿವಸೇನಾ ಮುಖ್ಯಸ್ಥ ಉದ್ಧವ್ ಜತೆಯಲ್ಲಿ ಕೆಲವೇ ಶಾಸಕರು ಮಾತ್ರ ಉಳಿದಿದ್ದಾರೆ.




## ಗೋವಾ

ಗೋವಾ ವಿಧಾನಸಭೆಗೆ 2017ರಲ್ಲಿ ನಡೆದಿದ್ದ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತ ಬಂದಿರಲಿಲ್ಲ. 40 ಸ್ಥಾನಗಳ ವಿಧಾನಸಭೆಯಲ್ಲಿ ಸರಳ ಬಹುಮತಕ್ಕೆ 21 ಸ್ಥಾನಗಳ ಅಗತ್ಯವಿತ್ತು. 17 ಸ್ಥಾನಗಳನ್ನು ಗೆದ್ದಿದ್ದ ಕಾಂಗ್ರೆಸ್ ಅತ್ಯಂತ ದೊಡ್ಡ ಪಕ್ಷವಾಗಿದ್ದರೆ, 13 ಕ್ಷೇತ್ರಗಳಲ್ಲಿ ಆರಿಸಿ ಬಂದಿದ್ದ ಬಿಜೆಪಿ ಎರಡನೇ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು.

ಸರ್ಕಾರ ರಚಿಸಲು ಕಾಂಗ್ರೆಸ್‌ಗೆ ನಾಲ್ಕು ಶಾಸಕರ ಬೆಂಬಲದ ಕೊರತೆ ಇತ್ತು. ಬಿಜೆಪಿಗೆ ಎಂಟು ಶಾಸಕರ ಕೊರತೆ ಇತ್ತು. ಆದರೆ ತಲಾ ಮೂರು ಸ್ಥಾನಗಳಲ್ಲಿ ಆರಿಸಿ ಬಂದಿದ್ದ ಎಂಜಿಪಿ, ಜಿಎಫ್‌ಪಿ ಪಕ್ಷಗಳ ಬೆಂಬಲವನ್ನು ಬಿಜೆಪಿ ಪಡೆಯಿತು. ಜತೆಗೆ ಪಕ್ಷೇತರರ ಬೆಂಬಲ ಪಡೆದು ಸರ್ಕಾರ ರಚಿಸಿತು. 2022ರಲ್ಲಿ ವಿಧಾನಸಭೆಯ ಅವಧಿ ಮುಗಿಯುವಷ್ಟರಲ್ಲಿ ಕಾಂಗ್ರೆಸ್ ಮತ್ತು ಎಲ್ಲಾ ರಾಜಕೀಯ ಪಕ್ಷಗಳ ಶಾಸಕರಲ್ಲಿ ಹಲವರು ಬಿಜೆಪಿ ಸೇರಿದ್ದರು. 2022ರ ಚುನಾವಣೆಯ ಹೊತ್ತಿಗೆ ಗೋವಾ ವಿಧಾನಸಭೆಯಲ್ಲಿ ಬಿಜೆಪಿಯ ಸ್ವಂತ ಬಲ 27ಕ್ಕೆ ಏರಿತ್ತು. 17 ಸ್ಥಾನಗಳಲ್ಲಿ ಗೆದ್ದಿದ್ದ ಕಾಂಗ್ರೆಸ್‌ನ 15 ಶಾಸಕರು ಪಕ್ಷ ಬದಲಿಸಿದ್ದರು. ಕಾಂಗ್ರೆಸ್‌ನ ಬಲ ಎರಡಕ್ಕೆ ಕುಸಿದಿತ್ತು. 2022ರ ಚುನಾವಣೆಯಲ್ಲಿ ಬಿಜೆಪಿಯ ಸ್ಪಷ್ಟ ಬಹುಮತದೊಂದಿಗೆ ಸರ್ಕಾರ ರಚಿಸಿತು.





## ಅರುಣಾಚಲ ಪ್ರದೇಶ

ಅರುಣಾಚಲ ಪ್ರದೇಶ ವಿಧಾನಸಭೆಯಲ್ಲಿ 60 ಸ್ಥಾನಗಳಿದ್ದು, ಸ್ಪಷ್ಟ ಬಹುಮತಕ್ಕೆ 31 ಸದಸ್ಯಬಲದ ಅಗತ್ಯವಿದೆ. 2014ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 44 ಸ್ಥಾನಗಳಲ್ಲಿ ಆರಿಸಿ ಬಂದು ಸರ್ಕಾರ ರಚಿಸಿತ್ತು. ಸರ್ಕಾರ ರಚನೆಯಾದ ಕೆಲವೇ ತಿಂಗಳಲ್ಲಿ ಕಾಂಗ್ರೆಸ್ ಶಾಸಕ ಪೆಮಾ ಖಂಡು ಪಕ್ಷವನ್ನು ತೊರೆದು ಪಿಪಿಎ ಎಂಬ ಹೊಸ ಪಕ್ಷವನ್ನು ಸ್ಥಾಪಿಸಿದ್ದರು. ಅವರ ಜತೆಯಲ್ಲಿ ಕಾಂಗ್ರೆಸ್‌ನಿಂದ ಹೊರನಡೆದಿದ್ದ ಕೆಲವು ಶಾಸಕರೊಂದಿಗೆ ಬಿಜೆಪಿ ನೇತೃತ್ವದ 'ಎನ್‌ಇಡಿಎ' ಮೈತ್ರಿಕೂಟವನ್ನು ಸೇರಿದರು.

2016ರ ಜುಲೈನಲ್ಲಿ ಮತ್ತದೇ ಶಾಸಕರೊಂದಿಗೆ ಕಾಂಗ್ರೆಸ್‌ಗೆ ವಾಪಸಾದ ಖಂಡು ಮುಖ್ಯಮಂತ್ರಿ ಹುದ್ದೆ ಪಡೆಯುವಲ್ಲಿ ಯಶಸ್ವಿಯಾದರು. ಆದರೆ ಅದೇ ಸೆಪ್ಟೆಂಬರ್‌ನಲ್ಲಿ ಕಾಂಗ್ರೆಸ್‌ನಲ್ಲಿದ್ದ 44 ಶಾಸಕರ ಪೈಕಿ 43 ಜನರೊಂದಿಗೆ ಪಕ್ಷವನ್ನು ತೊರೆದು, ಮತ್ತೆ ಪಿಪಿಎ ಸೇರಿದರು. ಅಲ್ಲೂ ಉಳಿಯದ ಖಂಡು ಅಕ್ಟೋಬರ್‌ನಲ್ಲಿ 33 ಶಾಸಕರೊಂದಿಗೆ ಬಿಜೆಪಿಗೆ ಹೋದರು. ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು. ಸರ್ಕಾರ ರಚಿಸಿದರು. ಬಿಜೆಪಿ ಪಕ್ಷಾಂತರಿಗಳ ಬೆಂಬಲದೊಂದಿಗೆ ಸರ್ಕಾರ ರಚಿಸಿತು.


2019ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 41 ಸ್ಥಾನಗಳಲ್ಲಿ ಆರಿಸಿಬಂದು, ಸರ್ಕಾರ ರಚಿಸಿದೆ.




## ಮಣಿಪುರ

ಅರವತ್ತು ಸ್ಥಾನಗಳಿರುವ ಮಣಿಪುರ ವಿಧಾನಸಭೆಯಲ್ಲಿ ಸ್ಪಷ್ಟ ಬಹುಮತಕ್ಕೆ 31 ಸ್ಥಾನಗಳ ಅಗತ್ಯವಿದೆ. 2017ರ ವಿಧಾನಸಭಾ ಚುನಾವಣೆಯಲ್ಲಿ 28 ಸ್ಥಾನಗಳನ್ನು ಪಡೆದಿದ್ದ ಕಾಂಗ್ರೆಸ್ ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. 21 ಸ್ಥಾನಗಳನ್ನು ಗೆದ್ದಿದ್ದ ಬಿಜೆಪಿ ಅಷ್ಟಕ್ಕೇ ತೃಪ್ತಿಪಟ್ಟುಕೊಳ್ಳಲಿಲ್ಲ.

ಎನ್‌ಪಿಪಿಯ ನಾಲ್ವರು ಶಾಸಕರು ಮತ್ತು ಐವರು ಪಕ್ಷೇತರ ಶಾಸಕರನ್ನು ಎನ್‌ಡಿಎ ಮಿತ್ರಪಕ್ಷಗಳಾಗಿ ಸೇರಿಸಿಕೊಂಡಿತು. ಹೀಗಿದ್ದೂ ಸ್ಪಷ್ಟ ಬಹುಮತಕ್ಕೆ ಒಂದು ಸ್ಥಾನದ ಕೊರತೆ ಇತ್ತು. ಕಾಂಗ್ರೆಸ್ ಶಾಸಕರೊಬ್ಬರನ್ನು ತನ್ನತ್ತ ಸೆಳೆದುಕೊಂಡು ಸರ್ಕಾರ ರಚಿಸಿತು. ಕಾಂಗ್ರೆಸ್‌ನಿಂದ ಮೊದಲೇ ಹೊರಬಂದಿದ್ದ ಬಿರೆನ್ ಸಿಂಗ್ ಅವರನ್ನು ಮುಖ್ಯಮಂತ್ರಿಯಾಗಿ ಘೋಷಿಸಿತು. ನಂತರದ ದಿನಗಳಲ್ಲಿ ಕಾಂಗ್ರೆಸ್‌ನ ಹಲವು ಶಾಸಕರು ಬಿಜೆಪಿ ಸೇರಿದರು. 2022ರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಸ್ಪಷ್ಟ ಬಹುಮತದೊಂದಿಗೆ ಸರ್ಕಾರ ರಚಿಸಿದೆ.




* ಎನ್‌ಪಿಪಿ, ಪಕ್ಷೇತರ ಮತ್ತು ಕಾಂಗ್ರೆಸ್‌ನ ಒಬ್ಬ ಶಾಸಕರನ್ನು ತನ್ನತ್ತ ಸೆಳೆದುಕೊಂಡ ಬಿಜೆಪಿ ಸರಳ ಬಹುಮತಕ್ಕೆ ಅಗತ್ಯವಿದ್ದ 31 ಸ್ಥಾನಗಳನ್ನು ಸಾಧಿಸಿತು

## ಮೇಘಾಲಯ

ಮೇಘಾಲಯ ವಿಧಾನಸಭೆಯಲ್ಲಿ 60 ಸ್ಥಾನಗಳಿವೆ. ಸರ್ಕಾರ ರಚಿಸಲು 31 ಸದಸ್ಯರ ಬೆಂಬಲದ ಅಗತ್ಯವಿದೆ. 2018ರ ವಿಧಾನಸಭಾ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತ ಬಂದಿರಲಿಲ್ಲ. 21 ಸ್ಥಾನಗಳನ್ನು ಗೆದ್ದಿದ್ದ ಕಾಂಗ್ರೆಸ್, ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. 19 ಸ್ಥಾನಗಳನ್ನು ಗೆದ್ದಿದ್ದ ಎನ್‌ಪಿಪಿ ಎರಡನೇ ಅತಿದೊಡ್ಡ ಪಕ್ಷವಾಗಿತ್ತು. ಆ ಚುನಾವಣೆಯಲ್ಲಿ ಬಿಜೆಪಿ ಆರಿಸಿ ಬಂದಿದ್ದು ಎರಡು ಕ್ಷೇತ್ರಗಳಲ್ಲಿ ಮಾತ್ರ. ಆದರೆ, 19 ಸ್ಥಾನಗಳನ್ನು ಗೆದ್ದಿದ್ದ ಎನ್‌ಪಿಪಿಯನ್ನು ಬಿಜೆಪಿಯು ಎನ್‌ಡಿಎಯ ಭಾಗವಾಗಿ ಸೇರಿಸಿಕೊಂಡಿತು. ಜತೆಗೆ ಪಕ್ಷೇತರ ಶಾಸಕರ ಬೆಂಬಲ ಪಡೆದು ಬಿಜೆಪಿ ಸರ್ಕಾರ ರಚಿಸಿತು. ಎನ್‌ಪಿಪಿ ಅಧ್ಯಕ್ಷ ಕಾನ್ರಾಡ್ ಸಂಗ್ಮಾ ಮುಖ್ಯಮಂತ್ರಿಯಾದರು. ಬಿಜೆಪಿಯ ಒಬ್ಬ ಶಾಸಕರಿಗೆ ಸಚಿವ ಸ್ಥಾನ ನೀಡಲಾಯಿತು. ನಂತರದಲ್ಲಿ ಕಾಂಗ್ರೆಸ್‌ನ ಹಲವು ಶಾಸಕರು ಬಿಜೆಪಿ ಸೇರಿದರು.

## ಆಪರೇಶನ್ ಕಮಲ ಕರ್ನಾಟಕದಲ್ಲೇ ಶುರು

ಚುನಾಯಿತ ಸರ್ಕಾರಗಳನ್ನು ಉರುಳಿಸಿ 'ಕೇಸರಿ ಪತಾಕೆ' ಹಾರಿಸಲು ಬಿಜೆಪಿ ವರಿಷ್ಠರು ಬಳಸುತ್ತಿರುವ 'ಆಪರೇಷನ್ ಕಮಲ'ದ ಕತ್ತರಿಯನ್ನು ಕೊಟ್ಟಿದ್ದೇ ಕರ್ನಾಟಕದ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ.


2008ರಲ್ಲಿ 110 ಸ್ಥಾನಗಳಲ್ಲಿ ಗೆದ್ದಿದ್ದ ಬಿಜೆಪಿ ಅಧಿಕಾರದ ಅಂಚಿಗೆ ಬಂದಿತ್ತು. ಅಂದು ಪಕ್ಷೇತರ ಶಾಸಕರನ್ನು ಕರೆತಂದು ಸರ್ಕಾರ ರಚಿಸಿದ್ದು ಆಗ ಗಣಿ ಉದ್ಯಮಿಯಾಗಿದ್ದ ಗಾಲಿ ಜನಾರ್ದನ ರೆಡ್ಡಿ. ಅತಂತ್ರ ಸರ್ಕಾರ ಉರುಳಿಸಲು ಆಗ ಯಡಿಯೂರಪ್ಪ ಅವರು ಆಪರೇಷನ್ ಕಮಲ ನಡೆಸಿ ಕಾಂಗ್ರೆಸ್–ಜೆಡಿಎಸ್ ಶಾಸಕರನ್ನು ಬಿಜೆಪಿಗೆ ಸೆಳೆದರು. ಹೀಗಾಗಿ 14 ಉಪಚುನಾವಣೆಗಳು ಎರಡೇ ವರ್ಷದ ಅವಧಿಯಲ್ಲಿ ನಡೆದು ಹೋದವು. ಯಡಿಯೂರಪ್ಪ ಬಹುಮತ ಪಡೆದರಾದರೂ ಲೋಕಾಯುಕ್ತ ವರದಿಯ ಕಾರಣಕ್ಕೆ ಅಧಿಕಾರದಲ್ಲಿ ಮುಂದುವರಿಯಲು ಆಗಲಿಲ್ಲ.

2018ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 104 ಸ್ಥಾನ ಗೆದ್ದಿತ್ತು. ಅಧಿಕಾರ ಹಿಡಿಯಲೇಬೇಕು ಎಂಬ ಹಪಾಹಪಿಯಲ್ಲಿದ್ದ ಯಡಿಯೂರಪ್ಪ, ಆಪರೇಷನ್ ಕಮಲವನ್ನೇ ನೆಚ್ಚಿಕೊಂಡು ಅಧಿಕಾರದ ಗಾದಿಯನ್ನೂ ಹಿಡಿದರು. ಆದರೆ, ಮುಂದುವರಿಯಲು ಸಾಧ್ಯವಾಗದೇ ರಾಜೀನಾಮೆ ಕೊಟ್ಟರು. ಹೀಗಾಗಿ, ಎಚ್.ಡಿ. ಕುಮಾರಸ್ವಾಮಿ ನೇತೃತ್ವದಲ್ಲಿ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂತು. ಆದರೂ ಛಲ ಬಿಡದ ಯಡಿಯೂರಪ್ಪ, 'ಆಪರೇಷನ್ ಕಮಲ' ಕಾರ್ಯಾಚರಣೆಯ ಜಾಡನ್ನು ಬಿಡಲೇ ಇಲ್ಲ. ಶಾಸಕರನ್ನು ಸೆಳೆಯುವ ತಂತ್ರಗಾರಿಕೆಯನ್ನು ಹಗಲು–ರಾತ್ರಿಯೆನ್ನದೇ ನಡೆಸುತ್ತಲೇ ಇದ್ದರು.

2019ರಲ್ಲಿ ಲೋಕಸಭೆ ಚುನಾವಣೆ ನಡೆಯುತ್ತಿದ್ದಂತೆ ಆಪರೇಷನ್ ಕಮಲ ಹುರಿಗಟ್ಟಿತು. ಒಂದೆಡೆ ಯಡಿಯೂರಪ್ಪ ಪುತ್ರ ಬಿ.ವೈ.ವಿಜಯೇಂದ್ರ, ಮತ್ತೊಂದೆಡೆ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷರಿಂದ ನಿಯೋಜಿತರಾಗಿದ್ದ ಸಿ.ಪಿ. ಯೋಗೇಶ್ವರ್, ಮೈತ್ರಿ ಸರ್ಕಾರಕ್ಕೆ ಮರ್ಮಾಘಾತ ಕೊಟ್ಟೇ ಬಿಟ್ಟರು.

ಆರು–ಏಳು–ಎಂಟು ಶಾಸಕರು ಕಾಂಗ್ರೆಸ್–ಜೆಡಿಎಸ್ ತೊರೆಯಲಿದ್ದಾರೆ ಎಂಬ ವದಂತಿ ಹರಿದಾಡುತ್ತಲೇ ಇತ್ತು. ಯಾವಾಗ, ಕಾಂಗ್ರೆಸ್‌ನ ರಮೇಶ ಜಾರಕಿಹೊಳಿ, ಜೆಡಿಎಸ್‌ನ ಎಚ್.ವಿಶ್ವನಾಥ್ ಅವರು ಆಪರೇಷನ್‌ಗೆ ಕೊರಳೊಡ್ಡಿದರೋ ಆಗ ಪಕ್ಷ ತೊರೆಯುವ ಶಾಸಕರ ಬಲ 17ಕ್ಕೆ ಏರಿತು. ದೇವೇಂದ್ರ ಫಡಣವೀಸ್ ನೇತೃತ್ವದ ಬಿಜೆಪಿ ಸರ್ಕಾರ ಮಹಾರಾಷ್ಟ್ರದಲ್ಲಿತ್ತು. ಎಲ್ಲ ಅತೃಪ್ತ ಶಾಸಕರನ್ನು ಆಗ ಏರ್‌ಲಿಫ್ಟ್ ಮಾಡಿ, ಮುಂಬೈಗೆ ಕರೆದೊಯ್ಯಲಾಯಿತು. ಕ್ಷಣಕ್ಷಣದ ನಾಟಕೀಯ ಬೆಳವಣಿಗೆ, ಅಹೋರಾತ್ರಿ ಕೋರ್ಟ್ ವಿಚಾರಣೆ ಎಲ್ಲವೂ ಮುಗಿದು, ಆಪರೇಷನ್ ಕಮಲಿಗರ ಕೈ ಮೇಲಾಯಿತು. ಕುಮಾರಸ್ವಾಮಿ ಸರ್ಕಾರ ಪತನಗೊಂಡಿತು. ಆದರೆ, ಆಪರೇಷನ್ ಕಮಲ ಅಸ್ತ್ರವನ್ನು ಬಿಜೆಪಿ ವರಿಷ್ಠರಿಗೆ ಕೊಟ್ಟ ಯಡಿಯೂರಪ್ಪ ಅಧಿಕಾರದಲ್ಲಿ ಮುಂದುವರಿಯಲಾಗಲಿಲ್ಲ. ಅದೇ 'ಕತ್ತರಿ' ಬಳಸಿದ ವರಿಷ್ಠರು, ಯಡಿಯೂರಪ್ಪ ಅವರನ್ನು ಖೆಡ್ಡಾಕ್ಕೆ ಕೆಡವಿ, ಪದಚ್ಯುತಗೊಳಿಸಿದ್ದು ಇತಿಹಾಸ.

ವಿಧಾನಸಭೆಯ ಒಟ್ಟು ಬಲಾಬಲ 224





## ಪುದುಚೇರಿ

ವಿಧಾನಸಭೆ ಹೊಂದಿರುವ ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ಬಿಜೆಪಿ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದಿದ್ದು 2021ರ ವಿಧಾನಸಭಾ ಚುನಾವಣೆಯಲ್ಲಿ. ಅಚ್ಚರಿಯೆಂದರೆ, 2016ರ ವಿಧಾನಸಭಾ ಚುನಾವಣೆಯಲ್ಲಿ ಒಂದೂ ಕ್ಷೇತ್ರವನ್ನು ಬಿಜೆಪಿ ಗೆದ್ದಿರಲಿಲ್ಲ. 33 ಸದಸ್ಯ ಬಲದ ವಿಧಾನಸಭೆಯಲ್ಲಿ ವಿ. ನಾರಾಯಣ ಸ್ವಾಮಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿತ್ತು. 2021ರ ಚುನಾವಣೆಗೂ ಮುನ್ನವೇ ಆಡಳಿತ ಪಕ್ಷದ ಶಾಸಕರನ್ನು ಬಿಜೆಪಿ ಸೆಳೆಯಿತು. ಸರ್ಕಾರ ಅಲ್ಪಮತಕ್ಕೆ ಕುಸಿಯಿತು. ಮೂವರು ಕಾಂಗ್ರೆಸ್ ಸದಸ್ಯರು ಬಿಜೆಪಿಗೆ ವಲಸೆ ಹೋದರು. ಚುನಾವಣೆಯ ಹೊಸ್ತಿಲಲ್ಲಿ ಇನ್ನೂ ಕೆಲವು ಕಾಂಗ್ರೆಸ್ ಶಾಸಕರು ರಾಜೀನಾಮೆ ನೀಡಿದ್ದರಿಂದ ಸರ್ಕಾರ ಪತನವಾಯಿತು.

ಕಾಂಗ್ರೆಸ್‌ನಿಂದ ಜಿಗಿದು ಬಂದ ಆರು ಶಾಸಕರು 2021ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಗೆದ್ದು ಬಂದರು. ಎನ್‌ಆರ್ ಕಾಂಗ್ರೆಸ್ ಎಂಬ ಪ್ರಾದೇಶಿಕ ಪಕ್ಷದೊಂದಿಗೆ ಬಿಜೆಪಿ ಚುನಾವಣಾಪೂರ್ವ ಮೈತ್ರಿ ಮಾಡಿಕೊಂಡಿತ್ತು. ಈ ಪಕ್ಷದಿಂದ 10 ಶಾಸಕರು ಆರಿಸಿಬಂದರು. ಕೇಂದ್ರ ಸರ್ಕಾರವು ಮೂವರು ಬಿಜೆಪಿ ಸದಸ್ಯರನ್ನು ವಿಧಾನಸಭೆಗೆ ನಾಮನಿರ್ದೇಶನ ಮಾಡಿತು. ಹೀಗಾಗಿ ವಿಧಾನಸಭೆಯಲ್ಲಿ ಬಿಜೆಪಿಯ ಬಲ 9ಕ್ಕೆ ಏರಿಕೆಯಾಗಿದೆ.

## ಮಧ್ಯಪ್ರದೇಶ

2018ರಲ್ಲಿ ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಸರ್ಕಾರವನ್ನು ಉರುಳಿಸಿ ಬಿಜೆಪಿ ಅಧಿಕಾರ ಹಿಡಿಯಿತು. ಪಕ್ಷೇತರರು ಹಾಗೂ ಇತರರು ಸೇರಿದಂತೆ 114 ಶಾಸಕರ ಬೆಂಬಲದಿಂದ ಅಸ್ತಿತ್ವಕ್ಕೆ ಬಂದಿದ್ದ ಕಮಲನಾಥ್ ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿರುದ್ಧ ಪಕ್ಷದ ಹಿರಿಯ ನಾಯಕ ಜ್ಯೋತಿರಾದಿತ್ಯ ಸಿಂಧಿಯಾ ಹಾಗೂ 22 ಶಾಸಕರು ಬಂಡಾಯ ಎದ್ದರು. ಶಾಸಕರ ರಾಜೀನಾಮೆಯಿಂದ ಸರ್ಕಾರ ಪತನವಾಯಿತು. ಬಿಜೆಪಿ ಮುಖಂಡ ಶಿವರಾಜ್ ಸಿಂಗ್ ಚೌಹಾಣ್ ಅವರು ಸರ್ಕಾರ ರಚನೆಗೆ ಹಕ್ಕುಮಂಡಿಸಿ, ನಾಲ್ಕನೇ ಬಾರಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಬಿಎಸ್‌ಪಿ ಹಾಗೂ ಎಸ್‌ಪಿಯ ತಲಾ ಇಬ್ಬರು ಶಾಸಕರು ಸರ್ಕಾರವನ್ನು ಬೆಂಬಲಿಸಿದ್ದರಿಂದ ಚೌಹಾಣ್ ಸರ್ಕಾರ ವಿಶ್ವಾಸಮತ ಸಾಬೀತುಪಡಿಸಿತು. 28 ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ 19 ಕಡೆಗಳಲ್ಲಿ ಗೆದ್ದ ಬಿಜೆಪಿ, ಸರ್ಕಾರದ ಬುಡವನ್ನು ಗಟ್ಟಿ ಮಾಡಿಕೊಂಡಿತು. ಸಿಂಧಿಯಾ ಅವರು ಕೇಂದ್ರದಲ್ಲಿ ಸಚಿವರಾಗಿ ನೇಮಕವಾದರು.




(ಕಾಂಗ್ರೆಸ್ ಸರ್ಕಾರದ ಪತನ ಹಾಗೂ ಉಪಚುನಾವಣೆ ಫಲಿತಾಂಶದ ಬಳಿಕ ಬಿಜೆಪಿಯ ಸಂಖ್ಯಾಬಲ 126ಕ್ಕೆ ಏರಿಕೆಯಾದರೆ, ಕಾಂಗ್ರೆಸ್ ಬಲ 96ಕ್ಕೆ ಕುಸಿಯಿತು)

ಆಧಾರ: ಚುನಾವಣಾ ಆಯೋಗದ ಫಲಿತಾಂಶಗಳು, ಪಿಟಿಐ



## ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 161

### ವಾಸಕ್ಕೆ ಮನೆ ಕೋರಿದ ಸತಿ

ಶಿವ-ಸತೀದೇವಿಯರ ದಾಂಪತ್ಯಜೀವನ ಸುಖದಿಂದ ಸಾಗುವಾಗ ಮಳೆಗಾಲ ಪ್ರಾರಂಭವಾಗುತ್ತದೆ. ಆಗ ಸತೀದೇವಿಯು 'ಓ ದೇವ ದೇವ, ಈಗ ಸಹಿಸಲು ಅಸಾಧ್ಯವಾದ ಮಳೆಗಾಲದಲ್ಲಿ ಮೇಘಗಳು ಭಯಂಕರವಾಗಿ ಆರ್ಭಟಿಸುತ್ತಿವೆ. ಮಿಂಚು ಮೇಘಗಳ ಘರ್ಜನೆಗೆ ಮನಸ್ಸು ಕ್ಷೋಭೆಗೊಳ್ಳುವಂತಾಗಿದೆ. ಆಕಾಶವು ಮೋಡಗಳಿಂದ ಮುಚ್ಚಿರುವುದರಿಂದ ಹಗಲು ಸೂರ್ಯನೂ, ರಾತ್ರಿ ಚಂದ್ರನೂ ಕಾಣಿಸುತ್ತಿಲ್ಲ. ಹಗಲು ರಾತ್ರಿಯಂತೆ ಕಾಣುತ್ತಿರುವ ಈ ಕಾಲವು ವಿರಹಿಗಳಿಗೆ ದುಃಖವನ್ನುಂಟುಮಾಡುತ್ತಿದೆ. ಓ ಶಂಕರ, ಮಹಾಗಾಳಿಯಿಂದ ಮೇಘಗಳು ಘರ್ಜಿಸುತ್ತಾ ಒಂದೆಡೆಯಲ್ಲಿ ನಿಲ್ಲದೇ ಆಕಾಶದಲ್ಲೆಲ್ಲಾ ಸಂಚರಿಸುತ್ತಿವೆ. ಬಿರುಗಾಳಿಯಿಂದ ಕಡಹಲ್ಪಟ್ಟ ದೊಡ್ಡದೊಡ್ಡ ಮರಗಳು ಗಾಳಿಯ ಹೊಡೆತದಿಂದ ಆಕಾಶದಲ್ಲಿ ತೂರಿಹೋಗುತ್ತಿವೆ. ಈ ಸನ್ನಿವೇಶವು ನೋಡುಗರಿಗೆ ಭಯವನ್ನುಂಟುಮಾಡುತ್ತಿದೆ. ಆಕಾಶದಲ್ಲಿ ನಿಬಿಡವಾಗಿ ನೀಲಮೇಘಗಳು ತುಂಬಿವೆ. ಅದರ ಮಧ್ಯೆ ಬೆಳ್ಳಕ್ಕಿಗಳು ಸಾಲಾಗಿ ಹಾರುತ್ತಿವೆ. ಇದನ್ನು ನೋಡಿದರೆ ಯಮುನಾನದಿಯ ನೀಲವಾದ ಜಲದಲ್ಲಿ ತೇಲುತ್ತಿರುವ ಬಿಳಿಯ ನೊರೆಗಳ ಸಾಲಿನಂತೆ ಕಾಣಿಸುತ್ತಲಿದೆ.

'ನೀಲವಾದ ಮೇಘಗಳ ನಡುವೆ ಹೊಳೆಯುವ ಮಿಂಚು, ಕರೀ ನೀರಿನ ಸಮುದ್ರದಲ್ಲಿ ವಡವಾಗ್ನಿಯು ಜ್ವಲಿಸುವಂತೆ ಕಾಣಿಸುತ್ತಿದೆ. ಮನೆಯ ಅಂಗಳಗಳಲ್ಲಿ ಸಸ್ಯಗಳು ಹುಟ್ಟುತ್ತಲಿವೆ ಎಂದರೆ, ಬಯಲು ಪ್ರದೇಶಗಳಲ್ಲಿ ಸಸ್ಯಗಳು ಹೇಗೆ ದಟ್ಟವಾಗಿ ಹುಟ್ಟುತ್ತವೆ ಎಂಬುದನ್ನು ಹೇಳುವ ಅವಶ್ಯಕತೆಯೇ ಇಲ್ಲ. ಸಮುದ್ರವನ್ನು ಕಡೆಯುವ ಕಾಲದಲ್ಲಿ ಮಂದಾರಪರ್ವತದಲ್ಲಿದ್ದ ವೃಕ್ಷಗಳ ಬಗೆಬಗೆಯ ಬಣ್ಣದ ಎಲೆಗಳು ಕ್ಷೀರಸಮುದ್ರದಲ್ಲಿ ಬಿದ್ದು ಯಾವರೀತಿ ಕಾಣಿಸುತ್ತಿದ್ದವೋ, ಅದರಂತೆ ಕಪ್ಪಗೂ ಬೆಳ್ಳಗೂ ಇರುವ ವೃಕ್ಷಲತಾಗುಲ್ಮಗಳ ಸಮೂಹದಿಂದ ಈ ಹಿಮಾಲಯಪರ್ವತವು ಕಾಣಿಸುತ್ತಿದೆ.

'ಕಲಿಯುಗದಲ್ಲಿ ಲಕ್ಷ್ಮಿಯು ಸತ್ಪುರುಷರನ್ನು ಬಿಟ್ಟು ಕುಟಿಲರನ್ನಾಶ್ರಯಿಸುವಂತೆ, ಮುತ್ತುಗದ ಗಿಡಗಳಲ್ಲಿ ಹೂ ಬರದೆ ಕ್ಷುದ್ರಗಿಡಗಳಲ್ಲಿ ಹೂಗಳು ಬರುತ್ತಿವೆ. ಮೇಘಘರ್ಜನೆಯನ್ನು ಕೇಳಿ ಹರ್ಷಗೊಂಡ ನವಿಲುಗಳು ನರ್ತನಮಾಡುವಾಗ ಮತ್ತು ಮಳೆಯನ್ನ ಸೂಚಿಸುವ ಚಾತಕಪಕ್ಷಿಗಳು ಸಂತೋಷದಿಂದ ಹಾಡುತ್ತಾ ಹಾರುವಾಗ ಮೇಘಗಳು ಆಲಿಕಲ್ಲುಗಳನ್ನು ಸುರಿಸಿ ತೊಂದರೆಕೊಡುತ್ತಿವೆ. ಬಂಧುವಾದ ಮೇಘದಿಂದಲೇ ನವಿಲು ಮತ್ತು ಚಾತಕಗಳಿಗೆ ಆದ ಅನ್ಯಾಯವನ್ನು ನೋಡಿ, ಹೆದರಿಕೆಯಿಂದ ಹಂಸಗಳು ದೂರವನ್ನು ಲೆಕ್ಕಿಸದೆ ಹಿಮಾಲಯ ತಪ್ಪಲಲ್ಲಿರುವ ಮಾನಸಸರೋವರಕ್ಕೆ ತೆರಳುತ್ತಿವೆ. ಇಂತಹ ವಿಷಮವಾದ ಮಳೆಗಾಲದಲ್ಲಿ ಕಾಗೆ ಮತ್ತು ಚಕೋರಗಳೂ ರಕ್ಷಣೆಗಾಗಿ ಗೂಡನ್ನು ಕಟ್ಟಿಕೊಂಡು ವಾಸಮಾಡುತ್ತಲಿವೆ. ಹೀಗಿರುವಾಗ ಓ ಶಂಕರ, ನೀನು ವಾಸಕ್ಕೆ ಮನೆಯಿಲ್ಲದೇ ಹೇಗೆ ಸುಖವನ್ನು ಹೊಂದುವೆ? ಇಂತಹ ಘೋರವಾದ ಮಳೆಗಾಲದಲ್ಲಿ ನನಗೂ ತುಂಬಾ ಭಯವಾಗುತ್ತಿದೆ. ಆದಕಾರಣ ನಮ್ಮ ವಾಸಕ್ಕೆ ಕೈಲಾಸದಲ್ಲಿಯಾಗಲೀ ಹಿಮಾಚಲದಲ್ಲಿಯಾಗಲೀ ಮಹಾಕೋಶೀ ಎಂಬ ಜಲಪಾತದ ತಪ್ಪಲಲ್ಲಿಯಾಗಲೀ ನಮ್ಮ ವಾಸಕ್ಕೆ ಯೋಗ್ಯವಾದಂತಹ ಮನೆಯನ್ನು ನಿರ್ಮಿಸು' ಎಂದು ಸತೀದೇವಿ ಪ್ರಾರ್ಥಿಸುತ್ತಾಳೆ.

ಆಗ ಶಿವ ಮಂದಹಾಸವನ್ನು ಸೂಸುತ್ತಾ ನಕ್ಕ. ಬಳಿಕ 'ಎಲೈ ಪ್ರಿಯೆ! ನಿನ್ನ ಸಂತೋಷಕ್ಕಾಗಿ ನಾನು ಎಲ್ಲಿ ವಾಸವನ್ನು ಕಲ್ಪಿಸುವೆನೋ, ಅಲ್ಲಿ ಎಂದೂ ಮೇಘಗಳು ಹೋಗಲಾರವು. ಅಂತಹ ಸ್ಥಳದಲ್ಲಿ ವಾಸವನ್ನು ನಿನ್ನ ಪ್ರೀತಿಗಾಗಿ ಕಲ್ಪಿಸುವೆ. ಮಳೆಗಾಲದಲ್ಲೂ ಮೇಘಗಳು ಹಿಮವತ್ಪರ್ವತದ ಮಧ್ಯಭಾಗದವರೆಗೇ ಮಾತ್ರ ಸಂಚರಿಸುವುವು. ಕೈಲಾಸ ಪರ್ವತದಲ್ಲಿ ಕಾಲುಭಾಗದ ಮೇಲೆ ಸಂಚರಿಸಲಾರವು. ಹಾಗೇ, ಮೇರುಪರ್ವತದಲ್ಲಿ ಪುಷ್ಕರ, ಆವರ್ತ, ಸಂವರ್ತ, ಕುಂಭಗಳೆಂಬ ಬ್ರಹ್ಮನ ರೇತಸ್ಸಿನಿಂದ ಹುಟ್ಟಿದ ಪ್ರಳಯರೂಪಿ ಮಹಾಮೇಘಗಳೂ ಜಂಬೂಮೂಲವೆಂಬ ಆ ತಪ್ಪಲುಪ್ರದೇಶದವರೆಗೆ ಮಾತ್ರ ಸಂಚರಿಸುವವು. ಅದರಿಂದ ಮುಂದಕ್ಕೆ ಹೋಗಲಾರವು. ಈಗ ನಾನು ಹೇಳಿದ ಮೂರು ಬೆಟ್ಟಗಳಲ್ಲಿ ಯಾವ ಬೆಟ್ಟದ ಮೇಲ್ಭಾಗವು ವಾಸಕ್ಕೆ ಇಷ್ಟವಾಗಿ ತೋರುವುದೋ ಅದನ್ನು ಹೇಳು. ಹಿಮಾಲಯದಲ್ಲಿ ಮಾನಸಸರಸ್ಸಿನ ಹಂಸಗಳು ತಮ್ಮ ಸುಂದರವಾದ ಸುವರ್ಣದ ರೆಕ್ಕೆಗಳಿಂದ ನಿನಗೆ ಗಾಳಿಯನ್ನು ಹಾಕುತ್ತವೆ. ಕೋಗಿಲೆ ಮುಂತಾದ ಪಕ್ಷಿಗಳು ಇಂಪಾಗಿ ಹಾಡಿ ನಿನ್ನನ್ನು ಮುದಗೊಳಿಸುತ್ತವೆ. ವಸಂತಋತುವಿಗೆ ಜನ್ಮಸ್ಥಾನವಾದ ಹಾಗೂ ನಿರ್ಮಲವಾದ ಸರೋವರಗಳಿರುವ ಹಿಮಾಲಯವನ್ನು ವಾಸಕ್ಕಾಗಿ ಅಪೇಕ್ಷಿಸುವಿಯಾ?' ಎಂದು ಕೇಳಿದ.

## ಗುಂಡಣ್ಣ






## ಬೆರಗಿನ ಬೆಳಕು

ಗುರುರಾಜ ಕರಜಗಿ

### ಖದ್ಯೋತನ ನಿಶ್ಚಲ ಧರ್ಮ

**ಖದ್ಯೋತನಂತೆ ಬಿಡುಗೊಳದೆ ಧರ್ಮವ ಚರಿಸು|**
**ವಿದ್ಯುಲ್ಲತೆಯ ತೆರದಿ ತೇಜಗಳ ಸೂಸು||**
**ಗೆದ್ದುದೇನೆಂದು ಕೇಳದೆ, ನಿನ್ನ ಕೈ ಮೀರೆ|**
**ಸದ್ದುಮಾಡದೆ ಮುಡುಗು – ಮಂಕುತಿಮ್ಮ ||662||**

**ಪದ-ಅರ್ಥ:** ಖದ್ಯೋತ = ಸೂರ್ಯ, ಬಿಡುಗೊಳದೆ = ಎಡೆಬಿಡದೆ, ಚರಿಸು = ಮಾಡು, ವಿದ್ಯುಲ್ಲತೆ = ಮಿಂಚಿನ ಬಳ್ಳಿ, ಸೂಸು = ಹರಡು, ಗೆದ್ದುದೇನೆಂದು = ಗೆದ್ದುದು + ಏನೆಂದು, ಮುಡುಗು = ಬಾಗು.

**ವಾಚ್ಯಾರ್ಥ:** ಸೂರ್ಯನಂತೆ ಎಡೆಬಿಡದೆ ಧರ್ಮವನ್ನು ನಡೆಸು. ಮಿಂಚಿನಬಳ್ಳಿಯ ಹಾಗೆ ತೇಜಸ್ಸಿನ ಕಿರಣಗಳನ್ನು ಪಸರಿಸು. ನಾನು ಏನು ಗೆದ್ದೆ ಎಂದು ಕೇಳದೆ, ಕಾರ್ಯ ನಿನ್ನ ಮೀರಿದ್ದಾದರೆ ನಮ್ರತೆಯಿಂದ ಗದ್ದಲಮಾಡದೆ ತಲೆಬಾಗು.

**ವಿವರಣೆ:** ಧರ್ಮಗ್ರಂಥಗಳಲ್ಲಿ ಸೂರ್ಯನನ್ನು ಅತ್ಯಂತ ಉನ್ನತ ಸ್ಥಾನದಲ್ಲಿ ಇರಿಸಲಾಗಿದೆ. ಸೂರ್ಯನ ಮತ್ತೊಂದು ಹೆಸರು ದಿನಕರ. ಹೆಸರೇ ಹೇಳುವಂತೆ ದಿನ ಪ್ರಾರಂಭವಾಗುವುದು ಅವನ ಆಗಮನದಿಂದಲೇ. ದಿನ ಮುಗಿಯುವುದೂ ಅವನ ನಿರ್ಗಮನದಿಂದ. ಅವನಿಲ್ಲದೆ ವಿಶ್ವವಿಲ್ಲ, ಹಗಲು ರಾತ್ರಿಯ ವ್ಯತ್ಯಾಸವನ್ನು ನೀಡುವವನು ಅವನೇ. ಆದ್ದರಿಂದ ಆತ ಭುವನೇಶ್ವರ. ಸೂರ್ಯ ಪದದ ಅರ್ಥ ಸದಾ ಚಲನೆಯಲ್ಲಿರುವುದು. ಸೂರ್ಯ ಎಂದೆಂದಿಗೂ ಒಂದೇ ಸ್ಥಳದಲ್ಲಿ ಕ್ಷಣ ಮಾತ್ರವೂ ನಿಲ್ಲುವುದಿಲ್ಲ. ಹೀಗೆ ಸದಾ ಚಲನಶೀಲನಾಗಿ, ದಿನದ ಚೈತನ್ಯವನ್ನು ತುಂಬುವ ಮತ್ತು ಪ್ರಪಂಚಕ್ಕೆ ಜೀವನಾಧಾರನಾಗಿರುವ ಸೂರ್ಯ ಸತತವಾಗಿ ಧರ್ಮದ ನಿರ್ವಹಣೆ ಮಾಡುವವ. ಭಾನುವಾರ ನಮಗೆ ರಜಾದಿನ ಆದರೆ ಭಾನುವಿಗೆ ರಜೆಯೇ ಇಲ್ಲ. ಸ್ವಲ್ಪವೂ ವಿಶ್ರಾಂತಿಯಿಲ್ಲದೆ ದುಡಿಯುವ ಶಕ್ತಿಪುಂಜ ಸೂರ್ಯ. ಕಗ್ಗ ಹೇಳುತ್ತದೆ, ನಾವೂ ಕೂಡ ಸೂರ್ಯನ ಹಾಗೆ ಸದಾ ಧರ್ಮದಲ್ಲಿ ದುಡಿಯಬೇಕು.

ಆಕಾಶದಲ್ಲಿ ಛಕ್ಕೆಂದು ಹೊಳೆಯುವ ಮಿಂಚಿನ ಬಳ್ಳಿ ಇಡೀ ಆಗಸವನ್ನು ಬೆಳಗುತ್ತದೆ, ಕಣ್ಣು ಕೋರೈಸುತ್ತದೆ. ಅದು ಅಲ್ಲಿ ಇದ್ದದ್ದು ಕೇವಲ ಅರ್ಧಕ್ಷಣವಾದರೂ ಅದು ನೀಡುವ ಪ್ರಕಾಶ ಅಪಾರವಾದದ್ದು. ಆ ಶಕ್ತಿಯನ್ನು ಹಿಡಿದು ಶೇಖರಿಸಿಕೊಳ್ಳಲು ಸಾಧ್ಯವಿಲ್ಲ. ಮಿಂಚು ನಮ್ಮಿಂದ ಯಾವ ಪ್ರತಿಫಲವನ್ನು ಅಪೇಕ್ಷಿಸುತ್ತದೆ? ಸೂರ್ಯನಿಗಾದರೂ ದೇವತೆಯ ಸ್ಥಾನಮಾನ ದಕ್ಕಿದೆ. ಯಜ್ಞಗಳಲ್ಲಿ ಆತನಿಗೆ ಪ್ರಮುಖ ಸ್ಥಾನ. ಆದರೆ ಅಸಾಧ್ಯ ಶಕ್ತಿಯ ಅನಾವರಣವಾದ ಮಿಂಚಿಗೆ ಅದಾವುದೂ ಇಲ್ಲ. ಕಗ್ಗದ ಸಂದೇಶ, ಯಾವುದನ್ನೂ ಅಪೇಕ್ಷಿಸದೆ ನಮ್ಮಿಂದ ಸಾಧ್ಯವಾದಷ್ಟು ಬೆಳಕನ್ನು ಸಮಾಜಕ್ಕೆ ನೀಡಬೇಕು. ಮಿಂಚು ಬರುವುದು ಎರಡು ಪ್ರಚಂಡ ಮೋಡಗಳ ಘರ್ಷಣೆಯಿಂದ. ನಮ್ಮ ಬದುಕಿನಲ್ಲೂ ಕಷ್ಟಗಳ ಕಾರ್ಮೋಡಗಳ ಘರ್ಷಣೆಯಾದಾಗ, ಕೊರಗುವ ಬದಲು ಮಿಂಚಿನಂತೆ ಹೊಳೆಯಬೇಕು.

ನಮ್ಮೆಲ್ಲ ಪ್ರಯತ್ನಗಳನ್ನು ಮಾಡುವಾಗ ಯಶಸ್ಸಿಗೆ ಹಪಾಹಪಿಪಡುವುದು ಬೇಡ. ಗೀತೆಯಲ್ಲೂ, ಕರ್ಮಮಾಡು ಫಲದ ಚಿಂತೆ ಬೇಡ ಎಂದಿದೆ. ಹಾಗೆಂದರೆ, ಫಲ ಬೇಡವೆ? ಫಲವೇ ಬೇಡ ಎನ್ನುವುದಾದರೆ ಕರ್ಮ ಯಾಕೆ ಮಾಡಬೇಕು? ಗೀತೆಯ ಮಾತಿನ ಉದ್ದೇಶ ಅದಲ್ಲ. ನಿನ್ನ ಕಾರ್ಯವನ್ನು ಅತ್ಯಂತ ನಿಷ್ಠೆಯಿಂದ, ನಿನ್ನೆಲ್ಲ ಶಕ್ತಿ, ಏಕಾಗ್ರತೆಗಳನ್ನು ಹಾಕಿ ಮಾಡು, ಆಗ ಯಶಸ್ಸು ಖಂಡಿವಾಗಿಯೂ ದೊರೆಯುತ್ತದೆ. ಸರಿಯಾಗಿ ನೋಡಿಕೊಂಡು ವಾಹನ ಓಡಿಸಿದರೆ ಗುರಿ ಮುಟ್ಟುವುದು ಖಚಿತ. ಗುರಿಯನ್ನು ತಲೆಯಲ್ಲಿ ತುಂಬಿಕೊಂಡು ಲಕ್ಷ್ಯವಿಲ್ಲದೆ ವಾಹನ ನಡೆಸಿದರೆ ಗುರಿ ಮುಟ್ಟುವುದು ಕಷ್ಟ. ಇಷ್ಟೆಲ್ಲ ಪ್ರಯತ್ನ ಮಾಡಿದ ಮೇಲೂ, ಕಾರ್ಯಸಾಧನೆಯಾಗದಿದ್ದರೆ, ಕೈ ಮೀರಿದರೆ, ಕೋಲಾಹಲ ಬೇಡ. ಮತ್ತೊಮ್ಮೆ ಹೆಚ್ಚಿನ ಪ್ರಯತ್ನ ಮಾಡಲು ಯೋಜಿಸಿ, ವಿನಮ್ರವಾಗಿ ವಿಧಿಗೆ ಬಾಗು. ❖

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಜುಲೈ 1, 2022

**ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ:** ಆಷಾಢ ಶುಕ್ಲ ದ್ವಿತೀಯ ಗಂ. 13-10 ನಕ್ಷತ್ರ: ಪುಷ್ಯ ಗಂ. 27-56 ಯೋಗ: ವ್ಯಾಘಾತ ಗಂ. 10-46, ಕರಣ: ಕೌಲವ ಗಂ. 13-10, ಮಿಥುನ ಮಾಸದ 16ನೇ ದಿನ.

**ರಾಹುಕಾಲ:** ಬೆಳಿಗ್ಗೆ 10:30 – 12:00 **ಸೂರ್ಯೋದಯ:** 06-11 **ಸೂರ್ಯಾಸ್ತ:** 06-58

**ಮುಸ್ಲಿಂ ದಿನಾಂಕ:** 01 ಜುಲ್‌ಹಿಜಾ

**ದಿನ ವಿಶೇಷ:** ಆಷಾಢ ಶುಕ್ರವಾರ, ರಥಯಾತ್ರಾ

**ಅದೃಷ್ಟ ಸಂಖ್ಯೆ:** 7, 10

**ಮೇಷ:** ಉದ್ಯೋಗದಲ್ಲಿ ಎದುರಾಗುವ ಅಯ್ಕೆಯಂಥ ಸಮಸ್ಯೆಗೆ ಇಂದು ಉತ್ತರ ಕಂಡುಕೊಳ್ಳುವುದು ಕಷ್ಟ. ಮಾರ್ಗದರ್ಶಕರ ಸಲಹೆ ಪಡೆಯಿರಿ. ಹಣಕ್ಕಿಂತ ಹೆಸರಿಗೆ ಪ್ರಾಮುಖ್ಯತೆ ನೀಡಿ.

**ವೃಷಭ:** ಶತ್ರುಗಳ ಉಪಟಳ ಎದುರಿಸುವ ಸಾಮರ್ಥ್ಯವನ್ನು ನಿಮಗೆ ಭಗವಂತ ನೀಡಲಿದ್ದಾನೆ. ಒಳ್ಳೆಯ ಮಿತ್ರರಿಂದ ಕಂಪನಿಯ ಮುಖ್ಯ ವ್ಯಕ್ತಿಯ ಪರಿಚಯ, ಅಭಿವೃದ್ಧಿಯ ಮಾಹಿತಿ ದೊರೆಯಲಿದೆ.

**ಮಿಥುನ:** ಲೇವಾದೇವಿ ವ್ಯವಹಾರದಲ್ಲಿನ ಮಧ್ಯಸ್ತಿಕೆಯಿಂದ ನಿಮ್ಮ ಸಂಪತ್ತಿನ ಕ್ಷೀಣಿಸಲಿದೆ. ಬ್ಯಾಂಕ್ ನೌಕರರಿಗೆ ಸ್ಥಳ ಬದಲಾವಣೆಯಾಗುವ ಸಂಭವವಿದೆ. ನಿಮ್ಮ ವೃತ್ತಿಯಲ್ಲಿ ಸಾಕಷ್ಟು ಪೈಪೋಟಿಯನ್ನು ನೀವು ಎದುರಿಸಬೇಕಾಗಬಹುದು.

**ಕರ್ಕಾಟಕ:** ಕೋರ್ಟು ಕಚೇರಿಗಳ ವ್ಯವಹಾರದಲ್ಲಿ ವಿಳಂಬವಾದರೂ ಯಶಸ್ಸು ನಿಮ್ಮದಾಗಲಿದೆ. ಕಫ ಪ್ರಕೃತಿಯ ದೇಹ ಹೊಂದಿರುವವರಿಗೆ ಆರೋಗ್ಯದಲ್ಲಿ ಏರು-ಪೇರು.

**ಸಿಂಹ:** ನಿಮ್ಮ ಪ್ರೀತಿಪಾತ್ರರಿಂದ ನೆಮ್ಮದಿ ತರುವಂತ ಸನ್ನಿವೇಶ ನಡೆಯಲಿದೆ. ಮೂರು, ನಾಲ್ಕು ಕಾರ್ಯಗಳ ಅಥವಾ ವಿಚಾರಗಳಲ್ಲಿನ ನಿಮ್ಮ ಗಮನದಿಂದ ಕೆಲಸ ಮುಂದೆ ಸಾಗದು.

**ಕನ್ಯಾ:** ವೃತ್ತಿ ತರಬೇತಿ ಪಡೆದುಕೊಳ್ಳುವ ಅವಕಾಶ. ವ್ಯಾವಹಾರಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಿಮ್ಮ ಮೃದು ಧೋರಣೆಯಿಂದ ಕೆಲವು ಮಂದಿ ನಿಮ್ಮ ವಿರುದ್ಧ ಧ್ವನಿ ಎತ್ತುವ ಸಾಧ್ಯತೆ ಇದೆ.

**ತುಲಾ:** ಊರಿನ ಜನರ ಚಿಂತೆಗಳಿಗೆ ನೀವೇ ಆಶ್ರಯ ಕೊಟ್ಟಂತೆ ಕಾಣುವುದು. ನೂತನ ಯೋಜನೆ ರೂಪಿಸುವ ಬಗ್ಗೆ ನುರಿತವರೊಡನೆ ಚರ್ಚೆ ನಡೆಸಲು ಇಂದು ಸೂಕ್ತ. ಮಾತಿನ ಬಲದಿಂದಲೇ ಕಾರ್ಯ ಸಾಧಿಸಿಕೊಳ್ಳುವ ಶಕ್ತಿ ನಿಮ್ಮಲ್ಲಿದೆ.

**ವೃಶ್ಚಿಕ:** ನಿಮ್ಮ ಬಹು ದಿನಗಳ ಕನಸು ಸಾಕಾರಗೊಳ್ಳುವುದು. ನಿಮ್ಮ ಪ್ರಾಮಾಣಿಕತೆ, ಬುದ್ಧಿವಂತಿಕೆ, ಕೆಲಸದಲ್ಲಿನ ಶಿಸ್ತು ಗೌರವಯುತ ಹುದ್ದೆ ಅಲಂಕರಿಸಲು ಸಹಾಯ ಮಾಡಲಿದೆ.

**ಧನು:** ನಿಮ್ಮ ಪ್ರಿಯವಾದ ಮಾತು ಮತ್ತು ಸಕಾಲದ ಆರ್ಥಿಕ ನೆರವು ಸೋದರಿಯ ಸಂಸಾರ ನೆಲೆ ನಿಲ್ಲುವುದಕ್ಕೆ ಕಾರಣವಾಗಲಿದ್ದು, ಅದರಿಂದ ನಿಮ್ಮ ಜವಾಬ್ದಾರಿ ಪೂರೈಸಿದ ತೃಪ್ತಿ ಈ ದಿನ ದೊರೆಯಲಿದೆ.

**ಮಕರ:** ಹರಾಜಿನಲ್ಲಿ ಆಸ್ತಿ ಖರೀದಿ ಎನ್ನುವ ರೀತಿಯಲ್ಲಿ ಸಂಪತ್ತು ಅಭಿವೃದ್ಧಿ. ಕೌಟುಂಬಿಕವಾಗಿ ಎಷ್ಟೇ ಕಷ್ಟ ಬಂದರೂ ಹಿಡಿದ ದಾರಿ ಬಿಡಬಾರದೆಂಬ ನಿಮ್ಮ ಮನೋಭಾವ ದೇಹಾಯಾಸ ಮೂಲಕ ಗುರಿ ತಲುಪಲಿದೆ.

**ಕುಂಭ:** ರಾಜಕೀಯ ವಿಚಾರ ಚರ್ಚಿಸಲು ರಾಜಕೀಯ ಗುರುವಿನ ಸ್ಥಳಕ್ಕೆ ತೆರಳುವ ಸಂಭವ. ಹಣದ ಮುಗ್ಗಟ್ಟು ಕಾಡಲಿದ್ದು ನಿಮ್ಮ ಪೂರ್ವದ ಯೋಚನೆ ತಲೆಕೆಳಗಾಗಲಿದೆ. ದಿನ ನಿತ್ಯದ ಕೆಲಸ ಎಂದಿನಂತೆ ಸಾಗಲಿದೆ.


**ಮೀನ:** ಆರಕ್ಷಕ ವರ್ಗದವರಿಗೆ ಅಥವಾ ರಕ್ಷಣಾ ಕಾರ್ಮಿಕರಿಗೆ ರಾತ್ರಿ ಪಾಳಿ ಆರಂಭ. ಬಹುದಿನದ ಕೌಟುಂಬಿಕ ವ್ಯಾಜ್ಯ ಬಗೆಹರಿಸಿದ್ದರಿಂದ ನಿಮಗೆ ಪುಣ್ಯ ಮತ್ತು ಪ್ರಶಂಸೆ ದೊರೆಯುವುದು.

## ಪದಬಂಧ 5005

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
3.ಉತ್ತಮ ಕುಲದಲ್ಲಿ ಹುಟ್ಟಿದವನು (4)
5.ಪ್ರಸಿದ್ಧ ಪಡಿಸುವಿಕೆ (4)
6.ಸಾಗುವಳಿಯನ್ನು ಹೀಗೆನ್ನಿ (4)
8.ಖಾಲಿಯಾದ ಕೈ (4)
12.ನಸುಕಿನಲ್ಲಿ ಬಿರಿದ ಕಾಡು ಹೂ (4)
14.ಬಿಗುಮಾನ ಬಿಟ್ಟು ತೋರಿಸುತ್ತಿರುವ ಆತ್ಮ ಪ್ರತಿಷ್ಠೆ (4)
15.ಒಪ್ಪವಾಗಿ ಬಂದಿರುವ ಸಹಾನುಭೂತಿ! (4)
16.ನಡುವೆ ಗರ ತಿರುಗಿದರೆ ವರ್ಗ ಕಾಣುವುದೇ? (4)

**ಮೇಲಿಂದ ಕೆಳಕ್ಕೆ**
1.ಶತ್ರುವೇ ಹುಟ್ಟಿಲ್ಲದವನು (5)
2.ಉಗ್ರವಾದ ಹೊಡೆದಾಟ (4)
3.ಕ್ರಮವಾಗಿಲ್ಲದಿರುವುದು (4)
4.ಮಗ ಇಲ್ಲಿದ್ದಾನೆ (3)
7.ಬೆಟ್ಟದ ತಪ್ಪಲು (2)
9.ವನದ ಕೊನೆಯಲ್ಲಿ ಮಾಡಿದ ಯಾಗ (3)
10.ಶಾಖವನ್ನು ಅಳೆಯುವ ಸಾಧನ (5)
11.ಭಿಕನಾಸಿಯ ಹೊಕ್ಕಳು! (2)
12.ಸಸ್ಯಗಳಿಂದ ತೆಗೆದಿರುವ ಜಿಡ್ಡು (4)
13.ಮಡಿವಂತನು ನೀಡಿರುವ ಪ್ರತ್ಯುತ್ತರ! (4)
14.ಅಮೃತವೆಂದಿರುವುದು ಬರೀ ಸುಳ್ಳು! (3)



### 5004ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಆಘ್ರಾಣ 2.ಅತಿರಥ
4.ಸಾಕ್ಷಾತ್ಕಾರ 6.ಪ್ರಸಂಗ
7.ನೆಪ 9.ಕರ್ಕಶ
11.ರವಿ 13.ಕವಲು
14.ಚಕ್ಕುತನ 16.ಮನೆತನ
16.ಗಲಭೆ

**ಮೇಲಿಂದ ಕೆಳಕ್ಕೆ:**
1.ಆತ್ಮಸಾಧನೆ
2.ಅಹಂ 3.ರಕ್ತಸಂಚಾರ
5.ರಥಿಕ 8.ಪರಿವರ್ತನೆ
10.ಶಕಟ 12.ವಿಧಾನಸಭೆ
15.ಮಾನ

## ಸುಡೊಕು 5391

| | | | | | | | | |
|---|---|---|---|---|---|---|---|---|
| | | | | | | | 5 | |
| | | 7 | 5 | | 6 | 3 | | 2 |
| | 8 | 5 | | | | | 6 | |
| | 2 | | | | | 9 | | 4 |
| | | | 2 | 4 | 7 | | | |
| | 7 | | | | | 5 | | 8 |
| | | 9 | | | 8 | | 4 | |
| 4 | | 2 | | | | | 8 | 1 |
| | 6 | | 4 | | 2 | 7 | | |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5390 ಸುಡೊಕು

| | | | | | | | | |
|---|---|---|---|---|---|---|---|---|
| 3 | 9 | 1 | 8 | 7 | 5 | 6 | 4 | 2 |
| 7 | 6 | 5 | 2 | 4 | 9 | 3 | 8 | 1 |
| 2 | 8 | 4 | 3 | 1 | 6 | 7 | 9 | 5 |
| 1 | 5 | 9 | 7 | 2 | 4 | 8 | 6 | 3 |
| 4 | 2 | 7 | 6 | 8 | 3 | 5 | 1 | 9 |
| 8 | 3 | 6 | 5 | 9 | 1 | 2 | 7 | 4 |
| 6 | 1 | 2 | 4 | 5 | 8 | 9 | 3 | 7 |
| 9 | 7 | 8 | 1 | 3 | 2 | 4 | 5 | 6 |
| 5 | 4 | 3 | 9 | 6 | 7 | 1 | 2 | 8 |

## ಹೈಕೋರ್ಟ್‌ಗೆ ಜುಬೈರ್ ಮೊರೆ

ನವದೆಹಲಿ (ಪಿಟಿಐ): ಜುಬೈರ್ ಪೊಲೀಸ್ ಕಸ್ಟಡಿಗೆ ಒಪ್ಪಿಸಿರುವ ವಿಚಾರಣಾ ನ್ಯಾಯಾಲಯದ ಆದೇಶ ಪ್ರಶ್ನಿಸಿ ಗುರುವಾರ ದೆಹಲಿ ಹೈಕೋರ್ಟ್ ಮೊರೆ ಹೋಗಿದ್ದಾರೆ. ಈ ಅರ್ಜಿ ಶುಕ್ರವಾರ ವಿಚಾರಣೆಗೆ ಬರಲಿದೆ.

ಜುಬೈರ್ ಪರ ವಕೀಲರಾದ ವೃಂದಾ ಗ್ರೋವರ್ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದರು.







# ಜುಬೈರ್ ಮನೆಯಲ್ಲಿ ಶೋಧ

ಪ್ರಜಾವಾಣಿ ವಾರ್ತೆ



ಕಾವಲ್ ಭೈರಸಂದ್ರದಲ್ಲಿರುವ ಮನೆಯಲ್ಲಿ ಗುರುವಾರ ಶೋಧ ನಡೆಸಿದ ಬಳಿಕ ಮೊಹಮ್ಮದ್ ಜುಬೈರ್ ಅವರನ್ನು ದೆಹಲಿ ಪೊಲೀಸರು ಕರೆದೊಯ್ದರು

ಬೆಂಗಳೂರು: ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಆರೋಪದಡಿ ಬಂಧಿಸಲಾಗಿರುವ ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಸಂಸ್ಥೆಯ ಸಹ ಸಂಸ್ಥಾಪಕ, ಪತ್ರಕರ್ತ ಮೊಹಮ್ಮದ್ ಜುಬೈರ್ (39) ಅವರನ್ನು ಬೆಂಗಳೂರಿಗೆ ಗುರುವಾರ ಕರೆತಂದಿದ್ದ ದೆಹಲಿ ಪೊಲೀಸರು, ಕಾವಲ್ ಭೈರಸಂದ್ರದಲ್ಲಿರುವ ಮನೆಯಲ್ಲಿ 3 ಗಂಟೆ ಶೋಧ ನಡೆಸಿದರು.

ಮೊಹಮ್ಮದ್ ಜುಬೈರ್ ಅವರನ್ನು ಇತ್ತೀಚೆಗೆ ದೆಹಲಿ ಪೊಲೀಸರು ಬಂಧಿಸಿದ್ದು, ವಿಚಾರಣೆಗಾಗಿ ಜುಲೈ 2ರ ವರೆಗೆ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

'ಜುಬೈರ್ ತನ್ನ ತಂದೆ–ತಾಯಿ, ಪತ್ನಿ ಹಾಗೂ ಮಕ್ಕಳ ಜೊತೆ ವಾಸವಿದ್ದರು. ಎಂಜಿನಿಯರ್ ಪದವೀಧರರಾಗಿದ್ದ ಸ್ನೇಹಿತ ಪ್ರತೀಕ್ ಸಿನ್ಹಾ ಜೊತೆ ಸೇರಿ ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಸಂಸ್ಥೆ ಸ್ಥಾಪಿಸಿದ್ದರು. ಕಾವಲ್ ಭೈರಸಂದ್ರದ ಮನೆಯನ್ನೇ ಕಚೇರಿಯನ್ನಾಗಿಸಿಕೊಂಡು ಕೆಲ ವರ್ಷ ಕೆಲಸ ಮಾಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಜುಬೈರ್ ಮೇಲಿನ ಆರೋಪಗಳಿಗೆ ಸಂಬಂಧಿಸಿ ಕೆಲ ಪುರಾವೆ ಸಂಗ್ರಹಿಸಿರುವ ದೆಹಲಿ ಪೊಲೀಸರು, ಮತ್ತಷ್ಟು ಪುರಾವೆಗಳಿಗಾಗಿ ಹುಡುಕಾಡುತ್ತಿದ್ದಾರೆ' ಎಂದು ತಿಳಿಸಿವೆ.

**ದಾಖಲೆ ಜಪ್ತಿ, ವಿಡಿಯೊ ಚಿತ್ರೀಕರಣ:** 'ಮನೆಯಲ್ಲಿದ್ದ ಕೆಲ ಎಲೆಕ್ಟ್ರಿಕ್ ದಾಖಲೆಗಳನ್ನು ಜಪ್ತಿ ಮಾಡಿರುವ ಪೊಲೀಸರು, ಸ್ಥಳದ ಫೋಟೊ, ವಿಡಿಯೊ ಚಿತ್ರೀಕರಣ ಮಾಡಿಕೊಂಡಿದ್ದಾರೆ. ಜುಬೈರ್ ಸಮ್ಮುಖದಲ್ಲೇ ಮಹಜರು ಸಹ ಮಾಡಿದ್ದಾರೆ.'

ಜುಬೈರ್ ಅವರ ಪತ್ನಿ, ಮೂವರು ಮಕ್ಕಳು ಹಾಗೂ ತಾಯಿ ಮನೆಯಲ್ಲಿದ್ದರು. ಆರೋಗ್ಯ ಸಮಸ್ಯೆ ಇದ್ದಿದ್ದರಿಂದ ಜುಬೈರ್ ಅವರ ತಂದೆಯನ್ನು ಸಂಬಂಧಿಕರ ಮನೆಯಲ್ಲಿರಿಸಲಾಗಿತ್ತು. ಪೊಲೀಸರ ಜೊತೆಗೆ ಬಂದ ಜುಬೈರ್ ಅವರನ್ನು ಕಂಡು ಕುಟುಂಬಸ್ಥರು ಕಣ್ಣೀರಿಟ್ಟರು.



ಮಣಿಪುರ: ನೊನಿ ಜಿಲ್ಲೆಯ ರೈಲ್ವೆ ಕಾಮಗಾರಿ ಸ್ಥಳದಲ್ಲಿ ಘಟನೆ: 55 ಜನ ಕಾಣೆ

# ಭೂಕುಸಿತ: 8 ಮಂದಿ ಸಾವು



ಮಣಿಪುರದ ತುಪಲ್ ರೈಲ್ವೆ ಕಾಮಗಾರಿ ಸ್ಥಳದಲ್ಲಿ ಗುರುವಾರ ಪರಿಹಾರ ಕಾರ್ಯ ನಡೆಸಲಾಯಿತು –ಪಿಟಿಐ ಚಿತ್ರ

ಇಂಫಾಲ/ಗುವಾಹಟಿ/ ಇಟಾನಗರ (ಪಿಟಿಐ/ರಾಯಿಟರ್ಸ್): ಮಣಿಪುರದ ನೊನಿ ಜಿಲ್ಲೆಯ ರೈಲ್ವೆ ಕಾಮಗಾರಿ ಪ್ರದೇಶದಲ್ಲಿ ಭಾರಿ ಭೂಕುಸಿತವಾಗಿದ್ದು, 8 ಮಂದಿ ಮೃತಪಟ್ಟಿದ್ದಾರೆ. 18 ಮಂದಿಯನ್ನು ರಕ್ಷಿಸಲಾಗಿದ್ದು, 55ಕ್ಕೂ ಹೆಚ್ಚು ಜನ ನಾಪತ್ತೆಯಾಗಿದ್ದಾರೆ.

ತುಪುಲ್ ಯಾರ್ಡ್ ರೈಲ್ವೆ ಕಾಮಗಾರಿ ಶಿಬಿರದ ಬಳಿ ಬುಧವಾರ ರಾತ್ರಿ ಈ ಘಟನೆ ನಡೆದಿದೆ.

'ಈವರೆಗೆ ಒಟ್ಟು 8 ಮೃತದೇಹಗಳನ್ನು ಹೊರತೆಗೆಯಲಾಗಿದೆ. ಇದರಲ್ಲಿ 'ಟೆರಿಟೋರಿಯಲ್ ಆರ್ಮಿಯ' ಏಳು ಮಂದಿ ಸೇರಿದ್ದಾರೆ. 55ಕ್ಕೂ ಅಧಿಕ ಮಂದಿ ನಾಪತ್ತೆಯಾಗಿದ್ದಾರೆ. ಅವರೆಲ್ಲಾ ಮಣ್ಣಿನ ಅವಶೇಷಗಳ ಅಡಿಯಲ್ಲಿ ಸಿಲುಕಿರುವ ಸಾಧ್ಯತೆ ಇದ್ದು ರಕ್ಷಣಾ ಕಾರ್ಯ ಚುರುಕುಗೊಳಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಕುಸಿದಿರುವ ಮಣ್ಣೆಲ್ಲಾ ಇಜೆಯಿ ನದಿಯಲ್ಲಿ ಸಂಗ್ರಹವಾಗಿದೆ. ಅದರಿಂದ ನದಿ ನೀರಿನ ಸರಾಗ ಹರಿಯುವಿಕೆಗೆ ತೊಡಕಾಗಿದೆ. ಸ್ಥಳದಲ್ಲಿ ಭಾರಿ ಪ್ರಮಾಣದಲ್ಲಿ ನೀರು ಶೇಖರಣೆಯಾಗಿ ಜಲಾಶಯದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ನೀರು ನದಿ ಪಾತ್ರದ ತಗ್ಗು ಪ್ರದೇಶಗಳಿಗೆ ನುಗ್ಗುವ ಸಾಧ್ಯತೆ ಇರುವುದರಿಂದ ಸಾಧ್ಯವಿದ್ದಲ್ಲಿಂದ ನಾಗರಿಕರನ್ನು ಬೇರೆಡೆಗೆ ಸ್ಥಳಾಂತರಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ತಿಳಿಸಿದ್ದಾರೆ.

ಅವಶೇಷಗಳ ಅಡಿ ಸಿಲುಕಿರುವವರನ್ನು ಪತ್ತೆಹಚ್ಚುವುದಕ್ಕಾಗಿ ಶ್ವಾನ ದಳವನ್ನೂ ನಿಯೋಜಿಸಲಾಗಿದೆ. ಸ್ಥಳೀಯ ಆಡಳಿತವು ಜೆಸಿಬಿ ಹಾಗೂ ಇತರ ಬೃಹತ್ ಯಂತ್ರಗಳ ಸಹಾಯದಿಂದ ಘಟನಾ ಸ್ಥಳದಲ್ಲಿ ಸಂಗ್ರಹವಾಗಿರುವ ಭಾರಿ ಪ್ರಮಾಣದ ಮಣ್ಣನ್ನು ಹೊರತೆಗೆಯುವ ಕೆಲಸ ಮಾಡುತ್ತಿದೆ.

'ತುರ್ತು ಸಭೆ ನಡೆಸಿ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡಿದ್ದೇನೆ. ರಕ್ಷಣಾ ಕಾರ್ಯ ಪ್ರಗತಿಯಲ್ಲಿದೆ. ಸ್ಥಳಕ್ಕೆ ಆಂಬುಲೆನ್ಸ್ ಹಾಗೂ ವೈದ್ಯರನ್ನು ನಿಯೋಜಿಸಲಾಗಿದೆ. ಮೃತರ ಕುಟುಂಬಗಳಿಗೆ ತಲಾ ₹5 ಲಕ್ಷ ಹಾಗೂ ಗಾಯಗೊಂಡವರಿಗೆ ತಲಾ ₹50 ಸಾವಿರ ನೆರವು ನೀಡಲಾಗುತ್ತದೆ' ಎಂದು ಮಣಿಪುರದ ಮುಖ್ಯಮಂತ್ರಿ ಬಿರೇನ್ ಸಿಂಗ್ ಟ್ವೀಟ್ ಮಾಡಿದ್ದಾರೆ.

**ಮಾಹಿತಿ ಪಡೆದ ಅಮಿತ್ ಶಾ**

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹಾಗೂ ಮಣಿಪುರದ ಮುಖ್ಯಮಂತ್ರಿ ಬಿರೇನ್ ಸಿಂಗ್ ಅವರಿಗೆ ದೂರವಾಣಿ ಕರೆ ಮಾಡಿ ಘಟನೆ ಕುರಿತ ಮಾಹಿತಿ ಪಡೆದಿದ್ದಾರೆ.

'ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) ತಂಡವೊಂದು ಈಗಾಗಲೇ ಘಟನಾ ಸ್ಥಳ ತಲುಪಿದೆ. ಎನ್‌ಡಿಆರ್‌ಎಫ್‌ನ ಮತ್ತೆರಡು ತಂಡಗಳೂ ರಕ್ಷಣಾ ಕಾರ್ಯದಲ್ಲಿ ತೊಡಗಿಕೊಳ್ಳಲಿವೆ' ಎಂದು ಅವರು ಟ್ವೀಟ್ ಮಾಡಿದ್ದಾರೆ.

**ಭೂ ಕುಸಿತ–ಮಹಿಳೆ ಮೃತದೇಹ ಪತ್ತೆ:** ಅರುಣಾಚಲಪ್ರದೇಶದ ಪಪುಮ್ ಪರೆ ಜಿಲ್ಲೆಯಲ್ಲಿ ನಡೆದಿದ್ದ ಭೂ ಕುಸಿತದಲ್ಲಿ ಮತ್ತೊಬ್ಬ ಮಹಿಳೆ ಮೃತಪಟ್ಟಿದ್ದಾರೆ.

'27 ವರ್ಷದ ಮೊಮಿತಾ ಚಾಕ್ಮ ಮೃತ ಮಹಿಳೆ. ಬಲಿಜಾನ್‌ನ ಚಕ್ಮಾ ಶಿಬಿರ–1ರ ಬಳಿಯ ಅವಶೇಷಗಳ ಅಡಿಯಲ್ಲಿ ಸಿಲುಕಿದ್ದ ಮೃತದೇಹವನ್ನು ಗುರುವಾರ ಹೊರತೆಗೆಯಲಾಗಿದೆ. ಇದರೊಂದಿಗೆ ಪ್ರವಾಹ ಹಾಗೂ ಭೂ ಕುಸಿತದಿಂದಾಗಿ ಈ ವರ್ಷ ರಾಜ್ಯದಲ್ಲಿ ಮೃತರಾದವರ ಸಂಖ್ಯೆ 18ಕ್ಕೆ ಹೆಚ್ಚಿದೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

### ಅಸ್ಸಾಂ ಪ್ರವಾಹ: 12 ಮಂದಿ ಸಾವು

ಅಸ್ಸಾಂನಲ್ಲಿ ಪ್ರವಾಹ ಪರಿಸ್ಥಿತಿ ಮುಂದುವರಿದಿದೆ. ಹಿಂದಿನ 24 ಗಂಟೆಗಳಲ್ಲಿ 12 ಮಂದಿ ಮೃತಪಟ್ಟಿದ್ದು, 21 ಜಿಲ್ಲೆಗಳ 31 ಲಕ್ಷಕ್ಕೂ ಅಧಿಕ ಮಂದಿ ತೊಂದರೆಗೆ ಒಳಗಾಗಿದ್ದಾರೆ.

'ಸಿಲ್ಚಾರ್ ನಗರದ ಬಹುತೇಕ ಪ್ರದೇಶಗಳು 11 ದಿನಗಳಿಂದಲೂ ಜಲಾವೃತವಾಗಿವೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪ್ರವಾಹ ಹಾಗೂ ಭೂಕುಸಿತದಿಂದಾಗಿ ಈ ವರ್ಷ ಮೃತಪಟ್ಟವರ ಸಂಖ್ಯೆ 151ಕ್ಕೆ ಏರಿದೆ.

# ಸಾವಿರಾರು ಜನರ 'ಮೌನ' ಮೆರವಣಿಗೆ

## ಕನ್ಹಯ್ಯ ಲಾಲ್ ಹತ್ಯೆ ಖಂಡಿಸಿ ರಾಜಸ್ಥಾನದ ಉದಯಪುರದಲ್ಲಿ ಪ್ರತಿಭಟನೆ



ಸರ್ವ ಹಿಂದೂ ಸಮಾಜವು ಆಯೋಜಿಸಿದ್ದ ಮೆರವಣಿಗೆಯಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು ಪಿಟಿಐ ಚಿತ್ರ

ಉದಯಪುರ (ಪಿಟಿಐ): ರಾಜಸ್ಥಾನದ ಉದಯಪುರದಲ್ಲಿ ಟೇಲರ್ ಕನ್ಹಯ್ಯ ಲಾಲ್ ಹತ್ಯೆ ಖಂಡಿಸಿ ಸಾವಿರಾರು ಜನರು ಗುರುವಾರ ಪ್ರತಿಭಟನಾ ಮೆರವಣಿಗೆ ನಡೆಸಿದ್ದಾರೆ.

ಪುರಭವನದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ನಡೆದ ಮೆರವಣಿಗೆಯನ್ನು 'ಸರ್ವ ಹಿಂದೂ ಸಮಾಜ' ಆಯೋಜಿಸಿತ್ತು. ವಿವಿಧ ಸಂಘಟನೆಗಳ ಸದಸ್ಯರು ಭಾಗವಹಿಸಿದ್ದರು. ಇದು ಮೌನ ಮೆರವಣಿಗೆ ಎಂದು ಆಯೋಜಕರು ಹೇಳಿದ್ದರು. ಆದರೆ, 'ಜೈ ಜೈ ಶ್ರೀರಾಮ್', 'ಮದರಸ ಬಂದ್ ಮಾಡಿ', 'ಹಿಂದೂಗಳ ಹತ್ಯೆ ನಿಲ್ಲಿಸಿ', 'ಸಂಘಟಿತ ಹಿಂದೂ ಸಮರ್ಥ ಭಾರತ' ಮುಂತಾದ ಘೋಷಣೆಗಳನ್ನು ಕೆಲವರು ಕೂಗಿದರು. ಹಲವರು ತಮ್ಮ ಕೈಯಲ್ಲಿ ಕೇಸರಿ ಧ್ವಜಗಳನ್ನು ಹಿಡಿದಿದ್ದರು.

ನಗರದಾದ್ಯಂತ ಕರ್ಫ್ಯೂ ಹೇರಲಾಗಿತ್ತು. ಆದರೆ, ಮೆರವಣಿಗೆ ಮಾರ್ಗದಲ್ಲಿ ಕರ್ಫ್ಯೂ ಸಡಿಲಿಕೆ ಮಾಡಲಾಗಿತ್ತು. ಭಾರಿ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಸಣ್ಣ ಸಂಘರ್ಷವೊಂದು ನಡೆದರೂ ಮೆರವಣಿಗೆ ಬಹುತೇಕ ಶಾಂತಿಯುತವಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಬಿಜೆಪಿ ವಕ್ತಾರೆಯಾಗಿದ್ದ ನೂಪುರ್ ಶರ್ಮಾ ಅವರು ಪ್ರವಾದಿ ಮಹಮ್ಮದ್ ಅವರನ್ನು ಅವಹೇಳನ ಮಾಡಿ ನೀಡಿದ್ದ ಹೇಳಿಕೆಯನ್ನು ಬೆಂಬಲಿಸಿ ಕನ್ಹಯ್ಯ ಅವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿದ್ದರು. ಅವರ ಕತ್ತು ಕತ್ತರಿಸಿ ಇಬ್ಬರು ವ್ಯಕ್ತಿಗಳು ಹತ್ಯೆ ಮಾಡಿ, ಕೃತ್ಯದ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಮಂಗಳವಾರ ಪ್ರಕಟಿಸಿದ್ದರು. ಇಸ್ಲಾಂಗೆ ಆಗಿರುವ ಅವಮಾನಕ್ಕೆ ಇದು ಪ್ರತೀಕಾರ ಎಂದು ಅವರು ಹೇಳಿದ್ದರು.

ಇದರ ಬಳಿಕ ಉದಯಪುರದ ಕೆಲವೆಡೆ ಹಿಂಸಾ ಕೃತ್ಯಗಳು ನಡೆದಿದ್ದವು. ನಗರದ ಏಳು ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಕರ್ಫ್ಯೂ ಹೇರಲಾಗಿದೆ. ಕನ್ಹಯ್ಯ ಅವರ ಅಂತ್ಯಕ್ರಿಯೆ ಬುಧವಾರ ನಡೆದಿತ್ತು. ಆ ಸಂದರ್ಭದಲ್ಲಿಯೂ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು.

ಇದರ ಬಳಿಕ ಉದಯಪುರದ ಕೆಲವೆಡೆ ಹಿಂಸಾ ಕೃತ್ಯಗಳು ನಡೆದಿದ್ದವು. ತಪ್ಪಿತಸ್ಥರಿಗೆ ಗಲ್ಲು ಶಿಕ್ಷೆ ನೀಡಬೇಕು ಎಂದು ಕೋರಿ ರಾಷ್ಟ್ರಪತಿಗೆ ಬರೆದ ಮನವಿಯನ್ನು ಸಾಧುಗಳ ಗುಂಪೊಂದು ಜಿಲ್ಲಾಧಿಕಾರಿಗಳಿಗೆ ನೀಡಿತು. ಸಮಾಜವಿರೋಧಿ ಕೃತ್ಯಗಳಲ್ಲಿ ಮದರಸಗಳ ಪಾತ್ರದ ಕುರಿತು ತನಿಖೆ ನಡೆಯಬೇಕು ಎಂದೂ ಈ ಮನವಿಯಲ್ಲಿ ಒತ್ತಾಯಿಸಲಾಗಿದೆ.

ಎಲ್ಲ ಧರ್ಮಗಳನ್ನು ಗೌರವಿಸಬೇಕು ಎಂಬುದು ನಮ್ಮ ಕರೆ. ಜಗತ್ತಿನಾದ್ಯಂತ ಇದು ಸಾಧ್ಯವಾದರೆ ವಿವಿಧ ಸಮುದಾಯಗಳು ಶಾಂತಿ, ಸಾಮರಸ್ಯದಿಂದ ಇರಬಹುದು
**ಸ್ಟೀಫನ್ ಡುಜಾರಿಕ್,** ವಿಶ್ವಸಂಸ್ಥೆಯ ವಕ್ತಾರ

ಉದಯಪುರ ಘಟನೆಗೆ ಉನ್ಮಾದವೇ ಕಾರಣ. ಇಸ್ಲಾಂನ ಒಂದು ವರ್ಗವು ಜಿಹಾದನ್ನು ಅರ್ಥ ಮಾಡಿಕೊಂಡಿರುವ ರೀತಿಯು ಅತ್ಯಂತ ಅಪಾಯಕಾರಿಯಾಗಿದೆ
**ಅಲೋಕ್ ಕುಮಾರ್,** ವಿಶ್ವ ಹಿಂದೂ ಪರಿಷತ್ ಅಧ್ಯಕ್ಷ

### ಶಾಂತಿಗೆ ಕರೆ: ಪ್ರಧಾನಿಗೆ ಕಾಂಗ್ರೆಸ್ ಮೊರೆ

ನವದೆಹಲಿ (ಪಿಟಿಐ): ದೇಶದಲ್ಲಿ ಈಗ ಇರುವ ಪರಿಸ್ಥಿತಿಯ ಬಗ್ಗೆ ಕಾಂಗ್ರೆಸ್ ಪಕ್ಷವು ಕಳವಳ ವ್ಯಕ್ತಪಡಿಸಿದೆ. ಜನರು ಶಾಂತಿ, ಸೌಹಾರ್ದ ಕಾಯ್ದುಕೊಳ್ಳುವಂತೆ ಕರೆ ಕೊಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೋರಿದೆ.

ಉದಯಪುರ ಘಟನೆಯಲ್ಲಿ ವಿದೇಶಿ ಕೈವಾಡದ ಬಗೆಗಿನ ಮಾಹಿತಿಯನ್ನು ರಾಜ್ಯಗಳ ಮುಖ್ಯಮಂತ್ರಿಗಳ ಜತೆಗೆ ಏಕೆ ಹಂಚಿಕೊಳ್ಳುತ್ತಿಲ್ಲ ಎಂದು ಕಾಂಗ್ರೆಸ್ ನಾಯಕಿ ಅಲ್ಕಾ ಲಾಂಬಾ ಪ್ರಶ್ನಿಸಿದ್ದಾರೆ.

ಶಾಂತಿ ಮತ್ತು ಭ್ರಾತೃತ್ವ ಇಲ್ಲದೆ ಯಾವ ದೇಶವೂ ಪ್ರಗತಿ ಆಗದು. ಈಗಿನ ವಾತಾವರಣವು ಮುಂದುವರಿದರೆ ಭಾರತದ ಪ್ರಗತಿ ಕುಂಟುತ್ತದೆ. ಹಣಕಾಸು ಸಚಿವರು ವಿದೇಶಿ ಹೂಡಿಕೆ ಬಗ್ಗೆ ಮಾತನಾಡುತ್ತಾರೆ. ಆದರೆ, ಶಾಂತಿ ಸೃಷ್ಟಿ ಬಗ್ಗೆ ಯಾರೂ ಮಾತನಾಡುತ್ತಿಲ್ಲ ಎಂದು ಲಾಂಬಾ ಹೇಳಿದ್ದಾರೆ.

# 'ಜಿಎಸ್‌ಟಿ ದಿನ; ಅಧೀಕ್ಷಕರು ದೂರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ತೆರಿಗೆ ಸೂಪರಿಂಟೆಂಡೆಂಟ್‌ಗಳು ಶುಕ್ರವಾರ ನಡೆಯಲಿರುವ ಜಿಎಸ್‌ಟಿ ದಿನಾಚರಣೆಯಿಂದ ದೂರ ಉಳಿಯಲಿದ್ದಾರೆ ಎಂದು ಅಖಿಲ ಭಾರತ ಕೇಂದ್ರ ತೆರಿಗೆ ಸೂಪರಿಂಟೆಂಡೆಂಟ್‌ಗಳ ಸಂಘ ಹೇಳಿದೆ.

ಮೂಲಸೌಕರ್ಯ, ಕರ್ತವ್ಯ, ಜವಾಬ್ದಾರಿ, ವೇತನಶ್ರೇಣಿ ವಿಚಾರದಲ್ಲಿ ಕೇಂದ್ರ ಜಿಎಸ್‌ಟಿ ಸಂಘಟನೆಯನ್ನು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಜಿಎಸ್‌ಟಿ ಸಂಘಟನೆಗಳಿಗೆ ಸಮಾನವಾಗಿ ಕಾಣುತ್ತಿಲ್ಲ. ಹೆಚ್ಚಿನ ಜವಾಬ್ದಾರಿಯನ್ನು ಸೂಪರಿಂಟೆಂಡೆಂಟ್‌ಗಳ ಮೇಲೆ ಹೊರಿಸಲಾಗುತ್ತಿದ್ದರೂ ಅವರಿಗೆ ಯಾವುದೇ ನೆರವು ಸಿಗುತ್ತಿಲ್ಲ ಎಂದು ಸಂಘಟನೆಯು ಹೇಳಿಕೆಯಲ್ಲಿ ತಿಳಿಸಿದೆ.

ಜಿಎಸ್‌ಟಿ ಅಧಿಕಾರಿಗಳಿಗೆ ಒದಗಿಸಿರುವ ಸಾಫ್ಟ್‌ವೇರ್ ಸೌಲಭ್ಯವು ಉತ್ತಮವಾಗಿಲ್ಲ. ವ್ಯವಸ್ಥೆಯ ಗಣಕೀಕರಣ ಪ್ರಕ್ರಿಯೆಯು ಒಂದು ವೈಫಲ್ಯದಂತೆ ಕಾಣುತ್ತಿದೆ. ಸಹಾಯಕ ಆಯುಕ್ತರ ಎರಡು ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ಭರ್ತಿ ಮಾಡಿಲ್ಲ. 2007ರಿಂದಲೂ ಸೂಪರಿಂಟೆಂಡೆಂಟ್‌ಗಳ ಅಖಿಲ ಭಾರತ ಜೇಷ್ಠತಾ ಪಟ್ಟಿ ಸಿದ್ಧಪಡಿಸಿಲ್ಲ ಎಂದು ಸಂಘಟನೆಯು ಆರೋಪಿಸಿದೆ.

ಹೀಗಾಗಿ ಕೇಂದ್ರ ತೆರಿಗೆ ಸೂಪರಿಂಟೆಂಡೆಂಟ್‌ಗಳಿಗೆ ಜಿಎಸ್‌ಟಿ ದಿನಾಚರಣೆಯಂದು ಸಂಭ್ರಮಿಸಲು ಕಾರಣಗಳೇ ಇಲ್ಲ ಎಂದು ಅದು ಹೇಳಿದೆ.

## ಜು.4ಕ್ಕೆ ಅಲ್ಲೂರಿ ಪ್ರತಿಮೆ ಅನಾವರಣ

ಅಮರಾವತಿ (ಪಿಟಿಐ): ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ಆಂಧ್ರ ಪ್ರದೇಶದ ಭೀಮಾವರಂ ಪಟ್ಟಣದ ಉದ್ಯಾನದಲ್ಲಿ ಸ್ವಾತಂತ್ರ್ಯ ಸೇನಾನಿ ಅಲ್ಲೂರಿ ಸೀತಾರಾಮ ರಾಜು ಅವರ 30 ಅಡಿಯ ಕಂಚಿನ ಪ್ರತಿಮೆಯನ್ನು ಜುಲೈ 4ರಂದು ಪ್ರಧಾನಿ ಮೋದಿ ಅನಾವರಣಗೊಳಿಸಲಿದ್ದಾರೆ.

ಪ್ರಧಾನಿ ಭೇಟಿ ಹಿನ್ನೆಲೆಯಲ್ಲಿ ಭೀಮಾವರಂ ಪಟ್ಟಣದಲ್ಲಿ ನಡೆದಿರುವ ಸಿದ್ಧತೆಗಳನ್ನು ವಿಶೇಷ ಮುಖ್ಯ ಕಾರ್ಯದರ್ಶಿ (ಪ್ರವಾಸೋದ್ಯಮ ಮತ್ತು ಸಂಸ್ಕೃತಿ) ರಜತ್ ಭಾರ್ಗವ ಗುರುವಾರ ಪರಿಶೀಲಿಸಿದರು.

ಅಂದು ಪ್ರಧಾನಿ ಮೋದಿ ಹೈದರಾಬಾದ್‌ನಿಂದ ವಿಶೇಷ ವಿಮಾನದಲ್ಲಿ ಗನ್ನಾವರಂನ ವಿಜಯವಾಡ ವಿಮಾನ ನಿಲ್ದಾಣಕ್ಕೆ ಬಂದಿಳಿಯಲಿದ್ದಾರೆ. ನಂತರ ಹೆಲಿಕಾಪ್ಟರ್‌ನಲ್ಲಿ ಪಶ್ಚಿಮ ಗೋದಾವರಿ ಜಿಲ್ಲೆಯ ಭೀಮಾವರಂಗೆ ತಲುಪಲಿದ್ದಾರೆ. ಅಲ್ಲೂರಿ ಸೀತಾರಾಮ ರಾಜು ಅವರ 125ನೇ ಜನ್ಮದಿನದ ಸ್ಮರಣಾರ್ಥ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ಸಾರ್ವಜನಿಕ ಸಭೆಯಲ್ಲಿ ಮೋದಿ ಭಾಷಣ ಮಾಡಲಿದ್ದಾರೆ.

# ಉಕ್ರೇನ್‌ಗೆ ಮತ್ತೆ ಭಾರಿ ಸೇನಾ ನೆರವು

ಲಂಡನ್/ಮ್ಯಾಡ್ರಿಡ್ (ಪಿಟಿಐ/ಎಪಿ): ರಷ್ಯಾ ಆಕ್ರಮಣವನ್ನು ಎದುರಿಸಲು ಉಕ್ರೇನ್‌ಗೆ ಬ್ರಿಟನ್ ಮತ್ತು ಅಮೆರಿಕ ಮತ್ತೊಮ್ಮೆ ಭಾರಿ ಮೊತ್ತದ ಸೇನಾ ನೆರವನ್ನು ಘೋಷಿಸಿವೆ.

ಮ್ಯಾಡ್ರಿಡ್‌ನಲ್ಲಿ ಗುರುವಾರ ನ್ಯಾಟೊ ನಾಯಕರ ಶೃಂಗಸಭೆಯಲ್ಲಿ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಉಕ್ರೇನ್‌ಗೆ ಸುಮಾರು ₹9,600 ಕೋಟಿ ಮತ್ತು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಸುಮಾರು ₹6300 ಕೋಟಿ ಮೊತ್ತದ ಸೇನಾ ನೆರವು ಪ್ರಕಟಿಸಿದರು.

ಈ ಹೊಸ ಪ್ಯಾಕೇಜ್‌ನಲ್ಲಿ ಸುಧಾರಿತ ವಾಯು ರಕ್ಷಣಾ ವ್ಯವಸ್ಥೆಗಳು, ಕೌಂಟರ್ ಬ್ಯಾಟರಿ ರೇಡಾರ್‌ಗಳು ಮತ್ತು ಹಿಮಾರ್ಸ್ ರಾಕೆಟ್ ವ್ಯವಸ್ಥೆಗಳಿಗೆ ಹೆಚ್ಚುವರಿ ಮದ್ದುಗುಂಡುಗಳು ಒಳಗೊಂಡಿವೆ. ಈಗಾಗಲೇ ಇಷ್ಟು ಶಸ್ತ್ರಾಸ್ತ್ರಗಳನ್ನು ಉಕ್ರೇನ್‌ಗೆ ಕಳುಹಿಸಿಕೊಡಲಾಗಿದೆ ಎಂದು ಬೈಡನ್ ಹೇಳಿದರು.

ರಷ್ಯಾ ಉಕ್ರೇನ್ ಮೇಲೆ ಸೇನಾ ಕಾರ್ಯಾಚರಣೆ ಆರಂಭಿಸಿದಾಗಿನಿಂದ ಈವರೆಗೆ ಅಮೆರಿಕ 14 ಬಾರಿ ಶಸ್ತ್ರಾಸ್ತ್ರ ನೆರವಿನ ಪ್ಯಾಕೇಜ್ ನೀಡಿದೆ. ಉಕ್ರೇನ್‌ಗೆ ಆರ್ಥಿಕ ಮತ್ತು ಭದ್ರತಾ ನೆರವು ನೀಡುವ ಸುಮಾರು ₹31 ಸಾವಿರ ಕೋಟಿ ಪ್ಯಾಕೇಜ್‌ಗೆ ಕಳೆದ ತಿಂಗಳಷ್ಟೇ ಅಮೆರಿಕ ಕಾಂಗ್ರೆಸ್ ಅನುಮೋದನೆ ನೀಡಿತ್ತು.

ಈಗಿನ ಹಣಕಾಸು ನೆರವು ಉಕ್ರೇನ್‌ಗೆ ಅಂತರರಾಷ್ಟ್ರೀಯ ಸಮುದಾಯದಿಂದ ಲಭಿಸುತ್ತಿರುವ ಹೊಸ ಮಜಲಿನ ಬೃಹತ್ ಬೆಂಬಲವಾಗಿದೆ. ಈ ನೆರವು ಉಕ್ರೇನ್ ಸೇನೆಯ ಸಾಮರ್ಥ್ಯ ಹೆಚ್ಚಿಸುವ ಉದ್ದೇಶ ಹೊಂದಿದೆ. ಬ್ರಿಟನ್ ಹೊಸದಾಗಿ ಘೋಷಿಸಿರುವ ನೆರವು ಪ್ಯಾಕೇಜ್ ಅತ್ಯಾಧುನಿಕ ವಾಯು ರಕ್ಷಣಾ ವ್ಯವಸ್ಥೆ ಮತ್ತು ಶಸ್ತ್ರಾಸ್ತ್ರಗಳನ್ನು ಒಳಗೊಂಡಿದೆ.

**ಸಂಕ್ಷಿಪ್ತ ಸುದ್ದಿ**

### ಇಲಿನಾಯ್: ರಾಜಾ ಕೃಷ್ಣಮೂರ್ತಿಗೆ ಜಯ

ವಾಷಿಂಗ್ಟನ್ (ಪಿಟಿಐ): ಅಮೆರಿಕದಲ್ಲಿ ನೆಲೆಸಿರುವ ಭಾರತ ಸಂಜಾತ ರಾಜಾ ಕೃಷ್ಣಮೂರ್ತಿ ಅವರು ಡೆಮಾಕ್ರಟಿಕ್‌ನ ಪ್ರಾಥಮಿಕ ಚುನಾವಣೆಯಲ್ಲಿ ಇಲಿನಾಯ್‌ನಿಂದ ಗೆಲುವು ದಾಖಲಿಸಿದ್ದಾರೆ.

ಅವರು ತಮ್ಮ ಪ್ರತಿಸ್ಪರ್ಧಿ ಜುನೈದ್ ಅಹ್ಮದ್ ಅವರನ್ನು ಶೇ71ಕ್ಕೂ ಅಧಿಕ ಮತಗಳ ಅಂತರದಿಂದ ಮಣಿಸಿದ್ದಾರೆ. 48 ವರ್ಷದ ಕೃಷ್ಣಮೂರ್ತಿ, ನವದೆಹಲಿಯಲ್ಲಿ ಜನಿಸಿದ್ದರು. ಅವರ ಪಾಲಕರು ತಮಿಳುನಾಡಿನವರು. ನವೆಂಬರ್ 8ರಂದು ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಅವರು ರಿಪಬ್ಲಿಕ್ ಪಕ್ಷದ ಕ್ರಿಸ್ ಡಾರ್ಗಿಸ್ ವಿರುದ್ಧ ಪೈಪೋಟಿ ನಡೆಸಲಿದ್ದಾರೆ.

### ಅಮೆರಿಕ 'ಸುಪ್ರೀಂ'ಗೆ ಕಪ್ಪು ಮಹಿಳೆ ನೇಮಕ

ವಾಷಿಂಗ್ಟನ್ (ರಾಯಿಟರ್ಸ್): ಅಮೆರಿಕದ ಸುಪ್ರೀಂಕೋರ್ಟ್‌ನ ನೂತನ ನ್ಯಾಯಮೂರ್ತಿಯಾಗಿ ಕೆತಾಂಜಿ ಬ್ರೌನ್ ಜಾಕ್ಸನ್ ಪ್ರಮಾಣ ವಚನ ಸ್ವೀಕರಿಸಿದರು. ಇದರೊಂದಿಗೆ ಈ ಹುದ್ದೆಗೇರಿದ ಕಪ್ಪುಜನಾಂಗದ ಮೊದಲ ಮಹಿಳೆ ಎಂಬ ಖ್ಯಾತಿಗೆ ಪಾತ್ರರಾದರು.

ಅಮೆರಿಕದ ಸೆನೆಟ್ ಈ ವರ್ಷದ ಏಪ್ರಿಲ್ 7ರಂದು 51 ವರ್ಷದ ಕೆತಾಂಜಿ ಅವರ ನೇಮಕವನ್ನು ಅಧಿಕೃತಗೊಳಿಸಿತ್ತು. ಕೆತಾಂಜಿ ಅವರು ಅಮೆರಿಕ ಸುಪ್ರೀಂಕೋರ್ಟ್‌ನ 116ನೇ ನ್ಯಾಯಮೂರ್ತಿಯಾಗಿದ್ದಾರೆ. ಈ ಹುದ್ದೆಗೇರಿದ ಆರನೇ ಮಹಿಳೆ ಹಾಗೂ ಕಪ್ಪು ಜನಾಂಗಕ್ಕೆ ಸೇರಿದ ಮೂರನೇ ವ್ಯಕ್ತಿಯಾಗಿದ್ದಾರೆ.

### 41 ಲಕ್ಷಕ್ಕೂ ಅಧಿಕ ಕೋವಿಡ್ ಪ್ರಕರಣ ಪತ್ತೆ

ಜಿನೀವಾ (ಎಪಿ): ಕಳೆದ ವಾರ ವಿಶ್ವದಾದ್ಯಂತ ಹೊಸ ಕೋವಿಡ್ ಪ್ರಕರಣಗಳ ಸಂಖ್ಯೆ ಶೇಕಡ 18ರಷ್ಟು ಏರಿಕೆಯಾಗಿದ್ದು, ಜಾಗತಿಕವಾಗಿ 41 ಲಕ್ಷಕ್ಕಿಂತಲೂ ಹೆಚ್ಚು ಪ್ರಕರಣಗಳು ವರದಿಯಾಗಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ತಿಳಿಸಿದೆ.

ಕೋವಿಡ್‌ನಿಂದ ಸಾವಿನ ಸಂಖ್ಯೆ ಮಧ್ಯಪ್ರಾಚ್ಯ, ಆಗ್ನೇಯ ಏಷ್ಯಾ ಮತ್ತು ಅಮೆರಿಕದಲ್ಲಿ ಹೆಚ್ಚಿದೆ ಎಂದು ತಿಳಿಸಿದೆ.

### ಸರಣಿ ಜಯದ ಮೇಲೆ ಭಾರತ ಕಣ್ಣು; ಬೆನ್‌ಸ್ಟೋಕ್ಸ್ ಪಡೆಗೆ ಸಮಬಲದ ಛಲ

# ಬೂಮ್ರಾ ನಾಯಕತ್ವದ 'ಟೆಸ್ಟ್'

- ಇದೇ ಮೊದಲ ಬಾರಿ ನಾಯಕತ್ವ ವಹಿಸಲಿರುವ ಬೂಮ್ರಾ
- ಸರಣಿಯಲ್ಲಿ 2–1ರಿಂದ ಮುಂದಿರುವ ಭಾರತ ತಂಡ
- ಎರಡು ವರ್ಷಗಳಿಂದ ಶತಕ ಗಳಿಸದ ವಿರಾಟ್ ಕೊಹ್ಲಿ

ಎಜ್‌ಬಾಸ್ಟನ್ (ಪಿಟಿಐ): 'ಯಾರ್ಕರ್ ಕಿಂಗ್' ಜಸ್‌ಪ್ರೀತ್ ಬೂಮ್ರಾ ಮುಂದೆ ಈಗ ಹೊಸ ಸವಾಲು ಎದುರಾಗಿದೆ. ಶುಕ್ರವಾರ ಇಲ್ಲಿ ಆರಂಭವಾಗಲಿರುವ ಇಂಗ್ಲೆಂಡ್ ಎದುರಿನ ಟೆಸ್ಟ್ ಪಂದ್ಯದಲ್ಲಿ ಅವರು ತಮ್ಮ ನಾಯಕತ್ವದ ಸಾಮರ್ಥ್ಯ ಸಾಬೀತುಪಡಿಸಬೇಕಿದೆ.

ಒಂಬತ್ತು ತಿಂಗಳುಗಳ ಹಿಂದೆ ನಡೆದಿದ್ದ ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಭಾರತವು 2–1ರ ಮುನ್ನಡೆ ಸಾಧಿಸಿತ್ತು. ಆದರೆ, ಕೊನೆಯ ಟೆಸ್ಟ್ ಸಮಯಕ್ಕೆ ಆಟಗಾರರನ್ನು ಕೋವಿಡ್ ಕಾಡಿತ್ತು. ಅದರಿಂದಾಗಿ ಆ ಪಂದ್ಯವನ್ನು ಈಗ ಆಯೋಜಿಸಲಾಗುತ್ತಿದೆ.

ಈ ಅವಧಿಯಲ್ಲಿ ಥೇಮ್ಸ್ ನದಿಯಲ್ಲಿ ಬಹಳಷ್ಟು ನೀರು ಹರಿದುಹೋಗಿದೆ. ಉಭಯ ತಂಡಗಳಲ್ಲಿಯೂ ಹಲವು ಬದಲಾವಣೆಗಳು ಆಗಿವೆ. ಆಗ ಭಾರತ ತಂಡಕ್ಕೆ ವಿರಾಟ್ ಕೊಹ್ಲಿ ನಾಯಕತ್ವ ವಹಿಸಿದ್ದರು. ನಂತರದ ಬೆಳವಣಿಗೆಯಲ್ಲಿ ರೋಹಿತ್ ಶರ್ಮಾ ನಾಯಕರಾದರು. ಇದೀಗ ಅವರಿಗೆ ಕೋವಿಡ್ ಖಚಿತವಾಗಿರುವುದರಿಂದ ಪ್ರತ್ಯೇಕವಾಸಕ್ಕೆ ತೆರಳಿದ್ದಾರೆ. ಉಪನಾಯಕ ಕೆ.ಎಲ್. ರಾಹುಲ್ ಜರ್ಮನಿಯಲ್ಲಿ ಹರ್ನಿಯಾ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ವಿಶ್ರಾಂತಿಯಲ್ಲಿದ್ದಾರೆ. ಅದರಿಂದಾಗಿ ವೇಗಿ ಬೂಮ್ರಾಗೆ ನಾಯಕತ್ವದ ಹೊಣೆ ವಹಿಸಲಾಗಿದೆ.

ಕಪಿಲ್ ದೇವ್ ನಂತರ ಟೆಸ್ಟ್ ತಂಡಕ್ಕೆ ನಾಯಕರಾದ ವೇಗದ ಬೌಲರ್ ಎಂಬ ಹೆಗ್ಗಳಿಕೆ ಬೂಮ್ರಾ ಅವರದ್ದು. ಕಪಿಲ್ ನಂತರ ಜಹೀರ್ ಖಾನ್ ಮತ್ತು ಜಾವಗಲ್ ಶ್ರೀನಾಥ್ ಅವರು ಭಾರತ ಕಂಡ ಶ್ರೇಷ್ಠ ವೇಗಿಗಳು. ಆದರೆ ಅವರಿಬ್ಬರಿಗೂ ನಾಯಕತ್ವದ ಅವಕಾಶ ಸಿಕ್ಕಿರಲಿಲ್ಲ.

ಬೂಮ್ರಾಗೆ ಸದ್ಯದ ಸವಾಲು ಸುಲಭದ್ದಲ್ಲ. ತಂಡವು ಈ ಪಂದ್ಯದಲ್ಲಿ ಸೋತರೆ ಸರಣಿ ಸಮಬಲ ಆಗುತ್ತದೆ. ಆದರೆ ಇಂಗ್ಲೆಂಡ್ ನೆಲದಲ್ಲಿ ಸರಣಿಜಯದ ಶ್ರೇಯ ಸಿಗುವುದಿಲ್ಲ. ಒಂದೊಮ್ಮೆ ಪಂದ್ಯ ಡ್ರಾ ಆದರೂ ಗೆಲುವಿನ ಸಂಭ್ರಮ ಭಾರತದ್ದಾಗಲಿದೆ. ಅಲ್ಲದೇ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಅಂಕಪಟ್ಟಿಯಲ್ಲಿ ಬಡ್ತಿಯೂ ಸಿಗಲಿದೆ.

ರೋಹಿತ್ ಗೈರುಹಾಜರಿಯಲ್ಲಿ; ಚೇತೇಶ್ವರ್ ಪೂಜಾರ ಅಥವಾ ಹನುಮವಿಹಾರಿ ಅವರಲ್ಲಿ ಒಬ್ಬರು ಶುಭಮನ್ ಗಿಲ್ ಜೊತೆಗೆ ಇನಿಂಗ್ಸ್ ಆರಂಭಿಸುವ ಸಾಧ್ಯತೆ ಇದೆ. ಇದರಿಂದಾಗಿ ಮಯಂಕ್ ಅಗರವಾಲ್ ಅವರಿಗೆ ಅವಕಾಶ ಸಿಗುವ ಸಾಧ್ಯತೆ ಕಡಿಮೆ. ಕೌಂಟಿಯಲ್ಲಿ ಆಡಿರುವ ಪೂಜಾರ ಟೆಸ್ಟ್ ಕ್ರಿಕೆಟ್‌ನಲ್ಲಿ ತಮ್ಮ ಹಳೆಯ ಆಟಕ್ಕೆ ಮರಳುವ ನಿರೀಕ್ಷೆ ಇದೆ. ಆದರೆ ಕಳೆದ ಎರಡು ವರ್ಷಗಳಿಂದ ಯಾವುದೇ ಮಾದರಿಯಲ್ಲಿಯೂ ಶತಕ ಗಳಿಸದ ಕೊಹ್ಲಿ ಲಯಕ್ಕೆ ಮರಳುವರೇ ಎಂಬ ಕುತೂಹಲ ಗರಿಗೆದರಿದೆ.

'ಕೊಹ್ಲಿ ಶತಕ ಗಳಿಸಬೇಕೆಂದೇನೂ ಇಲ್ಲ. ಪಂದ್ಯ ಜಯಿಸಿಕೊಡುಂತಹ ಇನಿಂಗ್ಸ್ ಆಡಿದರೆ ಸಾಕು' ಎಂದು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಹೇಳಿದ್ದಾರೆ. ಮಧ್ಯಕ್ರಮಾಂಕದಲ್ಲಿ ರಿಷಭ್ ಪಂತ್, ರವೀಂದ್ರ ಜಡೇಜ, ಶ್ರೇಯಸ್ ಅಯ್ಯರ್ ನೀಡುವ ಕಾಣಿಕೆಯೂ ಮಹತ್ವದ್ದಾಗಲಿದೆ. ಬೌಲಿಂಗ್‌ನಲ್ಲಿ ಬೂಮ್ರಾಗೆ ಮೊಹಮ್ಮದ್ ಶಮಿ, ಶಾರ್ದೂಲ್ ಮತ್ತು ಸಿರಾಜ್ ಅವರು ಜೊತೆಗೂಡಲಿದ್ದಾರೆ.

ಇಂಗ್ಲೆಂಡ್ ತಂಡದಲ್ಲಿಯೂ ನಾಯಕತ್ವದ ಬದಲಾವಣೆಯಾಗಿದೆ. ವಿಶ್ವಶ್ರೇಷ್ಠ ಆಲ್‌ರೌಂಡರ್‌ಗಳಲ್ಲಿ ಒಬ್ಬರಾಗಿರುವ ಬೆನ್ ಸ್ಟೋಕ್ಸ್ ತಂಡವನ್ನು ಮುನ್ನಡೆಸುತ್ತಿದ್ದಾರೆ. ಈಚೆಗೆ ವಿಶ್ವ ಟೆಸ್ಟ್ ಚಾಂಪಿಯನ್ ನ್ಯೂಜಿಲೆಂಡ್ ಎದುರು ಸ್ಟೋಕ್ಸ್ ಬಳಗವು ಕ್ಲೀನ್‌ಸ್ವೀಪ್ ಮಾಡಿತ್ತು. ಸರಣಿಯ ಎರಡು ಪಂದ್ಯಗಳಲ್ಲಿ ಕಠಿಣ ಗುರಿ ಬೆನ್ನಟ್ಟಿ ಜಯಸಿತ್ತು.

ಅಮೋಘ ಲಯದಲ್ಲಿರುವ ಜೋ ರೂಟ್, ಜಾನಿ ಬೆಸ್ಟೊ ಅವರನ್ನು ಕಟ್ಟಿಹಾಕುವ ಸವಾಲು ಭಾರತದ ಬೌಲರ್‌ಗಳ ಮುಂದಿದೆ. ಭಾರತದ ಬ್ಯಾಟರ್‌ಗಳೂ ಅನುಭವಿ ಜೇಮ್ಸ್ ಆ್ಯಂಡರ್ಸನ್ ಮತ್ತು ಸ್ಟುವರ್ಟ್ ಬ್ರಾಡ್ ಅವರನ್ನು ಎದುರಿಸಿ ನಿಂತರೆ ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಲಿದೆ.

**ಬಲಾಬಲ**

| | |
|---|---|
| ಪಂದ್ಯ | 130 |
| ಭಾರತ ಜಯ | 31 |
| ಇಂಗ್ಲೆಂಡ್ ಜಯ | 49 |
| ಡ್ರಾ | 50 |



ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ –ಎಎಫ್‌ಪಿ ಚಿತ್ರ



ಜಸ್‌ಪ್ರೀತ್ ಬೂಮ್ರಾ –ಎಎಫ್‌ಪಿ ಚಿತ್ರ

**ತಂಡಗಳು**

**ಭಾರತ:** ಜಸ್‌ಪ್ರೀತ್ ಬೂಮ್ರಾ (ನಾಯಕ), ಶುಭಮನ್ ಗಿಲ್, ಚೇತೇಶ್ವರ್ ಪೂಜಾರ, ಹನುಮವಿಹಾರಿ, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ರಿಷಭ್ ಪಂತ್ (ವಿಕೆಟ್ ಕೀಪರ್), ರವೀಂದ್ರ ಜಡೇಜ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಶಾರ್ದೂಲ್ ಠಾಕೂರ್, ಆರ್. ಅಶ್ವಿನ್, ಪ್ರಸಿದ್ಧಕೃಷ್ಣ, ಕೋನಾ ಶ್ರೀಕರ್ ಭರತ್ (ವಿಕೆಟ್‌ಕೀಪರ್), ಮಯಂಕ್ ಅಗರವಾಲ್, ಉಮೇಶ್ ಯಾದವ್.

**ಇಂಗ್ಲೆಂಡ್:** ಬೆನ್ ಸ್ಟೋಕ್ಸ್ (ನಾಯಕ), ಅಲೆಕ್ಸ್ ಲೀಸ್, ಜಾಕ್ ಕ್ರಾಲಿ, ಒಲಿ ಪೋಪ್, ಜೊ ರೂಟ್, ಜಾನಿ ಬೆಸ್ಟೊ, ಸ್ಯಾಮ್ ಬಿಲ್ಲಿಂಗ್ಸ್ (ವಿಕೆಟ್‌ಕೀಪರ್), ಮ್ಯಾಥ್ಯೂ ಪಾಟ್ಸ್, ಸ್ಟುವರ್ಟ್ ಬ್ರಾಡ್, ಜ್ಯಾಕ್ ಲೀಚ್, ಜೇಮ್ಸ್ ಆ್ಯಂಡರ್ಸನ್,

**ಪಂದ್ಯ ಆರಂಭ**
ಮಧ್ಯಾಹ್ನ 3ರಿಂದ
**ನೇರಪ್ರಸಾರ**
ಸೋನಿ ಸಿಕ್ಸ್, ಸೋನಿ ಟೆನ್ 3 ಮತ್ತು 4

# ಪದಕದ ನಿರೀಕ್ಷೆಯಲ್ಲಿ ಭಾರತ

### ಎಫ್‌ಐಎಚ್ ವಿಶ್ವಕಪ್ ಮಹಿಳಾ ಹಾಕಿ ಟೂರ್ನಿ ಇಂದಿನಿಂದ

ಟೆರೆಸಾ, ಸ್ಪೇನ್ (ಪಿಟಿಐ): ವಿಶ್ವದ 16 ಪ್ರಬಲ ತಂಡಗಳು ಪೈಪೋಟಿ ನಡೆಸಲಿರುವ ಎಫ್‌ಐಎಚ್ ವಿಶ್ವಕಪ್ ಮಹಿಳಾ ಹಾಕಿ ಟೂರ್ನಿಗೆ ಶುಕ್ರವಾರ ಚಾಲನೆ ಲಭಿಸಲಿದ್ದು, ಭಾರತ ತಂಡ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದೆ.

ಜುಲೈ 1 ರಿಂದ 17ರ ವರೆಗೆ ನಡೆಯುವ ಈ ಪ್ರತಿಷ್ಠಿತ ಟೂರ್ನಿಗೆ ನೆದರ್ಲೆಂಡ್ ಮತ್ತು ಸ್ಪೇನ್ ಜಂಟಿ ಆತಿಥ್ಯ ವಹಿಸಿಕೊಂಡಿವೆ. ಭಾರತ ಮಹಿಳಾ ತಂಡ ಒಮ್ಮೆಯೂ ವಿಶ್ವಕಪ್ ಜಯಿಸಿಲ್ಲ. ಸವಿತಾ ಪೂನಿಯಾ ನೇತೃತ್ವದ ತಂಡಕ್ಕೆ ಈ ಬಾರಿ ಪ್ರಶಸ್ತಿಯ ನಿರೀಕ್ಷೆ ಇಲ್ಲದಿದ್ದರೂ, ಅಗ್ರ ಮೂರರಲ್ಲಿ ಕಾಣಿಸಿಕೊಳ್ಳಬೇಕೆಂಬ ಛಲ ಹೊಂದಿದೆ.

ವಿಶ್ವಕಪ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದು ಭಾರತದ ಇದುವರೆಗಿನ ಉತ್ತಮ ಸಾಧನೆ ಎನಿಸಿದೆ. 1974 ರಲ್ಲಿ ನಡೆದಿದ್ದ ಚೊಚ್ಚಲ ಟೂರ್ನಿಯಲ್ಲಿ ಆ ಸಾಧನೆ ಮಾಡಿಬಂದಿತ್ತು.

ಕಳೆದ ಒಂದು ವರ್ಷದ ಅವಧಿಯಲ್ಲಿ ತಂಡದ ಪ್ರದರ್ಶನವನ್ನು ಗಮನಿಸಿದಾಗ, ಈ ಬಾರಿ ಐತಿಹಾಸಿಕ ಸಾಧನೆಯ ಭರವಸೆ ಮೂಡಿದೆ. ಕಳೆದ ವರ್ಷ ನಡೆದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿತ್ತು.

ಇತ್ತೀಚೆಗೆ ಕೊನೆಗೊಂಡ ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಮೂರನೇ ಸ್ಥಾನ ಗಳಿಸಿದ್ದು, ಕ್ರಮಿಸಿ ಸಾಧನೆಯಾಗಿದೆ. ಅರ್ಜೆಂಟೀನಾ, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ತಂಡಗಳನ್ನು ಭಾರತ ಹಿಂದಿಕ್ಕಿತ್ತು.

ಇಂಗ್ಲೆಂಡ್ ವಿರುದ್ಧ ಭಾನುವಾರ ನಡೆಯಲಿರುವ ಪಂದ್ಯದೊಂದಿಗೆ ಭಾರತ, ಟೂರ್ನಿಯಲ್ಲಿ ತನ್ನ ಅಭಿಯಾನ ಆರಂಭಿಸಲಿದೆ.

**ನೆದರ್ಲೆಂಡ್ 'ಫೇವರಿಟ್':** ಎಂಟು ಬಾರಿ ವಿಶ್ವಕಪ್ ಜಯಿಸಿರುವ ನೆದರ್ಲೆಂಡ್ ಈ ಬಾರಿಯೂ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡ ಎನಿಸಿಕೊಂಡಿದೆ. 'ಡಚ್' ತಂಡ ಹ್ಯಾಟ್ರಿಕ್ ಕಿರೀಟದ ಕನಸಿನಲ್ಲಿದೆ. ಎಫ್‌ಐಎಚ್ ಪ್ರೊ ಲೀಗ್ ಗೆದ್ದುಕೊಂಡಿರುವುದು ತಂಡದ ಆತ್ಮವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸಿದೆ.

ಒಟ್ಟು 16 ತಂಡಗಳನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಪ್ರತಿ ಗುಂಪಿನಲ್ಲಿ ಅಗ್ರಸ್ಥಾನ ಪಡೆಯುವ ತಂಡ ನೇರವಾಗಿ ಕ್ವಾರ್ಟರ್‌ಫೈನಲ್‌ಗೆ ಅರ್ಹತೆ ಪಡೆಯಲಿವೆ. ಎರಡು ಮತ್ತು ಮೂರನೇ ಸ್ಥಾನ ಪಡೆಯುವ ತಂಡಗಳ ನಡುವಿನ ಹಣಾಹಣಿಯು, ಕ್ವಾರ್ಟರ್‌ಫೈನಲ್‌ನ ಇನ್ನುಳಿದ ನಾಲ್ಕು ಸ್ಥಾನಗಳನ್ನು ನಿರ್ಧರಿಸಲಿವೆ.



ಭಾರತ ತಂಡದ ನಾಯಕಿ ಸವಿತಾ

**ಭಾರತದ ಪಂದ್ಯಗಳು**

| ದಿನಾಂಕ | ಎದುರಾಳಿ |
|---|---|
| ಜು.3 | ಇಂಗ್ಲೆಂಡ್ |
| ಜು.5 | ಚೀನಾ |
| ಜು.7 | ನ್ಯೂಜಿಲೆಂಡ್ |

## ಸಂಕ್ಷಿಪ್ತ ಸುದ್ದಿ

### ಹಾಕಿ ತಂಡದ ಐವರಿಗೆ ಕೋವಿಡ್

ಬೆಂಗಳೂರು/ನವದೆಹಲಿ (ಪಿಟಿಐ): ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ತೆರಳಲು ಸಿದ್ಧತೆ ನಡೆಸಿರುವ ಹಾಕಿ ಪುರುಷರ ತಂಡದ ಐವರಿಗೆ ಕೋವಿಡ್ ಖಚಿತವಾಗಿದೆ.

ನಗರದ ಭಾರತ ಕ್ರೀಡಾ ಪ್ರಾಧಿಕಾರದ ವಸತಿ ನಿಲಯದಲ್ಲಿ ಶಿಬಿರ ನಡೆಯುತ್ತಿದೆ. ತಂಡದ ಮುಖ್ಯ ಕೋಚ್ ಗ್ರಹಾಂ ರೀಡ್, ಸ್ಟ್ರೈಕರ್ ಗುರ್ಜಂತ್ ಸಿಂಗ್ ಅವರಿಗೆ ಕೋವಿಡ್ ಇರುವುದು ಖಚಿತವಾಗಿದೆ ಎಂದು ಮೂಲಗಳು ತಿಳಿಸಿವೆ.

'ಇಬ್ಬರು ಆಟಗಾರರು ಮತ್ತು ಮೂವರು ನೆರವು ಸಿಬ್ಬಂದಿಗೆ ಕೋವಿಡ್ ಇರುವುದು ಖಚಿತವಾಗಿದೆ' ಎಂದು ಹಾಕಿ ಇಂಡಿಯಾ ಪ್ರಕಟಣೆಯಲ್ಲಿ ತಿಳಿಸಿದೆ. ಆದರೆ ಆಟಗಾರರ ಹೆಸರುಗಳನ್ನು ಬಹಿರಂಗಪಡಿಸಿಲ್ಲ.

ಮಿಡ್‌ಫೀಲ್ಡರ್ ಆಶಿಶ್ ಕುಮಾರ್ ಟೊಪ್ಪೊ ಅವರಿಗೂ ಸೋಂಕು ತಗುಲಿದೆ ಎಂದು ಹೇಳಲಾಗಿದೆ.

ಜುಲೈ 23ರಂದು ಶಿಬಿರ ಮುಕ್ತಾಯವಾಗಲಿದೆ. ಅದರ ನಂತರ ತಂಡವು ಬರ್ಮಿಂಗ್‌ಹ್ಯಾಮ್‌ಗೆ ತೆರಳಲಿದೆ.



ಗ್ರಹಾಂ ರೀಡ್

### ಟೆನಿಸ್: ಭಾರತ–ನಾರ್ವೆ ಸೆಣಸು

ನವದೆಹಲಿ (ಪಿಟಿಐ): ಭಾರತ ತಂಡದವರು ಡೇವಿಸ್ ಕಪ್ ಟೆನಿಸ್ ವಿಶ್ವಗುಂಪು–1 ಟೂರ್ನಿಯ ಪಂದ್ಯದಲ್ಲಿ ನಾರ್ವೆ ತಂಡವನ್ನು ಎದುರಿಸಲಿದ್ದಾರೆ.

'ಈ ಪಂದ್ಯಕ್ಕೆ ನಾರ್ವೆ ಆತಿಥ್ಯ ವಹಿಸಲಿದ್ದು, ಸೆ.16 ಮತ್ತು 17 ರಂದು ನಡೆಯಲಿದೆ' ಎಂದು ಅಖಿಲ ಭಾರತ ಟೆನಿಸ್ ಸಂಸ್ಥೆ (ಎಐಟಿಎ) ತಿಳಿಸಿದೆ.

'ಡೇವಿಸ್ ಕಪ್ ಟೂರ್ನಿಯ ಇತಿಹಾಸದಲ್ಲಿ ಭಾರತ ಮತ್ತು ನಾರ್ವೆ ಇದೇ ಮೊದಲ ಬಾರಿಗೆ ಎದುರಾಗಲಿವೆ. ಆದ್ದರಿಂದ ಎರಡೂ ದೇಶಗಳ ಟೆನಿಸ್ ಪ್ರೇಮಿಗಳು ಈ ಪಂದ್ಯವನ್ನು ಕುತೂಹಲದಿಂದ ಎದುರು ನೋಡುತ್ತಿದ್ದಾರೆ' ಎಂದು ಪ್ರಕಟಣೆಯಲ್ಲಿ ಹೇಳಿದೆ.

### ರಾಹುಲ್‌ಗೆ ಶಸ್ತ್ರಚಿಕಿತ್ಸೆ ಯಶಸ್ವಿ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಕೆ.ಎಲ್. ರಾಹುಲ್ ಅವರಿಗೆ ಸ್ಪೋರ್ಟ್ಸ್ ಹರ್ನಿಯಾ ಶಸ್ತ್ರಚಿಕಿತ್ಸೆಯನ್ನು ಜರ್ಮನಿಯಲ್ಲಿ ಯಶಸ್ವಿಯಾಗಿ ಮಾಡಲಾಗಿದೆ.

ಹೋದ ತಿಂಗಳು ಭಾರತದಲ್ಲಿ ನಡೆದಿದ್ದ ದಕ್ಷಿಣ ಆಫ್ರಿಕಾ ಎದುರಿನ ಟಿ20 ಸರಣಿಗೂ ಮುನ್ನ ಅವರು ತೀವ್ರ ಹೊಟ್ಟೆನೋವು ಮತ್ತು ಕಾಲಿನ ಸ್ನಾಯು ಸೆಳೆತದಿಂದ ಬಳಲಿದ್ದರು. ಆದ್ದರಿಂದ ಟೂರ್ನಿಯಿಂದ ಹಿಂದೆ ಸರಿದಿದ್ದರು.

'ಕಳೆದ ಕೆಲವು ದಿನಗಳು ತುಂಬಾ ಕಷ್ಟದಾಯಕವಾಗಿದ್ದವು. ವೈದ್ಯರ ತಂಡವು ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿದೆ. ಚೇತರಿಸಿಕೊಳ್ಳುತ್ತಿದ್ದೇನೆ' ಎಂದು ಕನ್ನಡಿಗ ರಾಹುಲ್ ಟ್ವೀಟ್ ಮಾಡಿದ್ದಾರೆ.



ರಾಹುಲ್

### ಗಾಲ್ಫ್ ಕ್ಲಬ್: ಪದಾಧಿಕಾರಿ ಆಯ್ಕೆ

ಬೆಂಗಳೂರು: ಬೆಂಗಳೂರು ಗಾಲ್ಫ್ ಕ್ಲಬ್‌ನ 2022–23ರ ಸಾಲಿನ ನೂತನ ಪದಾಧಿಕಾರಿಗಳ ಆಯ್ಕೆ ಇತ್ತೀಚೆಗೆ ನಡೆಯಿತು.

ಪದಾಧಿಕಾರಿಗಳ ವಿವರ: ಕ್ಯಾಪ್ಟನ್– ಎ.ಸಿ.ಸುರೇಶ್ ಚಂದ್ರ. ಕಾರ್ಯದರ್ಶಿ– ಡಿ.ಎನ್.ವಸಂತ ಕುಮಾರ್. ಖಜಾಂಚಿ– ಬಿ.ಕೆ.ಸುಬ್ಬಯ್ಯ. ಸಮಿತಿ ಸದಸ್ಯರು– ಶ್ರೀದೇವಿ ಬೈರಪ್ಪ, ಆರ್.ಎನ್.ಶಶಾಂಕ್, ಸುಮಂತ್ ಎನ್. ಯಡೂರಪ್ಪ, ರಘು ಶಿವರಾಮಯ್ಯ, ಎಂ.ಕೆ.ನರಸಿಂಗ ರಾವ್

# ವಿಶ್ವ ಅಥ್ಲೆಟಿಕ್ಸ್: ನೀರಜ್ ನಾಯಕ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಜಾವೆಲಿನ್ ಅಥ್ಲೀಟ್ ನೀರಜ್ ಚೋಪ್ರಾ ಇದೇ ತಿಂಗಳು ನಡೆಯಲಿರುವ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಸ್ಪರ್ಧಿಸುವ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ.

ಅಮೆರಿಕದಲ್ಲಿ ಜುಲೈ 15ರಿಂದ 24ರವರೆಗೆ ಕೂಟ ನಡೆಯಲಿದೆ. ಇದಕ್ಕಾಗಿ 22 ಅಥ್ಲೀಟ್‌ಗಳ ತಂಡವನ್ನು ಆಯ್ಕೆ ಮಾಡಲಾಗಿದೆ. ಗುರುವಾರ ಎಎಫ್‌ಐ ಪ್ರಕಟಿಸಿರುವ ತಂಡದಲ್ಲಿ 17 ಪುರುಷರು ಮತ್ತು ಐವರು ಮಹಿಳೆಯರು ಇದ್ದಾರೆ.

ತಂಡಗಳು: ಪುರುಷರು: ನೀರಜ್ ಚೋಪ್ರಾ, ರೋಹಿತ್ ಯಾದವ್ (ಜಾವೆಲಿನ್ ಥ್ರೋ), ಅವಿನಾಶ್ ಸಬ್ಳೆ (3000ಮೀ ಸ್ಟೀಪಲ್‌ಚೇಸ್), ಎಂ.ಪಿ. ಜಬೀರ್ (400 ಮೀ ಹರ್ಡಲ್ಸ್), ಎಂ. ಶ್ರೀಶಂಕರ್ ಮತ್ತು ಮೊಹಮ್ಮದ್ ಅನಾಸ್ ಯಾಹ್ಯಾ (ಲಾಂಗ್ ಜಂಪ್), ಅಬ್ದುಲ್ ಅಬೂಬಕ್ಕರ್, ಪ್ರವೀಣ್ ಚಿತ್ರವೇಲ್, ಎಲ್ದೋಸ್ ಪಾಲ್ (ಟ್ರಿಪಲ್ ಜಂಪ್), ತಜಿಂದರ್ ಪಾಲ್ ಸಿಂಗ್ ತೂರ್ (ಶಾಟ್‌ಪಟ್), ಸಂದೀಪ್ ಕುಮಾರ್ (20 ಕಿ.ಮೀ ರೇಸ್ ವಾಕಿಂಗ್), ಅಮೋಜ್ ಜೇಕಬ್, ನೊಹಾ ನಿರ್ಮಲ್ ಟಾಮ್, ಮೊಹಮ್ಮದ್ ಅಜ್ಮಲ್, ನಾಗನಾಥನ್ ಪಾಂಡಿ, ರಾಜೇಶ್ ರಮೇಶ್, ಮೊಹಮ್ಮದ್ ಅನಾಸ್ ಯಾಹ್ಯಾ (4X400 ಮೀ ರಿಲೆ).

ಮಹಿಳೆಯರು: ಎಸ್ ಧನಲಕ್ಷ್ಮೀ (200 ಮೀ ಓಟ), ಐಶ್ವರ್ಯಾ ಕೈಲಾಶ್ ಮಿಶ್ರಾ (400 ಮೀ), ಪಾರುಲ್ ಚೌಧರಿ (3000ಮೀ ಸ್ಟೀಪಲ್‌ಚೇಸ್), ಅನು ರಾಣಿ (ಜಾವೆಲಿನ್ ಥ್ರೋ), ಪ್ರಿಯಾಂಕಾ ಗೋಸ್ವಾಮಿ (20 ಕಿ.ಮೀ ವಾಕಿಂಗ್).

**ನೀರಜ್‌ಗೆ ಬೆಳ್ಳಿ:** ನೀರಜ್ ಚೋಪ್ರಾ ಅವರು ಸ್ಟಾಕ್‌ಹೋಂನಲ್ಲಿ ಗುರುವಾರ ನಡೆದ ಡೈಮಂಡ್ ಲೀಗ್ ಅಥ್ಲೆಟಿಕ್ ಕೂಟದ ಜಾವೆಲಿನ್ ಥ್ರೋನಲ್ಲಿ 89.94 ಮೀ. ಸಾಧನೆಯೊಂದಿಗೆ ಬೆಳ್ಳಿ ಗೆದ್ದರು.

# ಅನುಚಿತ ವರ್ತನೆ: ಫುಟ್‌ಬಾಲ್ ಕೋಚ್ ಅಮಾನತು


ನವದೆಹಲಿ (ಪಿಟಿಐ): ಭಾರತ 17 ವರ್ಷದೊಳಗಿನ ಮಹಿಳಾ ಫುಟ್‌ಬಾಲ್ ತಂಡದ ಆಟಗಾರ್ತಿಯ ಜತೆ 'ಅನುಚಿತ ವರ್ತನೆ' ತೋರಿದ್ದಕ್ಕೆ, ಸಹಾಯಕ ಕೋಚ್ ಒಬ್ಬರನ್ನು ಅಮಾನತು ಮಾಡಲಾಗಿದೆ. ತಂಡವನ್ನು ತೊರೆದು ತಕ್ಷಣವೇ ಭಾರತಕ್ಕೆ ವಾಪಸಾಗುವಂತೆ ಅವರಿಗೆ ಸೂಚಿಸಲಾಗಿದೆ.

17 ವರ್ಷದೊಳಗಿನ ವಿಶ್ವಕಪ್ ಟೂರ್ನಿಗೆ ಸಿದ್ಧತೆ ನಡೆಸುವ ಅಂಗವಾಗಿ ಭಾರತ ತಂಡ ನಾರ್ವೆ ಪ್ರವಾಸದಲ್ಲಿದ್ದು, ಅಲ್ಲಿ ಈ ಘಟನೆ ನಡೆದಿದೆ.

'ಅಶಿಸ್ತಿನ ವರ್ತನೆಯನ್ನು ಗಂಭೀರವಾಗಿ ಪರಿಗಣಿಸುತ್ತೇವೆ. ಕೋಚ್‌ಅನ್ನು ಅಮಾನತು ಮಾಡಲಾಗಿದ್ದು, ಭಾರತಕ್ಕೆ ವಾಪಸಾಗಿ ತನಿಖೆಗೆ ಹಾಜರಾಗುವಂತೆ ಸೂಚಿಸಲಾಗಿದೆ' ಎಂದು ಎಐಎಫ್‌ಎಫ್ ಆಡಳಿತ ನೋಡಿಕೊಳ್ಳುತ್ತಿರುವ ಆಡಳಿತ ಸಮಿತಿ (ಸಿಒಎ) ಹೇಳಿದೆ.

ಸಹಾಯಕ ಕೋಚ್ ಯಾರು ಎಂಬುದನ್ನು ಸಿಒಎ ಬಹಿರಂಗಪಡಿಸಿಲ್ಲ. ಆದರೆ ಅಲೆಕ್ಸ್ ಅಂಬ್ರೋಸ್ ಅವರ ವಿರುದ್ಧ ಈ ಆರೋಪ ಕೇಳಿಬಂದಿದೆ ಎಂದು ತಂಡದ ಮೂಲಗಳು ತಿಳಿಸಿವೆ.

**ಷೇರುಪೇಟೆ ವಹಿವಾಟು** (▼ 8)




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 15,799 |
| ಇಂದಿನ ಅಂತ್ಯ | 15,780 |
| ▼ | 19 |
| ದಿನದ ಕನಿಷ್ಠ | 15,728 |

**ವಿನಿಮಯ ದರ**

| | |
|---|---|
| $ ಡಾಲರ್ | 79.06 |
| £ ಪೌಂಡ್ | 95.83 |
| € ಯುರೊ | 82.34 |
| ¥ ಯೆನ್ (100ಕ್ಕೆ) | 58 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**



| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹560 |
| 12 ಮೊಟ್ಟೆಗೆ | ₹72 |
| ಮೈಸೂರು | |
| 100 ಮೊಟ್ಟೆಗೆ | ₹560 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)



| | |
|---|---|
| ಶೇಂಗಾ (ರಿಫೈನ್ಡ್) | ₹1600 (1590) |
| ಸೋಯಾ (ರಿಫೈನ್ಡ್) | ₹1360 (1350) |
| ಸೂರ್ಯಕಾಂತಿ (ರಿಫೈನ್ಡ್) | ₹1660 (1640) |
| ಪಾಮೋಲಿನ್ | ₹1285 (1275) |

**ರಾಮನಗರ ರೇಷ್ಮೆಗೂಡು ಧಾರಣೆ**



| | |
|---|---|
| ಮಿಶ್ರತಳಿ (ಸಿ.ಬಿ) | ₹155-585 |
| ದ್ವಿತಳಿ (ಬಿ.ವಿ) | ₹355-826 |

**ಎನ್.ಆರ್.ಪುರ ರಬ್ಬರ್** (ಪ್ರತಿ ಕೆ.ಜಿಗೆ)



| | |
|---|---|
| ಆರ್‌ಎಸ್‌ಎಸ್-4 | ₹175 |
| ಆರ್‌ಎಸ್‌ಎಸ್-5 | ₹166 |
| ಗುಡ್ ಲಾಟ್ | ₹157.50 |

**ತೆಂಗು ಧಾರಣೆ (ಸಾವಿರಕ್ಕೆ)**



| | |
|---|---|
| ಮಂಗಳೂರು | |
| 1ನೇ ದರ್ಜೆ | ₹16000-20000 |
| 2ನೇ ದರ್ಜೆ | ₹12000-15000 |

# 'ಟಾಪ್ ಸಾಧಕ'ರ ಪಟ್ಟಿ: ಕರ್ನಾಟಕಕ್ಕೆ ಸ್ಥಾನ

ನವದೆಹಲಿ (ಪಿಟಿಐ): 2020ರ ವಾಣಿಜ್ಯ ವಹಿವಾಟು ಸುಧಾರಣೆ ಕ್ರಿಯಾ ಯೋಜನೆಯ ಅನುಷ್ಠಾನದ ಆಧಾರದಲ್ಲಿ ಸಿದ್ಧಪಡಿಸಿರುವ, 'ಟಾಪ್ ಸಾಧಕ' ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಪಟ್ಟಿಯಲ್ಲಿ ಕರ್ನಾಟಕ ಸ್ಥಾನ ಪಡೆದಿದೆ.

ಆಂಧ್ರಪ್ರದೇಶ, ಗುಜರಾತ್, ತೆಲಂಗಾಣ, ಹರಿಯಾಣ, ಪಂಜಾಬ್, ತಮಿಳುನಾಡು ಕೂಡ 'ಟಾಪ್ ಸಾಧಕ' ರಾಜ್ಯಗಳ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿವೆ.

ಹಿಮಾಚಲ ಪ್ರದೇಶ, ಮಧ್ಯ ಪ್ರದೇಶ, ಮಹಾರಾಷ್ಟ್ರ, ಒಡಿಶಾ, ಉತ್ತರಾಖಂಡ ಮತ್ತು ಉತ್ತರ ಪ್ರದೇಶ ರಾಜ್ಯಗಳು 'ಸಾಧಕ' ಪಟ್ಟಿಯಲ್ಲಿ ಸ್ಥಾನ ಗಿಟ್ಟಿಸಿಕೊಂಡಿವೆ.

ಹೂಡಿಕೆದಾರರ ವಿಶ್ವಾಸ ಹೆಚ್ಚಿಸುವುದು, ರಾಜ್ಯಗಳಲ್ಲಿ ಉದ್ಯಮ ಸ್ನೇಹಿ ವಾತಾವರಣ ನಿರ್ಮಾಣ ಮಾಡುವುದು ಈ ಪಟ್ಟಿ ಸಿದ್ಧಪಡಿಸುವುದರ ಉದ್ದೇಶ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈ ಪಟ್ಟಿಯನ್ನು ಗುರುವಾರ ಬಿಡುಗಡೆ ಮಾಡಿದರು.

ಕೇಂದ್ರ ವಾಣಿಜ್ಯ ಸಚಿವಾಲಯವು ಈ ವರ್ಷ ರಾಜ್ಯಗಳಿಗೆ ರ‍್ಯಾಂಕ್ ಘೋಷಿಸಿಲ್ಲ. ಬದಲಿಗೆ, ರಾಜ್ಯಗಳನ್ನು ವಿವಿಧ ಹೆಸರುಗಳ ಅಡಿಯಲ್ಲಿ ವರ್ಗೀಕರಿಸಿದೆ. ರ‍್ಯಾಂಕ್ ನೀಡುತ್ತಿದ್ದ ಸಂದರ್ಭದಲ್ಲಿ, ಕಳೆದ ಸಾಲಿನಲ್ಲಿ ಕರ್ನಾಟಕವು 17ನೆಯ ಸ್ಥಾನ ಪಡೆದಿತ್ತು.

ಬೇರೆ ಬೇರೆ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ನಡುವಿನ ವ್ಯತ್ಯಾಸವು ತೀರಾ ಕಡಿಮೆ ಇದ್ದ ಕಾರಣದಿಂದಾಗಿ, ಅವುಗಳಿಗೆ ರ‍್ಯಾಂಕ್ ನೀಡುವ ಬದಲು, ಅವುಗಳನ್ನು ಬೇರೆ ಬೇರೆ ವರ್ಗಗಳ ಅಡಿ ತರಲಾಗಿದೆ ಎಂದು ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯ ಕಾರ್ಯದರ್ಶಿ ಅನುರಾಗ್ ಜೈನ್ ಹೇಳಿದ್ದಾರೆ.

'ಕಾನೂನಿಗೆ ತಿದ್ದುಪಡಿ ತರುವ ಮೂಲಕ, ಕೈಗಾರಿಕೆಗಳ ಸ್ಥಾಪನೆಗೆ ಇದ್ದ ತೊಡಕುಗಳನ್ನು ನಿವಾರಿಸಲಾಗಿದೆ. ನಮ್ಮ ಸರ್ಕಾರವು ಸುಲಲಿತ ವ್ಯವಹಾರಕ್ಕೆ ಹೆಚ್ಚು ಒತ್ತು ನೀಡಿರುವ ಕಾರಣದಿಂದಾಗಿ ಹೂಡಿಕೆದಾರರು ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಂಡವಾಳ ತೊಡಗಿಸುತ್ತಿದ್ದಾರೆ' ಎಂದು ರಾಜ್ಯದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ ಆರ್. ನಿರಾಣಿ ಹೇಳಿದ್ದಾರೆ.

### ವರ್ಚುವಲ್ ಆಗಿ ಪ್ರಧಾನಿ ನರೇಂದ್ರ ಮೋದಿ ಉದ್ಘಾಟನೆ

# ಬಾಷ್ ಸ್ಮಾರ್ಟ್ ಕ್ಯಾಂಪಸ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂತ್ರಜ್ಞಾನ ಮತ್ತು ಸೇವೆಗಳನ್ನು ಪೂರೈಸುವ ಬಾಷ್ ಇಂಡಿಯಾ ಕಂಪನಿಯು ಬೆಂಗಳೂರಿನ ಆಡುಗೋಡಿಯಲ್ಲಿ ಅತಿದೊಡ್ಡ ಸ್ಮಾರ್ಟ್ ಕ್ಯಾಂಪಸ್ 'ಸ್ಪಾರ್ಕ್ ಡಾಟ್ ನೆಕ್ಸ್ಟ್' ಆರಂಭಿಸಿದೆ. ಜರ್ಮನಿಯಿಂದ ಹೊರಗೆ ನಿರ್ಮಾಣ ಆಗಿರುವ ಅತಿದೊಡ್ಡ ಕ್ಯಾಂಪಸ್ ಇದು.

ಆಡುಗೋಡಿಯಲ್ಲಿ ಇದ್ದ ಕಂಪನಿಯ ಕೇಂದ್ರ ಕಚೇರಿಯನ್ನೂ ಪರಿವರ್ತಿಸಿ, 76 ಎಕರೆ ಪ್ರದೇಶದಲ್ಲಿ ಈ ಕ್ಯಾಂಪಸ್ ನಿರ್ಮಿಸಲಾಗಿದೆ. ಇದನ್ನು ಅಭಿವೃದ್ಧಿಪಡಿಸಲು ಕಂಪನಿಯು ₹ 800 ಕೋಟಿ ಹೂಡಿಕೆ ಮಾಡಿದೆ.

ವರ್ಚುವಲ್ ಆಗಿ ಕ್ಯಾಂಪಸ್ ಉದ್ಘಾಟಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, 'ಭಾರತ ಮತ್ತು ಬಾಷ್ ಇಂಡಿಯಾ ಪಾಲಿಗೆ ಇದೊಂದು ವಿಶೇಷ ವರ್ಷ. ದೇಶವು 75ನೇ ಸ್ವಾತಂತ್ರ್ಯೋತ್ಸವದ ಸಂಭ್ರಮಾಚರಣೆಯಲ್ಲಿ ಇದೆ, ಬಾಷ್ ಕಂಪನಿಯು ಭಾರತದಲ್ಲಿ 100ನೇ ವರ್ಷದ ಸಂಭ್ರಮದಲ್ಲಿದೆ' ಎಂದರು.

'ಭಾರತ ಮತ್ತು ಜಗತ್ತಿಗೆ ಭವಿಷ್ಯದ ಉತ್ಪನ್ನಗಳು ಮತ್ತು ಪರಿಹಾರಗಳನ್ನು ಅಭಿವೃದ್ಧಿಪಡಿಸುವಲ್ಲಿ ಈ ಕ್ಯಾಂಪಸ್ ಮುಂದಾಳತ್ವ ವಹಿಸಲಿದೆ. ಭಾರತದಲ್ಲಿ ಇನ್ನೂ ಹೆಚ್ಚಿನದ್ದನ್ನು ಮಾಡುವಂತೆ ಮತ್ತು ಮುಂದಿನ 25 ವರ್ಷಗಳಿಗೆ ಒಂದು ಗುರಿ ಹಾಕಿಕೊಳ್ಳುವಂತೆ ನಾನು ಬಾಷ್‌ಗೆ ಮನವಿ ಮಾಡುತ್ತೇನೆ' ಎಂದು ಮೋದಿ ಹೇಳಿದರು.

'ಆಟೊಮೊಟಿವ್ ಮತ್ತು ಆಟೊಮೊಟಿವ್ ಅಲ್ಲದ ಉತ್ಪನ್ನಗಳು ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳುವ ಸಾಮರ್ಥ್ಯ ಹೊಂದಿದೆ. ತಂತ್ರಜ್ಞಾನ ಕ್ಷೇತ್ರದಲ್ಲಿ ಬೆಂಗಳೂರಿನ ನಾಯಕತ್ವವನ್ನು ಇದು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುವ ಭರವಸೆ ಇದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಈ ಕ್ಯಾಂಪಸ್ ಮೂಲಕ ಸ್ಮಾರ್ಟ್ ಮತ್ತು ಸುಸ್ಥಿರ ಪರಿಹಾರಗಳಲ್ಲಿ ಹೂಡಿಕೆ ಮಾಡುವುದನ್ನು ಮುಂದುವರಿಸಲಾಗುವುದು ಎಂದು ಬಾಷ್ ಸಮೂಹದ ಭಾರತದ ಅಧ್ಯಕ್ಷ ಸೌಮಿತ್ರ ಭಟ್ಟಾಚಾರ್ಯ ತಿಳಿಸಿದರು.

ಈ ಕ್ಯಾಂಪಸ್‌ನಲ್ಲಿ ದೀರ್ಘಾವಧಿಯಲ್ಲಿ ವಿದ್ಯುತ್ ಬಳಕೆ ಕಡಿಮೆ ಮಾಡುವ ಉದ್ದೇಶದಿಂದ ಕಂಪನಿಯು ₹ 50 ಕೋಟಿ ಹೂಡಿಕೆ ಮಾಡಿದೆ.

> **100 ವರ್ಷದ ಹಿಂದೆ ಜರ್ಮನಿಯ ಕಂಪನಿಯಾಗಿ ಭಾರತಕ್ಕೆ ಬಂದ ಬಾಷ್, ಇಂದು ಭಾರತದ ಕಂಪನಿಯೇ ಆಗಿದೆ**
> **ನರೇಂದ್ರ ಮೋದಿ,** ಪ್ರಧಾನಿ

> **ಉತ್ತಮ ಗುಣಮಟ್ಟದ ಜೀವನಕ್ಕೆ ಅಗತ್ಯವಿರುವ ಬಳಕೆದಾರ ಕೇಂದ್ರಿತ ಆವಿಷ್ಕಾರಗಳನ್ನು ಅಭಿವೃದ್ಧಿಪಡಿಸಲು ಇದು ಉತ್ತೇಜನ ನೀಡಲಿದೆ**
> **ಫಿಲಿಜ್ ಅಲ್ಬ್ರೆಕ್ಟ್,** ರಾಬರ್ಟ್ ಬಾಷ್‌ನ ಆಡಳಿತ ಮಂಡಳಿ ಸದಸ್ಯೆ



ಸ್ಮಾರ್ಟ್ ಕ್ಯಾಂಪಸ್ ಉದ್ಘಾಟನೆ ಕಾರ್ಯಕ್ರಮದ ಮುಖ್ಯ ಅತಿಥಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ರಾಬರ್ಟ್ ಬಾಷ್ ಕಂಪನಿಯ ಆಡಳಿತ ಮಂಡಳಿ ಸದಸ್ಯೆ ಫಿಲಿಜ್ ಅಲ್ಬ್ರೆಕ್ಟ್ ಬರಮಾಡಿಕೊಂಡರು. ಬಾಷ್ ಸಮೂಹದ ಭಾರತದ ಅಧ್ಯಕ್ಷ ಸೌಮಿತ್ರ ಭಟ್ಟಾಚಾರ್ಯ ಇದ್ದರು –ಪ್ರಜಾವಾಣಿ ಚಿತ್ರ

## ಇಂದಿನಿಂದ ಕೆಲವು ಹೊಸ ನಿಯಮಗಳು

ತೆರಿಗೆ, ಪ್ಯಾನ್, ಕ್ರೆಡಿಟ್ ಕಾರ್ಡ್ ವಿಚಾರವಾಗಿ ಕೆಲವು ಬದಲಾವಣೆಗಳು ಇಂದಿನಿಂದ ಜಾರಿಗೆ ಬರಲಿವೆ. ಅವುಗಳು ಏನು ಎಂಬುದರ ಕಿರು ವಿವರ ಇಲ್ಲಿದೆ.

**1) ಪ್ಯಾನ್-ಆಧಾರ್ ಜೋಡಣೆ:** ಪ್ಯಾನ್ ಸಂಖ್ಯೆಯನ್ನು ಆಧಾರ್ ಜೊತೆ ಜೋಡಿಸದೆ ಇದ್ದರೆ, ಜುಲೈ 1ರ ನಂತರ ಆ ಕೆಲಸಕ್ಕೆ ಮುಂದಾದರೆ ₹ 1,000 ದಂಡ ಪಾವತಿ ಮಾಡಬೇಕಾಗುತ್ತದೆ. ಜೂನ್ 30ರೊಳಗೆ ಜೋಡಣೆ ಮಾಡುವವರು ₹ 500 ದಂಡ ಪಾವತಿ ಮಾಡಿದ್ದರೆ ಸಾಕಿತ್ತು.




ಆಧಾರ್ ಜೊತೆ ಜೋಡಣೆ ಆಗದ ಪ್ಯಾನ್ ಸಂಖ್ಯೆಗಳು 2023ರ ಮಾರ್ಚ್‌ವರೆಗೆ ಚಾಲ್ತಿಯಲ್ಲಿ ಇರುತ್ತವೆ. ಅಂತಹ ಪ್ಯಾನ್ ಸಂಖ್ಯೆ ಬಳಸಿ ಮಾರ್ಚ್ 31ರವರೆಗೆ ಆದಾಯ ವಿವರ ಸಲ್ಲಿಸಬಹುದು, ತೆರಿಗೆ ರೀಫಂಡ್ ಪಡೆದುಕೊಳ್ಳಬಹುದು. 2023ರ ಮಾರ್ಚ್ 31ರವರೆಗೂ ಜೋಡಣೆ ಮಾಡದೆ ಇದ್ದರೆ, ಪ್ಯಾನ್ ಸಂಖ್ಯೆ ನಿಷ್ಕ್ರಿಯವಾಗುತ್ತದೆ.

**2) ಕೋರಿಕೆ ಇಲ್ಲದೆ ಕ್ರೆಡಿಟ್ ಕಾರ್ಡ್:** ಗ್ರಾಹಕರಿಂದ ಕೋರಿಕೆ ಇಲ್ಲದಿದ್ದರೆ ಕ್ರೆಡಿಟ್ ಕಾರ್ಡ್ ನೀಡಬಾರದು, ಗ್ರಾಹಕರಿಂದ ಒಪ್ಪಿಗೆ ಪಡೆಯದೆ ಹಾಲಿ ಇರುವ ಕ್ರೆಡಿಟ್ ಕಾರ್ಡ್‌ಗಳನ್ನು ಮೇಲ್ದರ್ಜೆಗೆ ಏರಿಸಬಾರದು ಎಂದು ಭಾರತೀಯ ರಿಸರ್ವ್ ಬ್ಯಾಂಕ್ ನೀಡಿರುವ ಸೂಚನೆಯು ಜುಲೈ 1ರಿಂದ ಜಾರಿಗೆ ಬರಲಿದೆ.




ಈ ಸೂಚನೆ ಉಲ್ಲಂಘಿಸಿದರೆ ಕಂಪನಿಗಳು, ಕ್ರೆಡಿಟ್ ಕಾರ್ಡ್ ಬಿಲ್ ಮೊತ್ತದ ಎರಡರಷ್ಟನ್ನು ದಂಡದ ರೂಪದಲ್ಲಿ ಪಾವತಿಸಬೇಕು ಎಂದು ಆರ್‌ಬಿಐ ಹೇಳಿದೆ. ಬಾಕಿ ಮೊತ್ತ ವಸೂಲು ಮಾಡುವ ಸಂದರ್ಭದಲ್ಲಿ ಗ್ರಾಹಕರಿಗೆ ಬೆದರಿಕೆ ಒಡ್ಡಬಾರದು, ಅವರಿಗೆ ಕಿರುಕುಳ ನೀಡಬಾರದು ಎಂದು ಕಾರ್ಡ್ ವಿತರಣಾ ಕಂಪನಿಗಳಿಗೆ ಹಾಗೂ ಮಧ್ಯವರ್ತಿಯಾಗಿ ಕೆಲಸ ಮಾಡುವ ಏಜೆಂಟ್‌ಗಳಿಗೆ ತಾಕೀತು ಮಾಡಿದೆ.

**3) ಕ್ರಿಪ್ಟೊ ಟಿಡಿಎಸ್:** ಕ್ರಿಪ್ಟೊಕರೆನ್ಸಿ ವಹಿವಾಟುಗಳಿಗೆ ಸಂಬಂಧಿಸಿದಂತೆ ಶೇಕಡ 1ರಷ್ಟು ತೆರಿಗೆಯನ್ನು ಮೂಲದಲ್ಲೇ ಕಡಿತ ಮಾಡಿಕೊಳ್ಳಬೇಕು ಎಂಬ ನಿಯಮವು ಜುಲೈ 1ರಿಂದ ಜಾರಿಗೆ ಬರಲಿದೆ.



**4) ಉಡುಗೊರೆಗೆ ಟಿಡಿಎಸ್:** ಕೇಂದ್ರ ಸರ್ಕಾರವು ಬಜೆಟ್ ಸಂದರ್ಭದಲ್ಲಿ ಆದಾಯ ತೆರಿಗೆ ಕಾಯ್ದೆಯಲ್ಲಿ ಬದಲಾವಣೆಯೊಂದನ್ನು ತಂದಿದೆ. ಸೆಕ್ಷನ್ 194(ಆರ್) ಅನ್ವಯ, ಒಂದು ವರ್ಷದಲ್ಲಿ ₹ 20 ಸಾವಿರಕ್ಕಿಂತ ಹೆಚ್ಚಿನ ಮೌಲ್ಯದ ಉಡುಗೊರೆಯನ್ನು ಅಥವಾ ಸೌಲಭ್ಯವನ್ನು ಯಾವುದೇ ವೃತ್ತಿ ಅಥವಾ ವಹಿವಾಟಿನಲ್ಲಿ ತೊಡಗಿದ್ದವನಿಗೆ ನೀಡಿದರೆ ಅದಕ್ಕೆ ಶೇ 10ರಷ್ಟು ಟಿಡಿಎಸ್ ಅನ್ವಯ ಆಗುತ್ತದೆ. ಈ ಉಡುಗೊರೆ ಅಥವಾ ಸೌಲಭ್ಯವು ಅದನ್ನು ಪಡೆದುಕೊಳ್ಳುತ್ತಿರುವ ವ್ಯಕ್ತಿಗೆ ಅವನ ವೃತ್ತಿಯ ಕಾರಣದಿಂದಾಗಿ ಸಿಕ್ಕಿದ್ದಾಗಿರಬೇಕು ಎಂದು ಸೆಕ್ಷನ್ ಹೇಳುತ್ತದೆ. ಈ ನಿಯಮವು ಜುಲೈ 1ರಿಂದ ಜಾರಿಗೆ ಬರಲಿದೆ.

**ಮುಂಬೈ ಧಾರಣೆ**

**ಶೇಂಗಾ**

30-6-2022

| | |
|---|---|
| ಜಾವಾ 70/80(ಹೊಸ) | 10800-10850 |
| ಜಾವಾ 80/90(ಹೊಸ) | 10400-10450 |
| ದಪ್ಪ ಮಧ್ಯಪ್ರದೇಶ(ಹೊಸ) | 10100-10200 |
| ದಪ್ಪ ಗುಜರಾತ್(ಹೊಸ) | 10850-10950 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1610 (1600) |
| ಒಂದು ವಾರದ ಡೆಲಿವರಿ | 1605 (1595) |
| ಸೋಯಾ ಕಚ್ಚಾ | 1300 (1300) |
| ಪಾಮ್ ವಾರದ ಡೆಲಿವರಿ | 1283 (1573) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1620 (1600) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
50,550 (50,850)
ಬೆಳ್ಳಿ ಕೆ.ಜಿ 58,750 (59,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

**ದೇಶದಾದ್ಯಂತ ಮಾರುಕಟ್ಟೆ ಧಾರಣೆ**

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 400-420 |
| ನಡುಗೋಲು | 450-480 |
| ರಾಶಿ | 500-520 |
| ರಾಶಿ ಉತ್ತಮ | 550-600 |
| ಜರಡಿ | 600-650 |
| ಹೆರಕಿದ್ದು | 1000-1100 |
| ಹಸಿರು ಸಾಧಾರಣ | 600-700 |
| ಹಸಿರು ಉತ್ತಮ | 900-1000 |
| ಹಸಿರು ಅತಿ ಉತ್ತಮ | 1150-1250 |
| ಕಾಳು ಮೆಣಸು | 475 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12500-25000 |
| ಹೊಸತು | 27500-45000 |
| ಹಳತು | 46000-54500 |
| **ಚಿತ್ರದುರ್ಗ** | |
| ಆಪಿ | 49639-50069 |
| ಬೆಟ್ಟೆ | 39019-39479 |
| ಕೆಂಪುಗೋಟು | 29000-29400 |
| ರಾಶಿ | 49129-49559 |
| **ಕುಮಟ** | |
| ಚಿಪ್ಪು | 25209-30969 |
| ಕೋಕ | 14000-29300 |
| ಹೊಸಚಾಲಿ | 34199-39269 |
| **ಪುತ್ತೂರು** | |
| ಕೋಕ | 11000-26000 |
| ಹೊಸತು | 30500-43000 |
| **ಶಿವಮೊಗ್ಗ** | |
| ಬೆಟ್ಟೆ | 50029-53179 |
| ಗೊರಬಲು | 20369-38099 |
| ರಾಶಿ | 43000-49606 |
| **ಸಿದ್ದಾಪುರ** | |
| ಬಿಳಿಗೋಟು | 25699-31312 |
| ಚಾಲಿ | 34699-38399 |
| ಕೋಕ | 21600-31669 |
| ಕೆಂಪುಗೋಟು | 30099-31109 |
| ರಾಶಿ | 47799-48509 |
| ತಟ್ಟಿಬೆಟ್ಟೆ | 37519-46099 |
| **ಶಿರಸಿ** | |
| ಬೆಟ್ಟೆ | 34110-45099 |
| ಬಿಳಿಗೋಟು | 22509-32649 |
| ಚಾಲಿ | 35618-39132 |
| ರಾಶಿ | 31909-48699 |
| **ಯಲ್ಲಾಪುರ** | |
| ಬಿಳಿಗೋಟು | 26899-32812 |
| ಚಾಲಿ | 35030-39299 |
| ಕೋಕ | 18218-28612 |
| ಕೆಂಪುಗೋಟು | 30742-34509 |
| ರಾಶಿ | 46050-51209 |
| ತಟ್ಟಿಬೆಟ್ಟೆ | 41699-45613 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 16200 | 15750 | 15700 | 217.75 ಸೆಂಟ್ಸ್ |
| ಎಸಿ | 9100 | 8400 | 8650 | |
| ಆರ್‌ಪಿ | 9600 | 9500 | 9900 | ಲಂಡನ್ |
| ಆರ್‌ಸಿ | 4800 | 4400 | 4575 | 2017 ಡಾಲರ್ಸ್ |

# ಮಾರುತಿಯ ಹೊಸ ಬ್ರೆಜಾ ಬಿಡುಗಡೆ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ತನ್ನ ಕಾಂಪ್ಯಾಕ್ಟ್ ಎಸ್‌ಯುವಿ 'ಬ್ರೆಜಾ'ದ ಹೊಸ ಆವೃತ್ತಿಯನ್ನು ಗುರುವಾರ ಬಿಡುಗಡೆ ಮಾಡಿದೆ. ಇದರ ಎಕ್ಸ್ ಷೋರೂಂ ಬೆಲೆ ₹ 7.99 ಲಕ್ಷದಿಂದ ಆರಂಭವಾಗುತ್ತದೆ.

'ಬ್ರೆಜಾ' ಮೂಲಕ ಎಸ್‌ಯುವಿ ಮಾರುಕಟ್ಟೆಯಲ್ಲಿ ತನ್ನ ಪಾಲನ್ನು ಹೆಚ್ಚಿಸಿಕೊಳ್ಳುವ ಉದ್ದೇಶವನ್ನು ಮಾರುತಿ ಸುಜುಕಿ ಹೊಂದಿದೆ. ಎರಡನೆಯ ತಲೆಮಾರಿನ ಬ್ರೆಜಾ ವಾಹನವು ಮ್ಯಾನುವಲ್ ಹಾಗೂ ಆಟೊಮ್ಯಾಟಿಕ್ ಟ್ರಾನ್ಸ್‌ಮಿಷನ್ ಆಯ್ಕೆಗಳಲ್ಲಿ ಲಭ್ಯವಿರಲಿದೆ.

1.5 ಲೀಟರ್ ಸಾಮರ್ಥ್ಯದ ಕೆ–ಸರಣಿಯ ಪೆಟ್ರೋಲ್ ಎಂಜಿನ್ ಹೊಸ ಬ್ರೆಜಾದಲ್ಲಿ ಇದೆ. ಸ್ಮಾರ್ಟ್ ಹೈಬ್ರಿಡ್ ತಂತ್ರಜ್ಞಾನ ಇದರಲ್ಲಿದ್ದು, ಇಂಧನ ದಕ್ಷತೆಯು ಪ್ರತಿ ಲೀಟರ್‌ಗೆ 20.15 ಕಿ.ಮೀ. ಇದೆ ಎಂದು ಕಂಪನಿ ಹೇಳಿದೆ.

ಆರು ಏರ್‌ಬ್ಯಾಗ್‌ಗಳು ಸೇರಿ ಸುರಕ್ಷತೆಗೆ ಸಂಬಂಧಿಸಿದಂತೆ ಒಟ್ಟು 20 ಸೌಲಭ್ಯಗಳನ್ನು ಇದು ಹೊಂದಿದೆ. 2021–22ನೆಯ ಆರ್ಥಿಕ ವರ್ಷದಲ್ಲಿ ದೇಶದ ಪ್ರಯಾಣಿಕ ವಾಹನ ಮಾರುಕಟ್ಟೆಯಲ್ಲಿ ಶೇ 43.4ರಷ್ಟು ಪಾಲು ಹೊಂದಿತ್ತು.




ಗುರುಗ್ರಾಮದಲ್ಲಿ ಗುರುವಾರ ನಡೆದ 'ಬ್ರೆಜಾ' ಬಿಡುಗಡೆ ಕಾರ್ಯಕ್ರಮದಲ್ಲಿ ಮಾರುತಿ ಸುಜುಕಿ ಸಿಇಒ ಹಿಸಾಶಿ ಟೇಕುಚಿ ಮತ್ತು ಹಿರಿಯ ಕಾರ್ಯನಿರ್ವಾಹಕ ನಿರ್ದೇಶಕ (ಮಾರುಕಟ್ಟೆ ಮತ್ತು ಮಾರಾಟ ವಿಭಾಗ) ಶಶಾಂಕ್ ಶ್ರೀವಾಸ್ತವ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

# ಮೂಲಸೌಕರ್ಯ: ಶೇ 18.1 ಬೆಳವಣಿಗೆ

ನವದೆಹಲಿ (ಪಿಟಿಐ): ಪ್ರಮುಖ ಎಂಟು ಮೂಲಸೌಕರ್ಯ ವಲಯಗಳು ಮೇ ತಿಂಗಳಿನಲ್ಲಿ ಶೇಕಡ 18.1ರಷ್ಟು ಬೆಳವಣಿಗೆ ಕಂಡಿವೆ. ಇವು ಕಳೆದ ವರ್ಷದ ಮೇ ತಿಂಗಳಲ್ಲಿ ಶೇ 16.4ರಷ್ಟು ಬೆಳವಣಿಗೆ ಕಂಡಿದ್ದವು.

ಕಲ್ಲಿದ್ದಲು, ಕಚ್ಚಾತೈಲ, ನೈಸರ್ಗಿಕ ಅನಿಲ, ಸಂಸ್ಕರಣಾ ಘಟಕಗಳಿಂದ ಬರುವ ಉತ್ಪನ್ನಗಳು, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ವಲಯಗಳ ಉತ್ಪಾದನೆಯು 2022ರ ಏಪ್ರಿಲ್‌ನಲ್ಲಿ ಶೇ 9.3ರಷ್ಟು ಇತ್ತು.

2022–23ರ ಏಪ್ರಿಲ್–ಮೇ ಅವಧಿಯಲ್ಲಿ ಈ ವಲಯಗಳ ಬೆಳವಣಿಗೆಯು ಶೇ 13.6ರಷ್ಟು ಆಗಿದೆ. 2021–22ರ ಇದೇ ಅವಧಿಯಲ್ಲಿ ಆಗಿದ್ದ ಶೇ 36.3ರಷ್ಟು ಬೆಳವಣಿಗೆಗೆ ಹೋಲಿಸಿದರೆ ಈ ಬಾರಿ ಇಳಿಕೆ ಕಂಡುಬಂದಿದೆ.



ಎಚ್‌.ಎಸ್.ಪ್ರಣಯ್ –ಸಂಗ್ರಹ ಚಿತ್ರ

# ಕ್ವಾರ್ಟರ್‌ಫೈನಲ್‌ಗೆ ಸಿಂಧು, ಪ್ರಣಯ್

ಕ್ವಾಲಾಲಂಪುರ (ಪಿಟಿಐ): ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ.ಸಿಂಧು ಮತ್ತು ಎಚ್.ಎಸ್.ಪ್ರಣಯ್ ಅವರು ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಸಿಂಧು 19-21 21-9 21-14 ರಲ್ಲಿ ಥಾಯ್ಲೆಂಡ್‌ನ ಫಿತಯಪರ್ನ್ ಚಾಯ್ವಾನ್ ಅವರನ್ನು ಮಣಿಸಿದರು. ಮೊದಲ ಗೇಮ್ ಸೋತ ಸಿಂಧು, ಮರುಹೋರಾಟ ನಡೆಸಿ 57 ನಿಮಿಷಗಳಲ್ಲಿ ಗೆದ್ದರು.

ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಆಕರ್ಷಕ ಆಟ ಪ್ರದರ್ಶಿಸಿದರ ಪ್ರಣಯ್ 21-15 21-7 ರಲ್ಲಿ ಚೀನಾ ತೈಪೆಯ ಚೌ ತಿಯೆನ್ ಚೆನ್ ವಿರುದ್ಧ ಗೆದ್ದರು.

**ಕಶ್ಯಪ್ ಪರಾಭವ:** ಪಿ.ಕಶ್ಯಪ್ ಅವರು ಪುರುಷರ ಸಿಂಗಲ್ಸ್ ವಿಭಾಗದ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಸೋಲು ಅನುಭವಿಸಿದರು. ಥಾಯ್ಲೆಂಡ್‌ನ ವಿತಿಸರನ್ ಕುನ್ಲಾವತ್ 21–19, 21–10 ರಲ್ಲಿ ಭಾರತದ ಆಟಗಾರನಿಗೆ ಆಘಾತ ನೀಡಿದರು.

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಮತ್ತು ಚಿರಾಗ್ ಶೆಟ್ಟಿ ಹಿಂದೆ ಸರಿದರು. ಸಾತ್ವಿಕ್ ಗಾಯಗೊಂಡಿರುವ ಕಾರಣ ಭಾರತದ ಜೋಡಿ ಹಿಂದೆ ಸರಿಯಿತು.

# ಬಿಎಐ: ಸಮಿತಿ ನೇಮಕ

ನವದೆಹಲಿ (ಪಿಟಿಐ): ರಾಷ್ಟ್ರೀಯ ಜೂನಿಯರ್ ಬ್ಯಾಡ್ಮಿಂಟನ್ ಟೂರ್ನಿಗಳಲ್ಲಿ ಸ್ಪರ್ಧಿಗಳು ವಯಸ್ಸಿನ ಕುರಿತು ತಪ್ಪು ಮಾಹಿತಿ ನೀಡಿದ ದೂರುಗಳ ಬಗ್ಗೆ ತನಿಖೆಗೆ ಸಮಿತಿಯನ್ನು ನೇಮಿಸಲು ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ತೀರ್ಮಾನಿಸಿದೆ.

ಜೂನ್ 19 ರಿಂದ 25ರ ವರೆಗೆ ಹೈದರಾಬಾದ್‌ನಲ್ಲಿ ನಡೆದ 13 ವರ್ಷದೊಳಗಿನವರ ರಾಷ್ಟ್ರೀಯ ಸಬ್ ಜೂನಿಯರ್ ಟೂರ್ನಿ ಮತ್ತು ಮೊಹಾಲಿಯಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಕೆಲವರು ವಯಸ್ಸಿನ ಬಗ್ಗೆ ಸುಳ್ಳು ಮಾಹಿತಿ ನೀಡಿ ಪಾಲ್ಗೊಂಡಿದ್ದಾರೆ ಎಂದು ಆರೋಪ ಕೇಳಿಬಂದಿದೆ.

‘ಸಮಗ್ರ ತನಿಖೆ ನಡೆಸಲಾಗುವುದು. ತಪ್ಪು ಸಾಬೀತಾದರೆ ಅವರ ಮೇಲೆ 2 – 3 ವರ್ಷ ನಿಷೇಧ ಹೇರಲಾಗುವುದು’ ಎಂದು ಬಿಎಐ ಕಾರ್ಯದರ್ಶಿ ಸಂಜಯ್ ಮಿಶ್ರಾ ತಿಳಿಸಿದರು.





### ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿ: ಮೂರನೇ ಸುತ್ತಿಗೆ ಅಮೆರಿಕದ ಇಸ್ನರ್

# ಆ್ಯಂಡಿ ಮರೆಗೆ ಆಘಾತ; ಕ್ವಿಟೊವಾ ಮುನ್ನಡೆ

ಲಂಡನ್ (ರಾಯಿಟರ್ಸ್, ಎಪಿ): ಆಲ್ ಇಂಗ್ಲೆಂಡ್ ಕ್ಲಬ್‌ನ ಸೆಂಟರ್ ಕೋರ್ಟ್‌ನಲ್ಲಿ ಬುಧವಾರ ರಾತ್ರಿ ‘ಕಮಾನ್ ಆ್ಯಂಡಿ... ಕಮಾನ್’ ಎಂಬ ಕೂಗು ಮೇಲಿಂದ ಮೇಲೆ ಮೊಳಗಿದರೂ, ಆ್ಯಂಡಿ ಮರೆಗೆ ಗೆಲುವು ಒಲಿಯಲಿಲ್ಲ.

ಎರಡು ಬಾರಿಯ ಚಾಂಪಿಯನ್ ಮರೆ, ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನಲ್ಲಿ ಸೋತು ಹೊರಬಿದ್ದರು.

ಬಿರುಸಿನ ಸರ್ವ್‌ಗಳಿಗೆ ಹೆಸರು ಪಡೆದಿರುವ ಅಮೆರಿಕದ ಆಟಗಾರ ಜಾನ್ ಇಸ್ನರ್ 6-4, 7-6 (4), 6-7 (3), 6-4 ರಲ್ಲಿ ಮರೆಗೆ ಆಘಾತ ನೀಡಿದರು. 6 ಅಡಿ 10 ಇಂಚು ಎತ್ತರದ ಇಸ್ನರ್ 36 ಏಸ್‌ಗಳ ಮೂಲಕ ಎದುರಾಳಿಯನ್ನು ನಿಬ್ಬೆರಗಾಗಿಸಿದರು.

ಸುಮಾರು ಮೂರೂವರೆ ಗಂಟೆ ನಡೆದ ಹಣಾಹಣಿಯಲ್ಲಿ ಮೊದಲ ಎರಡು ಸೆಟ್ ಗೆದ್ದುಕೊಂಡ ಇಸ್ನರ್ ಎದುರಾಳಿಯ ಮೇಲೆ ಒತ್ತಡ ಹೇರುವಲ್ಲಿ ಯಶಸ್ವಿಯಾದರು. ಮೂರನೇ ಸೆಟ್ ಟೈಬ್ರೇಕರ್‌ನಲ್ಲಿ ಗೆದ್ದ ಮರೆ, ಮರುಹೋರಾಟದ ಸೂಚನೆ ನೀಡಿದರು.

ನಾಲ್ಕನೇ ಸೆಟ್‌ನಲ್ಲಿ ಆಕ್ರಮಣಕಾರಿ ಆಟ ಪ್ರದರ್ಶಿಸಿದ ಇಸ್ನರ್, ಎದುರಾಳಿಯ ಸರ್ವ್ ಬ್ರೇಕ್ ಮಾಡಿ 3–2 ರಲ್ಲಿ ಮುನ್ನಡೆ ಪಡೆದರು. ಆ ಬಳಿಕ ತಮ್ಮ ಸರ್ವ್‌ನಲ್ಲಿ ಪಾಯಿಂಟ್ ಗಿಟ್ಟಿಸಿಕೊಂಡು ಮೂರನೇ ಸುತ್ತಿಗೆ ಲಗ್ಗೆಯಿಟ್ಟರು.



ಸ್ಪೇನ್‌ನ ಪೌಲಾ ಬಡೊಸಾ ಚೆಂಡನ್ನು ರಿಟರ್ನ್ ಮಾಡಿದ ಕ್ಷಣ –ಎಎಫ್‌ಪಿ ಚಿತ್ರ

**ಕಿರ್ಗಿಯೊಸ್‌ಗೆ ಗೆಲುವು:** ಗುರುವಾರ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ ಅದ್ಭುತ ಸರ್ವ್‌ಗಳ ಪ್ರದರ್ಶನ ನೀಡಿದ ಆಸ್ಟ್ರೇಲಿಯಾದ ನಿಕ್ ಕಿರ್ಗಿಯೊಸ್ 6-2 6-3 6-1 ರಲ್ಲಿ ಸರ್ಬಿಯದ ಫಿಲಿಪ್ ಕ್ರ್ಯಾಯಿನೊವಿಚ್ ಅವರನ್ನು ಮಣಿಸಿದರು. 24 ಏಸ್‌ಗಳ ಮೂಲಕ ಮೆರೆದಾಡಿದ ಕಿರ್ಗಿಯೊಸ್ 85 ನಿಮಿಷಗಳಲ್ಲಿ ಗೆಲುವಿನ ನಗು ಬೀರಿದರು.

ಪುರುಷರ ಸಿಂಗಲ್ಸ್ ವಿಭಾಗದ ಇತರ ಪಂದ್ಯಗಳಲ್ಲಿ ಗ್ರೀಸ್‌ನ ಸ್ಟೆಫಾನೊಸ್ ಸಿಸಿಪಸ್ 6–2, 6–3, 7–5 ರಲ್ಲಿ ಆಸ್ಟ್ರೇಲಿಯದ ಜೋರ್ಡನ್ ಥಾಮಸ್ಸ್ ವಿರುದ್ಧ; ಅಮೆರಿಕದ ಟೇಲರ್ ಫ್ರಿಟ್ಜ್ 6–3, 7–6, 6–3 ರಲ್ಲಿ ಬ್ರಿಟನ್‌ನ ಅಲಸ್ಟೈರ್ ಗ್ರೇ ವಿರುದ್ಧ ಜಯ ಸಾಧಿಸಿದರು.

**ಕ್ವಿಟೊವಾ, ಬಡೊಸಾ ಜಯಭೇರಿ:** ಎರಡು ಬಾರಿಯ ಚಾಂಪಿಯನ್ ಜೆಕ್ ರಿಪಬ್ಲಿಕ್‌ನ ಪೆಟ್ರಾ ಕ್ವಿಟೊವಾ 6–1, 7–5 ರಲ್ಲಿ ರೊಮೇನಿಯದ ಅನಾ ಬೊಗ್ಡನ್ ವಿರುದ್ಧ ಗೆದ್ದರು. ಎರಡನೇ ಸೆಟ್‌ನಲ್ಲಿ 5–1 ರಲ್ಲಿ ಮುನ್ನಡೆ ಸಾಧಿಸಿದ್ದ ಕ್ವಿಟೊವಾ ಸುಲಭ ಗೆಲುವಿನ ನಿರೀಕ್ಷೆಯಲ್ಲಿದ್ದರು. ಆದರೆ ಕೊನೆಯಲ್ಲಿ ಅಲ್ಪ ಪ್ರತಿರೋಧ ಒಡ್ಡಿದ ಅನಾ, ಸೆಟ್‌ಅನ್ನು ಟೈಬ್ರೇಕರ್‌ಗೆ ಕೊಂಡೊಯ್ಯುವಲ್ಲಿ ಯಶಸ್ವಿಯಾದರು.

ನಾಲ್ಕನೇ ಶ್ರೇಯಾಂಕದ ಆಟಗಾರ್ತಿ ಸ್ಪೇನ್‌ನ ಪೌಲಾ ಬಡೊಸಾ ಅವರು 6–3, 6–2 ರಲ್ಲಿ ರೊಮೇನಿಯದ ಐರಿನಾ ಬರಾ ವಿರುದ್ಧ ಗೆದ್ದರೆ, ಫ್ರಾನ್ಸ್‌ನ ಅಲೈಜ್ ಕಾರ್ನೆಟ್ 6–3, 6–3 ರಲ್ಲಿ ಅಮೆರಿಕದ ಕ್ಲೇರ್ ಲಿಯು ಅವರನ್ನು ಮಣಿಸಿದರು.

## ಸಾನಿಯಾ-ಲೂಸಿ ಜೋಡಿಗೆ ಸೋಲು

ಭಾರತದ ಸಾನಿಯಾ ಮಿರ್ಜಾ ಮತ್ತು ಜೆಕ್ ರಿಪಬ್ಲಿಕ್‌ನ ಲೂಸಿ ಹರಡೆಸ್ಕಾ ಜೋಡಿ ಮಹಿಳೆಯರ ಡಬಲ್ಸ್ ವಿಭಾಗದ ಮೊದಲ ಸುತ್ತಿನಲ್ಲೇ ಸೋಲು ಅನುಭವಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಪೋಲೆಂಡ್‌ನ ಮ್ಯಾಗ್ಡಲೆನಾ ಫ್ರೆಚ್ ಮತ್ತು ಬ್ರೆಜಿಲ್‌ನ ಬೆಟ್ರೋಜ್ ಹದದ್ 4–6, 6–4, 6–2 ರಲ್ಲಿ ಸಾನಿಯಾ ಜೋಡಿಯನ್ನು ಮಣಿಸಿತು.

ಮಿಶ್ರ ಡಬಲ್ಸ್‌ನಲ್ಲಿ ಸಾನಿಯಾ ಅವರು ಕ್ರೊಯೇಷ್ಯದ ಮಾಟೆ ಪಾವಿಚ್ ಜತೆ ಆಡಲಿದ್ದು, ಮೊದಲ ಸುತ್ತಿನಲ್ಲಿ ನಟೇಲಾ ಜಲ್ಮಿಜ್- ಡೇವಿಡ್ ವೆಗಾ ಹೆರ್ನಾಂಡೆಸ್ ಜೋಡಿಯನ್ನು ಎದುರಿಸುವರು.

# ಟಿಟಿ: ಸಮರ್ಥ್, ಯಶಸ್ವಿನಿಗೆ ಪ್ರಶಸ್ತಿ

ಬೆಂಗಳೂರು: ಬ್ಯಾಂಕ್ ಆಫ್ ಬರೋಡಾದ ಸಮರ್ಥ್ ಕುರಡಿಕೇರಿ ಮತ್ತು ಎಸ್‌ಕೆಯಿಎಸ್‌ನ ಯಶಸ್ವಿನಿ ಘೋರ್ಪಡೆ ಇಲ್ಲಿ ನಡೆಯುತ್ತಿರುವ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷ ಹಾಗೂ ಮಹಿಳೆಯರ ವಿಭಾಗದ ಪ್ರಶಸ್ತಿ ಜಯಿಸಿದರು.

ಗುರುವಾರ ನಡೆದ ಪುರುಷರ ವಿಭಾಗದ ಫೈನಲ್‌ನಲ್ಲಿ ಸಮರ್ಥ್ 11-9, 7-11,11-9, 11-5, 11-7ರಿಂದ ಪಿ.ವಿ. ಶ್ರೀಕಾಂತ್ ಕಶ್ಯಪ್ ವಿರುದ್ಧ ಜಯಿಸಿದರು.

ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ಯಶಸ್ವಿನಿ ಘೋರ್ಪಡೆ 8-11, 11-5, 11-8, 11-7, 11-8ರಿಂದ ಎ. ಸಂಯುಕ್ತಾ ವಿರುದ್ಧ ಗೆದ್ದರು.

ಸೆಮಿಫೈನಲ್‌ನಲ್ಲಿ ಯಶಸ್ವಿನಿ, ಅನರ್ಘ್ಯಾ ವಿರುದ್ಧ; ಸಂಯುಕ್ತಾ, ಖುಷಿ ವಿರುದ್ಧ ಗೆದ್ದರು.



ಸಮರ್ಥ್ ಮತ್ತು ಯಶಸ್ವಿನಿ

# ಪೂವಮ್ಮಗೆ 3 ತಿಂಗಳು ನಿಷೇಧ ಶಿಕ್ಷೆ

ನವದೆಹಲಿ (ಪಿಟಿಐ): ಅಥ್ಲೀಟ್ ಎಂ.ಆರ್. ಪೂವಮ್ಮ ಅವರು ಈಚೆಗೆ ಉದ್ದೀಪನ ಮದ್ದು ಸೇವನೆ ಮಾಡಿರುವುದು ಪರೀಕ್ಷೆಯಿಂದ ದೃಢಪಟ್ಟಿದೆ. ಅವರಿಗೆ ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕವು 3 ತಿಂಗಳುಗಳ ನಿಷೇಧ ಶಿಕ್ಷೆ ವಿಧಿಸಿದೆ.

ಕರ್ನಾಟಕದ 32 ವರ್ಷದ ಪೂವಮ್ಮ ಕಳೆದ ಫೆಬ್ರುವರಿಯಲ್ಲಿ ಪಟಿಯಾಲದಲ್ಲಿ ನಡೆದಿದ್ದ ಇಂಡಿಯನ್ ಗ್ರ್ಯಾನ್‌ಪ್ರಿ ಕೂಟದಲ್ಲಿ ಭಾಗವಹಿಸಿದ್ದರು. ಅದರಲ್ಲಿ ಅವರು ಪರೀಕ್ಷೆ ನೀಡಿದ್ದ ಮಾದರಿಯಲ್ಲಿ ನಿಷೇಧಿತ ಮೆಥೈಲ್‌ಹೆಕ್ಸಾನೀಮೈನ್ ಮದ್ದಿನ ಅಂಶ ಇರುವುದು ಪತ್ತೆಯಾಗಿದೆ. ಈ ವಿಷಯವನ್ನು ಭಾರತ ಅಥ್ಲೆಟಿಕ್ಸ್ ಫೆಡರೇಷನ್ ಅಧ್ಯಕ್ಷ ಆದಿಲೆ ಸುಮರಿವಾಲಾ ದೃಢಪಡಿಸಿದ್ದಾರೆ.

‘ಕೆಲವು ದಿನಗಳ ಹಿಂದೆಯೇ ನಿಷೇಧ ಶಿಕ್ಷೆಯ ಆದೇಶವು ಬಂದಿದೆ’ ಎಂದು ಅವರು ಹೇಳಿದ್ದಾರೆ.